
# ಆರ್ಯ




## ಅಖಿಲ ಭಾರತ ಪತ್ರಿಕೆ

**ಆಗಸ್ಟ್ 2014**

ಬೆಲೆ : 15/–



*The path is long,*
*but self-surrender makes it short,*
*the way is difficult,*
*but perfect trust makes it easy.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "'ಆರ್ಯ' ಪತ್ರಿಕೆ ಕುರಿತು ವಿಶೇಷ ಸಂಚಿಕೆ"

**ಅನು : ಡಾ. ಕೆ.ಎಸ್. ಆಮೂರ**


ಪೀಠಿಕೆ 3
'ಆರ್ಯ' ಪತ್ರಿಕೆಯ ಮೊದಲ ಸಂಚಿಕೆಯ ಮುಖ ಪುಟ (photo copy) 4
The Object the Arya Set Before Itself (photo copy) 5
'ಆರ್ಯ' ಪತ್ರಿಕೆ ತನ್ನೆದುರಿಗೆ ಇರಿಸಿಕೊಂಡಿದ್ದ ಉದ್ದೇಶ 6
'ಆರ್ಯ' ಪತ್ರಿಕೆಯಲ್ಲಿರುವ ವಿಷಯಗಳು 7
ಮಾನವನ ನಿರ್ಮಾಣವಲ್ಲ, ಆದರೆ ದೈವೀ ಮಾನವನ ನಿರ್ಮಾಣ 12
ಮತಧರ್ಮ ಶಾಸ್ತ್ರ(Theology)ವೂ ಅಲ್ಲ, ಧರ್ಮವೂ ಅಲ್ಲ 13
ಮೊದಲ ಸಂಚಿಕೆಯ ಆರಂಭದ ಪತ್ರ 15
'ಆರ್ಯ' ಪತ್ರಿಕೆಯ ಪ್ರಕಟಣೆಯನ್ನು ಕುರಿತು ಎರಡನೆಯ ವರ್ಷಕ್ಕಾಗಿ ಯೋಜನೆ 15
'ಆರ್ಯ' ಪತ್ರಿಕೆಗೆ ಲೇಖನಗಳನ್ನು ಬರೆಯುವ ವಿಧಾನ 19
'ಆರ್ಯ' ಪತ್ರಿಕೆ ಕುರಿತು ಶ್ರೀ ಅರವಿಂದರು ತಮ್ಮ ಶಿಷ್ಯ ದಿಲೀಪ ಕುಮಾರ ರಾಯ್ ಅವರಿಗೆ ಬರೆದ ಪತ್ರ 21
'ಆರ್ಯ' ಪತ್ರಿಕೆಯಲ್ಲಿರುವ ವಿಷಯವನ್ನು ತಿಳಿದುಕೊಳ್ಳುವುದರಲ್ಲಿ ಕಷ್ಟವಿರುವುದಕ್ಕೆ ಕಾರಣ 22
'ಅಮೃತ'ನಿಗೆ ಶ್ರೀ ಅರವಿಂದರ ಮಾರ್ಗದರ್ಶನ 24
ಅವಶ್ಯವಾದ ಸಮನ್ವಯ 26
ಧ್ಯಾನ 27
'ಆರ್ಯ' ಶಬ್ದದ ಪ್ರಾಮುಖ್ಯತೆ 28
'ಆರ್ಯ'ದಲ್ಲಿ ಪ್ರಕಟವಾದ ಕೆಲವು ಕೃತಿಗಳನ್ನು ಕುರಿತು ಶ್ರೀ ಅರವಿಂದರ ಟಿಪ್ಪಣಿಗಳು 33


**ಅನುಬಂಧ:**

**ಅನು : ಶ್ರೀ ವೀರೇಂದ್ರ ಸಿಂಪಿ**


ಚೀನಾ ದೇಶದ ತಾವೋ(Tao) ಮತ ಸಿದ್ಧಾಂತ 38


**ಅನು : ಶ್ರೀ ಪುರುಷೋತ್ತಮ ಗಲಗಲಿ**


ತಾವೋ ಮತ ಸಿದ್ಧಾಂತ ಕುರಿತು ಶ್ರೀಮಾತೆಯವರ ಎರಡು ಉಪನ್ಯಾಸಗಳು 45
'ಶ್ರೀ ಅರೋಬಿಂದೋ' ಹೆಸರನ್ನು ಕುರಿತು ಒಂದು ಟಿಪ್ಪಣಿ 50
**ವಾರ್ತಾಪತ್ರ** 51


ನನ್ನೊಳಗೆ ಸುಪ್ತವಾಗಿದ್ದ ತತ್ವಜ್ಞಾನಿ ಮೊದಲ ನಿರ್ಣಾಯಕ ಹಂತದಲ್ಲಿ (ಎಂದರೆ ನಾನು ಕೋಲಕತ್ತಾದಲ್ಲಿದ್ದಾಗ) ಹೊರಬರುವುದರಲ್ಲಿ ವಿಫಲನಾಗಿದ್ದ – ಕೆಲವು ವರ್ಷಗಳ ಚಿಂತನಕಾಲ(incubation)ದ ನಂತರ ನಾನು 'ಆರ್ಯ' ಪತ್ರಿಕೆಗೆ ಬರೆಯಲು ಪ್ರಾರಂಭಿಸಿದ ಕೂಡಲೆ ಜ್ವಾಲಾಮುಖಿಯ ಹಾಗೆ ಹೊರಹೊಮ್ಮಿ ಬಂದ.

**(CWSA, 35/63)** – ಶ್ರೀ ಅರವಿಂದರು

## ‘ಆರ್ಯ’ ಪತ್ರಿಕೆ ಕುರಿತು ವಿಶೇಷ ಸಂಚಿಕೆ

### ಪೀಠಿಕೆ

ನೂರು ವರ್ಷಗಳ ಹಿಂದೆ ಅಗಸ್ಟ 15, 1914 ರಂದು ಶ್ರೀ ಅರವಿಂದರ ನಲವತ್ತೆರಡನೆಯ ಜನ್ಮದಿನವಿತ್ತು, ಆ ದಿನದಂದು ‘ಆರ್ಯ’ ಪತ್ರಿಕೆಯ ಮೊದಲ ಸಂಚಿಕೆಯು ಅದರ ಪ್ರತಿರೂಪವಾದ ಫ್ರೆಂಚ್ ಭಾಷೆಯಲ್ಲಿದ್ದ “Revue de Grande Synthese” (ಶ್ರೇಷ್ಠ ಸಮನ್ವಯದ ಪುನರ್ವಿಮರ್ಶೆ) ದೊಂದಿಗೆ ಪಾಂಡಿಚೇರಿಯಲ್ಲಿ ಪ್ರಕಟವಾಯಿತು. ಅದು ಮಾಸಿಕ ಪತ್ರಿಕೆಯಾಗಿದ್ದು ಓದುಗರಿಗೆ ಸಮನ್ವಯ ರೂಪದ ತಾತ್ವಿಕ ಪುನರ್ವಿಮರ್ಶೆಯನ್ನು ಅನುಭವದ ಆಧಾರದ ಮೇಲೆ ಕೊಡುವುದಾಗಿತ್ತು.

ಅದರಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳಲ್ಲಿ ಹೆಚ್ಚಿನವನ್ನು ಶ್ರೀ ಅರವಿಂದರೇ ಬರೆಯುತ್ತಿದ್ದರು. ಶ್ರೀಮಾತೆಯವರು ಆ ಲೇಖನಗಳನ್ನು ಫ್ರೆಂಚ್ ಭಾಷೆಯಲ್ಲಿ ಅನುವಾದ ಮಾಡುವ ಹಾಗೂ ಪತ್ರಿಕೆಯ ಪ್ರಕಟಣೆ ಕುರಿತು ಚಂದಾದಾರರ ಯಾದಿ ತಯಾರಿಸುವ, ಸಂಬಂಧಿಸಿದ ಲೆಕ್ಕಪತ್ರ ತಯಾರಿಸುವ ಜವಾಬ್ದಾರಿ ವಹಿಸಿದ್ದರು. ‘ಆರ್ಯ’ ಪತ್ರಿಕೆಯ ಮುದ್ರಣವನ್ನು ಮಾಡರ್ನ್ ಪ್ರೆಸ್, ಪಾಂಡಿಚೇರಿ ಮಾಡುತ್ತಿತ್ತು ಮತ್ತು ಅದರ ಪ್ರಕಟಣೆ ರಿಚರ್ಡ ದಂಪತಿಗಳು ವಾಸಿಸುತ್ತಿದ್ದ 7 ರು, ಡುಪ್ಲೆಕ್ಸ (Rue Duplex) ದಲ್ಲಿದ್ದ ಮನೆಯಿಂದ ಆಗುತ್ತಿತ್ತು. ‘ಆರ್ಯ’ ಪತ್ರಿಕೆ ಹಾಗೂ ಫ್ರೆಂಚ್ ಭಾಷೆಯಲ್ಲಿ ಅದರ ಅನುವಾದ ಇವೆರಡರ ಸಂಪಾದಕೀಯ ಕಾರ್ಯದ ಕಚೇರಿ ಶ್ರೀ ಅರವಿಂದರು ವಾಸಿಸುತ್ತಿದ್ದ ರು ಫ್ರಾನ್ಸಿಸ್ ಮಾರ್ಟಿನ್ (Rue Francis Martin) ದಲ್ಲಿದ್ದ ಮನೆಯ ನೆಲಮಹಡಿಯಲ್ಲಿತ್ತು.


‘ಆರ್ಯ’ ಪತ್ರಿಕೆ ಕ್ರಮಬದ್ಧವಾಗಿ ಪ್ರತಿ ತಿಂಗಳಿಗೊಂದು ಸಂಚಿಕೆಯಂತೆ ಆರೂವರೆ ವರ್ಷಗಳ ಕಾಲ ಎಂದರೆ ಅಗಸ್ಟ 1914 ರಿಂದ ಜನೆವರಿ 1921 ರ ವರೆಗೆ ಪ್ರಕಟವಾಗುತ್ತ ಹೋಯಿತು. ಅದರಲ್ಲಿ ಏಕಕಾಲಕ್ಕೆ ಹಲವಾರು ವಿಷಯ ವಸ್ತು (theme) ಗಳನ್ನು ಧಾರಾವಾಹಿಯ ರೂಪದಲ್ಲಿ ನಿರೂಪಿಸಲಾಗಿತ್ತು. ಶ್ರೀ ಅರವಿಂದರ ಕೃತಿಗಳಲ್ಲಿ ಬಹಳಷ್ಟು ಎಂದರೆ ದಿವ್ಯ ಜೀವನ (Life Divine), ವೇದ ರಹಸ್ಯ (The Secret of Veda), ಯೋಗ ಸಮನ್ವಯ (Synthesis of Yoga), ಗೀತಾಪ್ರಬಂಧಗಳು (Essays on Gita) ಇತ್ಯಾದಿ ಇವೆಲ್ಲವೂ ಧಾರಾವಾಹಿ ರೂಪದಲ್ಲಿ ಪ್ರಕಟವಾದವು. ಈಗ ಅವು ಪ್ರತ್ಯೇಕ ಗ್ರಂಥಗಳ ರೂಪದಲ್ಲಿ ಲಭ್ಯವಿವೆ.



ಶ್ರೀ ಅರವಿಂದರು ಮನುಕುಲಕ್ಕೆ ಹಾಗೂ ಪೃಥ್ವಿಗೆ ‘ಆರ್ಯ’ ಪತ್ರಿಕೆಯ ರೂಪದಲ್ಲಿ ನೀಡಿದ ಅಪೂರ್ವ ಕಾಣಿಕೆಯನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತ ಈ ತಿಂಗಳಲ್ಲಿ ಆ ಪತ್ರಿಕೆಯ ಶತಮಾನೋತ್ಸವವನ್ನು ಆಚರಿಸಲಾಗುವುದು.

*

**‘ಆರ್ಯ’ ಪತ್ರಿಕೆಯ ಮೊದಲ ಸಂಚಿಕೆಯ ಮುಖ ಪುಟ** (photo copy)


No 1

आर्य

A PHILOSOPHICAL REVIEW

(English Edition of the "Revue de Grande Synthèse.")

Editors :

SRI AUROBINDO GHOSE — PAUL & MIRRA RICHARD.

15th August 1914

7, Rue Dupleix, Pondicherry,
INDIA.

MODERN PRESS, PONDICHERRY.

*

# **The Object the Arya Set Before Itself** (photo copy)

## The Object the *Arya* Set Before Itself

*The "ARYA" is a Review of pure philosophy.*

*The object which it has set before itself is twofold :—*

*1. A systematic study of the highest problems of existence ;*

*2. The formation of a vast Synthesis of knowledge, harmonising the diverse religious traditions of humanity occidental as well as oriental. Its method will be that of a realism, at once rational and transcendental,—a realism consisting in the unification of intellectual and scientific discipline with those of intuitive experience.*

*This Review will also serve as an organ for the various groups and societies founded on its inspiration.*

---

The Review will publish :—

**Synthetic studies in speculative Philosophy.**
**Translations and commentaries of ancient texts.**
**Studies in Comparative Religion.**
**Practical methods of inner culture and self development.**

*

## The Contents of the First Issue of the *Arya*

THE LIFE DIVINE..........................Aurobindo Ghose.
THE WHEREFORE OF THE WORLDS .........Paul Richard.
THE SECRET OF THE VEDA..................... A. G.
a.) The Problem and its Solution.
b.) Selected Hymns.
ANNOTATED TEXTS : Isha Upanishad...... A. G.
THE SYNTHESIS OF YOGA........................ A. G.
THE ETERNAL WISDOM:........................ P. R.
VARIETIES: The Soul of a Plant.
THE QUESTION OF THE MONTH.
THE NEWS OF THE MONTH.

(Photo-copy) CWSA 13: 98

*



# ‘ಆರ್ಯ’ ಪತ್ರಿಕೆ ತನ್ನೆದುರಿಗೆ ಇರಿಸಿಕೊಂಡಿದ್ದ ಉದ್ದೇಶ

‘ಆರ್ಯ’ದಲ್ಲಿ ಪರಿಶುದ್ಧ ತತ್ವಜ್ಞಾನದ ಪುನರ್ವಿಮರ್ಶೆಯಿರುತ್ತದೆ.

ಅದು ತನ್ನೆದುರಿಗೆ ಇರಿಸಿಕೊಂಡ ಉದ್ದೇಶ ಎರಡು ಬಗೆಯದಾಗಿದೆ.

1. ಅಸ್ತಿತ್ವದ ಅತ್ಯುಚ್ಚ ಸಮಸ್ಯೆಗಳನ್ನು ಕುರಿತು ಕ್ರಮಬದ್ಧವಾದ ಅಭ್ಯಾಸ ಮಾಡುವುದು.

2. ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ದೇಶಗಳಲ್ಲಿಯ ಮನುಕುಲದ ವೈವಿಧ್ಯಮಯ ಧಾರ್ಮಿಕ ಸಂಪ್ರದಾಯಗಳನ್ನು ಸಾಮರಸ್ಯದಲ್ಲಿರಿಸುವ ಜ್ಞಾನದ ವಿಶಾಲ ಸಮನ್ವಯವನ್ನು ರೂಪಿಸುವುದು. ಅದರ ವಿಧಾನ ವಾಸ್ತವಿಕತೆಯದು, ಒಮ್ಮೆಗೆ ತರ್ಕಬದ್ಧವಾದದ್ದು ಹಾಗೂ ವಿಶ್ವಾತೀತವಾದದ್ದು – ಆ ವಾಸ್ತವಿಕತೆ ಬೌದ್ಧಿಕ ಮತ್ತು ವೈಜ್ಞಾನಿಕ ಶಿಸ್ತುಪಾಲನೆಗಳನ್ನು ಅಂತರ್ಬೋಧೆಯ ಅನುಭವದಿಂದ ಬಂದ ಶಿಸ್ತುಪಾಲನೆಯೊಡನೆ ಏಕಗೊಳಿಸುವುದರಲ್ಲಿದೆ.

ತನ್ನ ಸ್ಫೂರ್ತಿಯಿಂದ ಸ್ಥಾಪಿತಗೊಂಡ ವಿವಿಧ ಗುಂಪುಗಳಿಗೆ ಇಲ್ಲವೆ ಸಮಾಜಗಳಿಗೆ ಒಂದು ಅಂಗದ ರೂಪದಲ್ಲಿ ಈ ಪುನರ್ವಿಮರ್ಶೆ ಸೇವೆ ಸಲ್ಲಿಸುವುದು.

-----

ಈ ಪುನರ್ವಿಮರ್ಶೆ ಪ್ರಕಟಿಸಲಿರುವ ವಿಷಯಗಳು ಹೀಗಿವೆ:

ಊಹನಾತ್ಮಕ(speculative) ತತ್ವಜ್ಞಾನದಲ್ಲಿ ಸಮನ್ವಯ ಕಂಡುಕೊಳ್ಳುವುದರ ಅಭ್ಯಾಸ

ಪ್ರಾಚೀನ ಕಾಲದ ಪಠ್ಯಗಳ ಅನುವಾದ ಮತ್ತು ವಿಮರ್ಶೆ

ತುಲನಾತ್ಮಕ ಧರ್ಮ ಕುರಿತು ಅಭ್ಯಾಸ

ಆಂತರಿಕ ಸಂಸ್ಕಾರದ ಮತ್ತು ಆತ್ಮಾಭಿವೃದ್ಧಿಯ ವ್ಯಾವಹಾರಿಕ ವಿಧಾನಗಳು.

*

## 'ಆರ್ಯ' ಪತ್ರಿಕೆಯ ಮೊದಲ ಸಂಚಿಕೆಯಲ್ಲಿದ್ದ ಪರಿವಿಡಿ


| | |
|---|---|
| ದಿವ್ಯ ಜೀವನ (Life Divine) | ಅರೋಬಿಂದೋ ಘೋಷ (Aurobindo Ghose) (A.G.) |
| ಜಗತ್ತುಗಳಿರುವುದು ಏತಕ್ಕಾಗಿ | ಪಾಲ್ ರಿಚರ್ಡ (Paul Richard) (P.R.) |
| ವೇದ ರಹಸ್ಯ | A.G. |
| a) ಸಮಸ್ಯೆ ಹಾಗೂ ಅದರ ಪರಿಹಾರ | |
| b) ಆಯ್ದ ಸ್ತೋತ್ರಪಾಠ(hymn)ಗಳು | |
| ವಿವರಣೆ ಒದಗಿಸಿದ ಪಠ್ಯಗಳು: ಈಶ ಉಪನಿಷತ್ತು | A.G. |
| ಯೋಗ ಸಮನ್ವಯ | A.G. |
| ಸನಾತನ ವಿವೇಕ | P.R. |
| ವಿವಿಧತೆಗಳು! | |
| ಸಸ್ಯದ ಆತ್ಮ | |
| ಈ ತಿಂಗಳಿನ ಪ್ರಶ್ನೆ | |
| ವಾರ್ತಾಪತ್ರ | |


*

## 'ಆರ್ಯ' ಪತ್ರಿಕೆಯಲ್ಲಿರುವ ವಿಷಯಗಳು

ಅದರ ಉದ್ದೇಶ ಭವಿಷ್ಯದ ಯೋಚನೆಯನ್ನು ಭಾವನೆಯಲ್ಲಿ ಹೊರತರುವು–ದಾಗಿದೆ, ಅದರಿಂದಾಗಿ ಬುನಾದಿಗಳಿಗೆ ಆಕಾರ ನೀಡುವುದಕ್ಕೆ ಮತ್ತು ಅದನ್ನು ಗತಕಾಲದ ಅತ್ಯಂತ ಶ್ರೇಷ್ಠ ಜೀವಧಾರಕ(Vital) ಯೋಚನೆಯೊಂದಿಗೆ ಜೋಡಿಸುವುದಕ್ಕೆ ಸಹಾಯ ದೊರಕುತ್ತದೆ.

*

ಪೃಥ್ವಿಯು ಪ್ರಾಣ ಹಾಗೂ ಭೌತದ್ರವ್ಯಗಳಿರುವ ಲೋಕವಾಗಿದೆ, ಆದರೆ ಮನುಷ್ಯ ಸಸ್ಯವಲ್ಲ ಇಲ್ಲವೆ ಪಶುವಲ್ಲ, ಅವನು ಆಧ್ಯಾತ್ಮಿಕ ಹಾಗೂ ಯೋಚಿಸುವ ಸತ್ತೆಯಾಗಿದ್ದಾನೆ. ಉಚ್ಚತರ ಪ್ರೇರಣೆಗಳ ಮೂಲಕ ಉಚ್ಚತರ ಉದ್ದೇಶಗಳಿಗಾಗಿ



ಪಶುವಿನ ಎರಕವನ್ನು ಉಪಯೋಗಿಸಲು ಹಾಗೂ ಅದಕ್ಕೆ ಹೆಚ್ಚು ದೈವಿಕವಾದ ಉಪಕರಣ ಸಂಚಯದ ಮೂಲಕ ಆಕಾರಕೊಡಲು ಅವನನ್ನು ಇಲ್ಲಿ ಇರಿಸಲಾಗಿದೆ.

*

ಆದ್ದರಿಂದ ಯೋಚನೆಯ ಸಮಸ್ಯೆ ಸರಿಯಾದ ವಿಚಾರವನ್ನು ಮತ್ತು ಸಾಮರಸ್ಯದ ಸರಿಯಾದ ಮಾರ್ಗವನ್ನು ಕಂಡುಹಿಡಿಯುವುದಾಗಿದೆ, ಆತ್ಮ ಕುರಿತು ಪ್ರಾಚೀನ ಸನಾತನ ಆಧ್ಯಾತ್ಮಿಕ ಸತ್ಯವನ್ನು ಮತ್ತೆ ಹೇಳುವುದಾಗಿದೆ, ಅದರಿಂದಾಗಿ ಮಾನಸಿಕ ಹಾಗೂ ಭೌತಿಕ ಜೀವನವನ್ನು ಆ ಸತ್ಯ ಮತ್ತೆ ಅಪ್ಪಿಕೊಳ್ಳುವಂತಾಗುತ್ತದೆ, ಆ ಜೀವನದ ಒಳಗೆ ಸೇರಿಕೊಳ್ಳುವಂತಾಗುತ್ತದೆ, ಅದರ ಮೇಲೆ ಪ್ರಾಬಲ್ಯ ಮೆರೆಸುವಂತಾಗುತ್ತದೆ ಮತ್ತು ಅದಕ್ಕೆ ರೂಪಪರಿವರ್ತನೆ ತಂದುಕೊಡುವಂತಾಗುತ್ತದೆ; ಅತ್ಯಂತ ಗಹನವಾದ ಹಾಗೂ ಜೀವಧಾರಕ ಮನಶ್ಶಾಸ್ತ್ರೀಯ ಸ್ವ–ಶಿಸ್ತುಪಾಲನೆಯ ಹಾಗೂ ಆತ್ಮಾಭಿವೃದ್ಧಿಯ ವಿಧಾನಗಳನ್ನು ಅಭಿವೃದ್ಧಿಪಡಿಸುವುದಾಗಿದೆ, ಅದರಿಂದಾಗಿ ಮನುಷ್ಯನ ಮಾನಸಿಕ, ಹಾಗೂ ಚೈತ್ಯಾತ್ಮಿಕ ಜೀವನವು ತನ್ನದೇ ಸಮೃದ್ಧಿ, ಸಾಮರ್ಥ್ಯ ಮತ್ತು ಸಂಕೀರ್ಣತೆಗಳ ಸಾಧ್ಯವಿದ್ದ ಎಲ್ಲ ವಿಸ್ತರಣೆಯ ಮೂಲಕ ಆಧ್ಯಾತ್ಮಿಕ ಜೀವನವನ್ನು ಅಭಿವ್ಯಕ್ತಪಡಿಸು–ವಂತಾಗುವುದು; ಮನುಷ್ಯನ ಬಾಹ್ಯ ಜೀವನ, ಅವನ ಸಮಾಜ, ಅವನ ಸಂಸ್ಥೆಗಳು ಪ್ರಗತಿಪರವಾಗಿ ಆತ್ಮದ ಸತ್ಯದಲ್ಲಿ ಮರುಎರಕ ಪಡೆಯುವುದಕ್ಕೆ ಸಾಧನಗಳನ್ನು ಹಾಗೂ ಪ್ರೇರಣೆಗಳನ್ನು ಅರಸಬೇಕಾಗಿದೆ, ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಸಮಾಜದ ಏಕತೆ ಇವುಗಳಲ್ಲಿ ಸಾಧ್ಯವಾಗಬಹುದಾದ ಎಲ್ಲ ಸಾಮರಸ್ಯವನ್ನು ಅಭಿವೃದ್ಧಿಪಡಿಸ–ಬೇಕಾಗಿದೆ.

*

ಆ ಸಮಸ್ಯೆಯ ತಾತ್ವಿಕ ತಳಹದಿಗಳ ಮೇಲೆ ನಾವು ಸಾಧಿಸಬಹುದಾದ ಪ್ರಭುತ್ವ ಕುರಿತು ಆಳಾತಿಆಳದ ಯೋಚನೆಯಲ್ಲಿ ನಾವು ಪೂರ್ವಮಗ್ನ–ರಾಗಿರುವುದು ಆರ್ಯ ಪತ್ರಿಕೆಯಲ್ಲಿ ಕಂಡುಬರುತ್ತದೆ. ಈ ಆಧಾರವಿಲ್ಲದೆ ನಾವು ಹೇಳಬಹುದಾದ ಯಾವುದಕ್ಕೂ ನಿಜವಾದ, ದೃಢವಾದ ಮತ್ತು ಶಾಶ್ವತವಾದ ಮೌಲ್ಯವಿರುವುದಿಲ್ಲ. ಬಹುಶಃ ಆ ಮೌಲ್ಯಕ್ಕಾಗಿ ನಾವು ಕಠಿಣವಾದ, ಅತಿ ಕ್ಲಿಷ್ಟವಾದ ಯೋಚನೆಗೆ ಬಹಳ ವಿಸ್ತಾರವನ್ನು ಒದಗಿಸಿದ್ದೇವೆ ಎಂಬುದನ್ನು ನಾವು ಅಷ್ಟೊಂದು ಗಾಢವಾಗಿ ಮನವರಿಕೆ ಮಾಡಿಕೊಂಡಿದ್ದೇವೆ.

*

ಆರ್ಯ ಪತ್ರಿಕೆಯಲ್ಲಿ ಸಮನ್ವಯದ ತತ್ವಶಾಸ್ತ್ರವನ್ನು ಯೋಚಿಸಿ ಹೊರತೆಗೆಯುವ ವಿಚಾರ ನಮ್ಮದಾಗಿತ್ತು. ನಾವು ಎದುರಿಸಲಿರುವ ಹೊಸ ಯುಗಕ್ಕೆ ಅದೊಂದು ಕೊಡುಗೆಯಾಗಬಹುದು. ಮಾನವತೆ ಶ್ರೇಷ್ಠ ಬದಲಾವಣೆಯತ್ತ ಚಲಿಸುತ್ತಿದೆ ಎಂಬ ವಿಚಾರದಿಂದ ನಾವು ಪ್ರಾರಂಭಿಸುತ್ತೇವೆ, ಆ ಬದಲಾವಣೆ ನಮ್ಮನ್ನು ಮನುಕುಲದ ಹೊಸ ಜೀವನದತ್ತ ಕರೆದೊಯ್ಯಬಹುದು – ಯೋಚನೆ ಮಾಡುವ ಜನರಿರುವ ಎಲ್ಲ ದೇಶಗಳಲ್ಲಿ ಈಗ ಹಲವಾರು ರೂಪಗಳಲ್ಲಿ ಆ ವಿಚಾರ ಹಾಗೂ ನಿರೀಕ್ಷೆ ಇವೆ. ಈ ಚಳುವಳಿಗೆ ಹಾಗೂ ಪ್ರಯತ್ನಕ್ಕೆ ಜ್ಞಾನೋದಯವನ್ನು ನೀಡುವ ಮಾರ್ಗದಶನ ಮಾಡುವ ಆಧ್ಯಾತ್ಮಿಕ, ಧಾರ್ಮಿಕ ಹಾಗೂ ಇತರ ಸತ್ಯವನ್ನು ಶೋಧಿಸುವುದು ನಮ್ಮ ಗುರಿಯಾಗಿದೆ. ನಮ್ಮ ಪ್ರಯತ್ನಕ್ಕೆ ಆಧಾರವೆಂದು ಇಟ್ಟುಕೊಳ್ಳಬಹುದಾದ ಆಧ್ಯಾತ್ಮಿಕ ಅನುಭವ ಹಾಗೂ ಸರ್ವಸಾಧಾರಣ ಸತ್ಯಗಳು ಈಗಾಗಲೆ ನಮ್ಮೆದುರಿಗಿವೆ, ಹಾಗಿಲ್ಲದಿದ್ದರೆ ಅಂತಹ ಪ್ರಯತ್ನ ಮಾಡಲು ನಮಗೆ ಯಾವ ಹಕ್ಕೂ ಇರುತ್ತಿರಲಿಲ್ಲ.

*

ಭಗವಂತನ ಪೂರ್ಣತೆಯಲ್ಲಿ ಬೆಳೆಯುವುದು ಮಾನವ ಜೀವನದ ನಿಜವಾದ ನಿಯಮ ಮತ್ತು ಅವನ ಪಾರ್ಥಿವ ಅಸ್ತಿತ್ವಕ್ಕೆ ಭಗವಂತನ ಪ್ರತೀಕದಲ್ಲಿ ಆಕಾರ ಕೊಡುವುದು ಮಾನವನ ಉತ್ಕ್ರಾಂತಿಯ ಅರ್ಥ. ಇದು 'ಆರ್ಯ' ಪತ್ರಿಕೆಯ ತತ್ವಜ್ಞಾನದ ಮೂಲ ಸಿದ್ಧಾಂತ.

ಈ ಸತ್ಯವನ್ನು ಮೊಟ್ಟಮೊದಲು ತತ್ವಮೀಮಾಂಸೆಯ ದೃಷ್ಟಿಕೋನದಿಂದ ಕೂಲಂಕಷವಾಗಿ ಯೋಜಿಸಬೇಕು, ಏಕೆಂದರೆ ತತ್ವಜ್ಞಾನದಲ್ಲಿ ತತ್ವಮೀಮಾಂಸೆಯ ಸತ್ಯ ಉಳಿದದ್ದೆಲ್ಲದರ ಬೀಜಾಣುವಿನಂತಿರುತ್ತದೆ. ಅದು ಕೊನೆಯ ಮತ್ತು ಹೆಚ್ಚು ಸರ್ವಸಾಧಾರಣವಾದ ಸತ್ಯಗಳನ್ನು ಕುರಿತು ಹೇಳುವುದಾಗಿರುತ್ತದೆ, ಅದರ ಮೇಲೆ ಉಳಿದದ್ದೆಲ್ಲವುಗಳು ಅವಲಂಬಿಸಿರುತ್ತವೆ, ಇಲ್ಲವೆ ಅದರಲ್ಲಿ ಅವು ಒಟ್ಟುಗೂಡುತ್ತವೆ. ಹಾಗಾಗಿ ನಾವು ದೈವೀ ಜೀವನ(Life Divine)ಕ್ಕೆ ಮೊದಲ ಸ್ಥಾನ ಕೊಡುತ್ತೇವೆ. ಇಲ್ಲಿ ನಾವು ವೇದಾಂತದ ನಿಲುವಿನಿಂದ, ದಿವ್ಯಾತ್ಮ, ಮನಸ್ಸು ಮತ್ತು ಜೀವನ ಕುರಿತು, ಸಚ್ಚಿದಾನಂದ ಮತ್ತು ಜಗತ್ತುಗಳನ್ನು ಕುರಿತು, ಜ್ಞಾನ ಮತ್ತು ಅವಿದ್ಯೆ ಕುರಿತು, ಪುನರ್ಜನ್ಮ ಮತ್ತು ಆತ್ಮ ಕುರಿತು ಅದರ ವಿಚಾರಗಳಿಂದ ಪ್ರಾರಂಭಿಸುತ್ತೇವೆ. ಆದರೆ ವೇದಾಂತವು ಜೀವನವನ್ನು ನಿರಾಕರಿಸುತ್ತದೆ ಎಂಬುದು ಪ್ರಚಲಿತವಾದ ವಿಷಯ, ನಿಸ್ಸಂಶಯವಾಗಿ ಅದು ಈ ಪ್ರಬಲವಾದ ಪ್ರವೃತ್ತಿಯನ್ನು



ಕೈಗೆತ್ತಿಕೊಂಡಿದೆ. ಎಲ್ಲವೂ ಬ್ರಹ್ಮನ್ ಇಲ್ಲವೆ ದಿವ್ಯಾತ್ಮವಾಗಿದೆ (ಸರ್ವಂ ಖಲ್ವಿದಂ ಬ್ರಹ್ಮ) ಎಂಬ ಮೂಲ ಸತ್ಯದಿಂದ ಪ್ರಾರಂಭಿಸಿದಾಗ್ಯೂ ಕೊನೆಯಲ್ಲಿ ಜಗತ್ತು ಬ್ರಹ್ಮನ್ ಇಲ್ಲವೆ ದಿವ್ಯಾತ್ಮ ಆಗಿಲ್ಲ ಎಂಬುದರ ಮೇಲೆ ಒತ್ತು ನೀಡಿದೆ, ಹಾಗಾಗಿ ಅದು ವಿರೋಧಾಭಾಸದಲ್ಲಿ ಕೊನೆಗೊಂಡಿದೆ. ತದ್ವಿರುದ್ಧವಾಗಿ ನಾವು ಅದರ ಆಧಾರಾಂಶದಿಂದ ವ್ಯಾಪಕ ಅದ್ವೈತವನ್ನು ಸ್ಥಾಪಿಸಲು ಪ್ರಯತ್ನಿಸಿದ್ದೇವೆ. ಮನಸ್ಸು, ಪ್ರಾಣ ಹಾಗೂ ಭೌತದ್ರವ್ಯ ಇವುಗಳ ಮೂಲವು ವಿಶ್ವವ್ಯಾಪಿ ಅಸ್ತಿತ್ವಕ್ಕೆ ಆಧಾರವಾದ ದಿವ್ಯಾತ್ಮನಿಂದ, ಆಧ್ಯಾತ್ಮಿಕ ಮನಸ್ಸಿನ ಮೂಲಕ ಇಲ್ಲವೆ ಅತಿಮನಸ್ಸಿನ ಮೂಲಕ, ಸೃಷ್ಟಿಯಾದುದರಲ್ಲಿದೆ, ಮತ್ತು ಮನಸ್ಸನ್ನು ದಿವ್ಯಾತ್ಮನಲ್ಲಿ ಅಭಿವೃದ್ಧಿಗೊಳಿಸುವುದರ ಮೂಲಕ ಮನುಷ್ಯ ಜಗತ್ತಿನಲ್ಲಿ ಆತ್ಮದ ನಿಜವಾದ ಸತ್ಯವನ್ನು ಮತ್ತು ಜೀವನದ ನಿಜವಾದ ಸತ್ಯ ಹಾಗೂ ಅತ್ಯುಚ್ಚ ನಿಯಮವನ್ನು ತಲುಪಬಲ್ಲನು. ದಿವ್ಯಾತ್ಮ ಸಚ್ಚಿದಾನಂದನಾಗಿದ್ದಾನೆ ಮತ್ತು ಚಿಕಿತ್ಸೆಗೊಳಪಡಿಸಲಾಗದ ವೈರುಧ್ಯ ಅವನ ಹಾಗೂ ಜಗತ್ತಿನ ನಡುವೆ ಇಲ್ಲ. ಕೇವಲ ನಾವು ಜಗತ್ತನ್ನು ಅವಿದ್ಯೆಯ ಮೂಲಕ ನೋಡುತ್ತೇವೆ, ನಾವು ಜ್ಞಾನದ ಕಣ್ಣುಗಳ ಮೂಲಕ ಅದನ್ನು ನೋಡಬೇಕಾಗಿದೆ. ನಮ್ಮ ಅಜ್ಞಾನವೇ ಸ್ವತಃ ಭೌತದ್ರವ್ಯದ ತೋರಿಕೆಯ ಅಚೇತನದಲ್ಲಿ ತೊಡಗಿಕೊಂಡಿರುವ ಸ್ಥಿತಿ(involution)ಯಿಂದ ಹೊರಗೆ ಬಂದು ಅಭಿವೃದ್ಧಿ ಹೊಂದುತ್ತಿರುತ್ತದೆ ಮತ್ತು ಅದು ತನ್ನ ಪ್ರಜ್ಞಾಪೂರ್ಣ ಸಮಗ್ರತೆಯತ್ತ ಮರಳಿ ಹೋಗುವ ಮಾರ್ಗದಲ್ಲಿರುತ್ತದೆ. ಆ ಮರಳುವಿಕೆಯನ್ನು ಸಿದ್ಧಿಸಿಕೊಳ್ಳುವುದಕ್ಕೆ ಮತ್ತು ಆಧ್ಯಾತ್ಮಿಕ ಜೀವನವನ್ನು ಮಾನವ ಅಸ್ತಿತ್ವದಲ್ಲಿ ಪ್ರಕಟಿಸುವುದಕ್ಕೆ ಒಂದರ ನಂತರ ಒಂದರಂತೆ ಬರುವ ಪುನರ್ಜನ್ಮಗಳು ಅವಕಾಶ ಒದಗಿಸುತ್ತವೆ. ನಾವು ಉತ್ಕ್ರಾಂತಿಯ ತತ್ವವನ್ನು ಒಪ್ಪಿಕೊಳ್ಳುತ್ತೇವೆ, ಅದಕ್ಕೆ ಪಾಶ್ಚಿಮಾತ್ಯರು ಕೊಟ್ಟ ಭೌತಿಕ ರೂಪದಲ್ಲಿ ಹೆಚ್ಚಿನ ಮಟ್ಟಿಗಲ್ಲ, ಆದರೆ ಅದರ ತತ್ವಜ್ಞಾನದ ಸತ್ಯದಲ್ಲಿ, ಎಂದರೆ ಪ್ರಾಣ, ಮನಸ್ಸು ಮತ್ತು ಆತ್ಮಗಳು ತೊಡಗಿಕೊಂಡಿರುವ ಭೌತದ್ರವ್ಯದಲ್ಲಿಂದ ಅವುಗಳ ಪ್ರಗತಿಪರ ಪ್ರಕಟಣೆಯಲ್ಲಿ ಉತ್ಕ್ರಾಂತಿ ಇರುವುದನ್ನು ಒಪ್ಪಿಕೊಳ್ಳುತ್ತೇವೆ. ಈ ಉತ್ಕ್ರಾಂತಿಯ ಶಿಖರದಲ್ಲಿ ಆಧ್ಯಾತ್ಮಿಕ ಜೀವನ, ದೈವೀ ಜೀವನಗಳಿವೆ.

ಈ ಸತ್ಯಗಳು ಪ್ರಾಚೀನ ವೇದಾಂತದ ಸತ್ಯಗಳಿಗೆ ಅಸಂಗತವಾಗಿಲ್ಲ ಎಂದು ತೋರಿಸುವುದು ಅವಶ್ಯವಾಗಿತ್ತು, ಆದ್ದರಿಂದ ನಾವು ಈ ವಿವರಗಳನ್ನು ವೇದ, ಎರಡು ಉಪನಿಷತ್ತುಗಳು ಹಾಗೂ ಗೀತೆ ಇವುಗಳ ದೃಷ್ಟಿಕೋನದಿಂದ ಒಳ ಸೇರಿಸಿದ್ದೇವೆ. ವ್ರತಾಚರಣೆಗಳನ್ನು ಮಾಡುವವರಿಂದ ಹಾಗೂ ವ್ಯಾಖ್ಯಾನ–ಕಾರರಿಂದ ವೇದ ಮಬ್ಬಾಗುವಂತೆ ಮಾಡಲಾಗಿದೆ. ಆದ್ದರಿಂದ ಲೇಖನಗಳ ಒಂದು

ಸರಣಿಯಲ್ಲಿ ನಾವು ಪ್ರಾರಂಭ ಮಾತ್ರಕ್ಕೆ ಎಂದು ವೇದದ ಅನುಭಾವಿಗಳು ಬರೆಯುವ ರೀತಿಯನ್ನು, ಅವರ ಸಂಕೇತಗಳ ಪದ್ಧತಿಯನ್ನು ಮತ್ತು ಅವು ಚಿತ್ರಿಸುವುದನ್ನು ತೋರಿಸಿದ್ದೇವೆ. ನಾವು ಈಶ ಮತ್ತು ಕೇನ ಉಪನಿಷತ್ತುಗಳನ್ನು ಮಾತ್ರ ಕೈಗೆತ್ತಿಕೊಂಡಿದ್ದೇವೆ, ಆ ಕಾರ್ಯ ಪೂರ್ತಿಯಾಗಲು ತೈತ್ತಿರೀಯ ಉಪನಿಷತ್ತನ್ನು ಗಮನಿಸಬೇಕಾಗಿತ್ತು, ಆದರೆ ಅದು ದೀರ್ಘವಾದದ್ದಾಗಿದೆ, ಅದಕ್ಕೆ ಇಲ್ಲಿ ಸ್ಥಳ ಸಾಕಾಗುತ್ತಿರಲಿಲ್ಲ.

ಜೀವನದ ಹಾಗೂ ಕರ್ಮದ ಅತ್ಯಂತ ವಿಶಾಲ ಹಾಗೂ ಕಠಿಣವಾದ ಭಾಗಕ್ಕೆ ಆತ್ಮದ ಸತ್ಯವನ್ನು ಅನ್ವಯಿಸುವುದಕ್ಕೆ ಸಾಮರ್ಥ್ಯಪೂರ್ಣವಾಗಿ ಅನ್ವಯ–ವಾಗುತ್ತದೆಂದು ಭಗವದ್ಗೀತೆಯನ್ನು ಪರಿಗಣಿಸುತ್ತೇವೆ ಮತ್ತು ಅದು ನಮ್ಮನ್ನು ಆತ್ಮದಲ್ಲಿ ಜನ್ಮ ತಾಳುವತ್ತ ಹಾಗೂ ಆಧ್ಯಾತ್ಮಿಕ ಜೀವನದೊಂದಿಗೆ ಸಾಮರಸ್ಯದಲ್ಲಿರಿಸುವ ಕರ್ಮದತ್ತ ಮಾರ್ಗ ತೋರಿಸುತ್ತದೆಂದು ಭಾವಿಸುತ್ತೇವೆ. ತತ್ವಜ್ಞಾನದ ಸತ್ಯವನ್ನು ಜೀವಿಸದಿದ್ದರೆ ಅದಕ್ಕೆ ಕೇವಲ ಸೈದ್ಧಾಂತಿಕ ಮೌಲ್ಯವಿರುತ್ತದೆ, ಆದ್ದರಿಂದ ನಾವು 'ಯೋಗ ಸಮನ್ವಯ' (Synthesis of Yoga)ದಲ್ಲಿ ಆಧ್ಯಾತ್ಮಿಕ ಸ್ವ–ಶಿಸ್ತುಪಾಲನೆಯ ಅನೇಕ ಮಾರ್ಗಗಳ ತತ್ವಗಳು ಹಾಗೂ ವಿಧಾನಗಳು ಇವುಗಳ ಸಮನ್ವಯ ದೃಷ್ಟಿಯತ್ತ ತಲುಪಲು ಪ್ರಯತ್ನ ಮಾಡಿದ್ದೇವೆ, ಮತ್ತು ಅವು ಮಾನವ ಅಸ್ತಿತ್ವದಲ್ಲಿ ಸಮಗ್ರ ದೈವೀ ಜೀವನದತ್ತ ಕರೆದೊಯ್ಯುವ ಮಾರ್ಗದತ್ತ ತಲುಪಲು ಕೂಡ ಪ್ರಯತ್ನ ಮಾಡಿದ್ದೇವೆ. ಆದರೆ ಇದು ವ್ಯಕ್ತಿಗತ ಅಭಿವೃದ್ಧಿ ಕುರಿತಾಗಿದೆ, ಆ ಕಾರಣದಿಂದಾಗಿ ನಮ್ಮ ಆದರ್ಶ ಮನುಕುಲದ ಸಾಮಾಜಿಕ ಜೀವನದಲ್ಲಿ ಹೇಗೆ ಕಾರ್ಯಗತವಾಗಬಲ್ಲದೆಂಬುದನ್ನು ತೋರಿಸುವುದು ಅವಶ್ಯವಾಗಿತ್ತು. 'ಸಾಮಾಜಿಕ ಅಭಿವೃದ್ಧಿಯ ಮನಶ್ಶಾಸ್ತ್ರ'ದಲ್ಲಿ ಈ ಸತ್ಯಗಳು ಮಾನವ ಸಮಾಜದ ಉತ್ಕ್ರಾಂತಿಯ ಮೇಲೆ ಹೇಗೆ ಪರಿಣಾಮ ಬೀರಬಲ್ಲವು ಎಂಬುದನ್ನು ಕುರಿತು ಸೂಚನೆ ನೀಡಿದ್ದೇವೆ. 'ಮಾನವ ಏಕತೆಯ ಆದರ್ಶ' (Ideal of Human Unity) ಶೀರ್ಷಿಕೆಯಡಿಯಲ್ಲಿ ಮನುಕುಲದ ಸದ್ಯದ ಒಲವನ್ನು ಹೆಚ್ಚು ಹತ್ತಿರದ ಒಂದುಗೂಡುವಿಕೆಯತ್ತ ತೆಗೆದುಕೊಂಡು ಹೋಗಿದ್ದೇವೆ, ಮತ್ತು ಅದರ ಪ್ರವೃತ್ತಿಗಳನ್ನು ಮೆಚ್ಚಿಕೊಳ್ಳಲು ಪ್ರಯತ್ನಿಸಿದ್ದೇವೆ, ಅವುಗಳಲ್ಲಿರುವ ಕೊರತೆಯನ್ನು ಎತ್ತಿತೋರಿಸಿದ್ದೇವೆ, ಅದರಿಂದಾಗಿ ನಿಜವಾದ ಮಾನವ ಏಕತೆಯನ್ನು ಸಿದ್ಧಿಸಿಕೊಳ್ಳುವಂತಾಗಬಹುದು.

**(CWSA, 13/103, 140, 145–46, 103, 105, 107–08)**

*



## ಮಾನವನ ನಿರ್ಮಾಣವಲ್ಲ, ಆದರೆ ದೈವೀ ಮಾನವನ ನಿರ್ಮಾಣ

'ಆರ್ಯ' ಪತ್ರಿಕೆ ಪ್ರಾರಂಭವಾದ ಕೆಲವೇ ದಿನಗಳಲ್ಲಿ ನನಗೆ ಸ್ನಾತಕ ಪದವೀಧರರಲ್ಲಿ ಕೆಲವರಿಂದ ಒಂದು ಪತ್ರ ಬಂದಿತು. ಅವರಿಗೆ 'ಮಾನವನ ನಿರ್ಮಾಣ' ಬೇಕಾಗಿದ್ದಿತು. ಆ ವಿಷಯ ಕುರಿತು ನನ್ನ ಪಾಲಿನ ಕರ್ತವ್ಯವನ್ನು ಪೂರೈಸಿದ್ದೇನೆ ಮತ್ತು ಈಗ ಅದನ್ನು ಯಾರು ಬೇಕಾದರೂ ಮಾಡಬಹುದು. ಪ್ರಕೃತಿಯೇ ಸ್ವತಃ ಅದನ್ನು ಕುರಿತು ಜಗತ್ತಿನಾದ್ಯಂತ ಕಾಳಜಿ ವಹಿಸುತ್ತಿದೆ. ನಾನು ಕೈಕೊಳ್ಳಬೇಕಾದುದು ಮಾನವನ ನಿರ್ಮಾಣವಲ್ಲ, ಆದರೆ ದೈವೀ ಮಾನವನ ನಿರ್ಮಾಣವಾಗಿದೆ. ಸದ್ಯದ ನನ್ನ ಬೋಧನೆ ಹೀಗಿದೆ: ಜಗತ್ತು ಹೊಸ ಪ್ರಗತಿಗಾಗಿ, ಹೊಸ ಉತ್ಕ್ರಾಂತಿಗಾಗಿ ತಯಾರಿ ಮಾಡಿಕೊಳ್ಳುತ್ತಿದೆ, ಜನಾಂಗ ಯಾವುದೇ ಆಗಿರಲಿ, ದೇಶ ಯಾವುದೇ ಆಗಿರಲಿ, ಅದು ಹೊಸ ಉತ್ಕ್ರಾಂತಿಯ ಎಳೆಗಳನ್ನು ಹಿಡಿದುಕೊಂಡರೆ ಮತ್ತು ಆ ದಿಶೆಯಲ್ಲಿ ಫಲಪ್ರದವಾದರೆ, ಅದು ಮಾನವ ಕುಲದ ನೇತಾರನಾಗುವುದು. ಆರ್ಯ ಪತ್ರಿಕೆಯಲ್ಲಿ ಯಾವ ಯೋಚನೆಯ ಮೇಲೆ ಈ ಹೊಸ ಯುಗ ಆಧಾರಪಡೆದಿರುವುದೆಂಬುದನ್ನು ನಾನು ಕಂಡುಕೊಳ್ಳುತ್ತೇನೆಯೋ ಅದನ್ನೂ ಮತ್ತು ಅದನ್ನು ಸಿದ್ಧಿಸಿಕೊಳ್ಳುವುದಕ್ಕೆ ಯೋಗ ಪದ್ಧತಿ ಯಾವುದಿರುತ್ತದೆಯೋ ಎಂಬುದನ್ನೂ ಹೇಳುತ್ತೇನೆ. ಸಹಜವಾಗಿ ಹಾಗೂ ಸ್ಪಷ್ಟ ಕಾರಣಗಳಿಂದಾಗಿ ನಾನದನ್ನು ಕುರಿತು ಸರಳ ಶಬ್ದಗಳಲ್ಲಿ ಮಾತನಾಡಲಾರೆ, ಆದರೆ ಅದನ್ನು ಕಟ್ಟುನಿಟ್ಟಿನ, ವರ್ಣರಹಿತ ರೀತಿಯಲ್ಲಿ ಇರಿಸಬೇಕಾಗಿದೆ, ಅದು ಭಾವನಾತ್ಮಕ, ಉತ್ತೇಜನ ಬಯಸುವ ಬಂಗಾಲಿ ಮನಸ್ಸಿಗೆ ಸಂತೋಷಕರವಾಗದೆ ಇರಬಹುದು. ಆದರೆ ಅರ್ಥಮಾಡಿಕೊಳ್ಳಲು ಕಾಳಜಿವಹಿಸಬಲ್ಲವರಿಗೆ ಸಂದೇಶ ಅಲ್ಲಿದೆ. ಅದಕ್ಕೆ ಮೂರು ಭಾಗಗಳಿವೆ. (1) ವ್ಯಕ್ತಿಗತವಾಗಿ ಪ್ರತಿಯೊಬ್ಬ ಮನುಷ್ಯ ಸತ್ಯಯುಗದ ಜನರಿದ್ದ ರೀತಿಯಲ್ಲಿ ದೈವೀ ಮಾನವತೆಯ ಮಾದರಿಯಲ್ಲಿ ಬದಲಾಗುವುದಾಗಿದೆ, ಆ ಸತ್ಯಯುಗ ಜನ್ಮ ತಾಳಲು ಶ್ರಮಿಸುತ್ತಿದೆ. (2) ಮನು ಕುಲವನ್ನು ಮುನ್ನಡೆಸಿಕೊಂಡು ಹೋಗಲು ಇಂತಹ ಜನಾಂಗ ಉತ್ಕ್ರಾಂತಿ ಹೊಂದುವುದಾಗಿದೆ ಮತ್ತು (3) ಈ ಅಗ್ರಗಾಮಿಗಳ ಮತ್ತು ಆಯ್ದುಕೊಂಡ ಜನಾಂಗವು ಎಲ್ಲ ಮನುಕುಲ ಈ ಮಾರ್ಗವನ್ನು ಅನುಸರಿಸಲೆಂದು ಅದಕ್ಕೆ ಕರೆ ಕೊಡುವುದಾಗಿದೆ. ಭಾರತದ ಅದರಲ್ಲೂ ವಿಶೇಷವಾಗಿ ಬಂಗಾಲದ ಜನರಿಗೆ ಆ ಜನಾಂಗವನ್ನು ಸೃಷ್ಟಿಸಲು ಅತ್ಯುತ್ತಮ ಅವಕಾಶ ಹಾಗೂ ಹಕ್ಕುಗಳಿವೆ. ಜರ್ಮನಿ ದೇಶದವರು ಅಂತಹದನ್ನು ಯೋಚಿಸಿ ತಪ್ಪು ದಾರಿಯಲ್ಲಿ ನಡೆದರು, ನಾವು

ಅದನ್ನು ಸರಿಯಾದ ರೀತಿಯಲ್ಲಿ ಕೈಕೊಳ್ಳಬೇಕು. ಆದರೆ ಮೊದಲು ಅವರು ಯೋಚಿಸುವುದನ್ನು ಮತ್ತು ಹಳೆಯ ವಿಚಾರಗಳನ್ನು ಎಸೆದು ಬಿಡುವುದನ್ನು ಕಲಿತುಕೊಳ್ಳಬೇಕು ಮತ್ತು ತಮ್ಮ ಮುಖಗಳನ್ನು ದೃಢ ನಿಶ್ಚಯದಿಂದ ಭವಿಷ್ಯದತ್ತ ಹೊರಳಿಸಬೇಕು. ಆದರೆ ಅವರು ಕೇವಲ ಯುರೋಪಿಯನ್‌ರ ರಾಜಕೀಯವನ್ನು ನಕಲು ಮಾಡುತ್ತಿದ್ದರೆ ಇಲ್ಲವೆ ಶಾಶ್ವತವಾಗಿ ಬೌದ್ಧ ಧರ್ಮದ ವೈರಾಗ್ಯವನ್ನು ಪುನರುತ್ಪಾದಿಸುತ್ತಿದ್ದರೆ ಅದನ್ನು ಮಾಡಲಾಗದು. ತಮ್ಮ ಎಲ್ಲ ಒಳ್ಳೆಯ ಉದ್ದೇಶಗಳೊಂದಿಗೆ ರಾಮಕೃಷ್ಣ ಮಿಶನ್‌ನವರು ನಮಗೆ ಕೇವಲ ಶಂಕರಾಚಾರ್ಯರನ್ನು ಇಲ್ಲವೆ ಬೌದ್ಧ ಧರ್ಮದ ಮಾನವಹಿತ ಸಾಧನೆಯನ್ನು ಕೊಡುತ್ತಿದ್ದಾರೆಂದು ನನಗನಿಸುತ್ತದೆ. ಆದರೆ ಜಗತ್ತು ಆ ಗುರಿಯತ್ತ ಚಲಿಸುತ್ತಿಲ್ಲ. ಈ ಮಧ್ಯೆ ಸದ್ಯದ ಕ್ಷಣಗಳು ಬಹಳ ಕಠಿಣವಾದವುಗಳಾಗಿವೆ ಎಂಬುದನ್ನು ಮತ್ತು ಕಾಳಜಿಪೂರ್ವಕ ಹೆಜ್ಜೆ ಇರಿಸುವ ಆವಶ್ಯಕತೆ ಇದೆ ಎಂಬುದನ್ನು ನೆನಪಿನಲ್ಲಿಟ್ಟು–ಕೊಳ್ಳಬೇಕು. ಸದ್ಯ ನಡೆಯುತ್ತಿರುವ ಯುದ್ಧ ಕೆಲವೇ ತಿಂಗಳುಗಳಲ್ಲಿ ಮುಕ್ತಾಯ ಕಂಡುಕೊಳ್ಳುವ ಸಾಧ್ಯತೆಯಿದೆ, ಏಕೆಂದರೆ ಹಳೆಯ ನಿಶ್ಚಲತೆ ಮುರಿದುಬೀಳಲು ಪ್ರಾರಂಭಿಸಿದೆ ಮತ್ತು ಪರದೆಯ ಹಿಂದೆ ಕಾರ್ಯನಿರತವಾಗಿರುವ ಶಕ್ತಿಗಳು ಪರಿಹಾರವೊಂದರತ್ತ ಸಾಗಲು ಶ್ರಮಿಸುತ್ತಿವೆ. ಯುದ್ಧ ಮುಂದುವರಿದುಕೊಂಡು ಹೋಗುತ್ತಿದ್ದಾಗ ಭವ್ಯರೀತಿಯದಾದ ಏನನ್ನೂ ಕೈಕೊಳ್ಳಲು ಸಾಧ್ಯವಾಗುವುದಿಲ್ಲ, ನಮ್ಮನ್ನು ಎಲ್ಲ ಬದಿಗಳಲ್ಲಿ ಬೇಡಿಗಳು ಬಂಧಿಸಿರುತ್ತವೆ. ನಂತರ ವಿಷಯಗಳು ಬದಲಾಗುವವು ಮತ್ತು ನಾವು ಅಭಿವೃದ್ಧಿಗಾಗಿ ಕಾದುಕೊಂಡಿರಬೇಕು.

**(CWSA, 36/225–26)**

*

## ಮತಧರ್ಮ ಶಾಸ್ತ್ರ (Theology) ವೂ ಅಲ್ಲ, ಧರ್ಮವೂ ಅಲ್ಲ

### ಆದರೆ ಬಹುಮುಖವುಳ್ಳ ಆಧ್ಯಾತ್ಮಿಕ ಯೋಚನೆ ಮತ್ತು ಸಮಗ್ರ ಅನುಭವ

(ಪತ್ರ ವ್ಯವಹಾರ ಮಾಡಿದ) ಅವನು ಪ್ರಾರಂಭದಲ್ಲಿಯೇ ತಪ್ಪು ಮಾಡಿದ್ದಾನೆ ಎಂದು ನಾನು ಹೇಳಬೇಕು – ಅದು ಅವನಿಗೆ ಬಹಳ ಸ್ವಾಭಾವಿಕವಾದದ್ದು, ಏಕೆಂದರೆ ಎತ್ತಿಬರೆದದ್ದನ್ನು (extract) ಅವನಿಗೆ ಕಳಿಸಿದಾಗ ಅದನ್ನು ಅವನು ಮತಶಾಸ್ತ್ರದ ತುಣುಕು ಎಂದು ವರ್ಣಿಸುತ್ತಾನೆ, ಅವನು 'ಆರ್ಯ' ಪತ್ರಿಕೆ ಓದಿಲ್ಲ. 'ಆರ್ಯ' ಪತ್ರಿಕೆಯಲ್ಲಿ ಮತತತ್ವವಿಲ್ಲ ಎಂಬುದನ್ನು ನಾನು ಒತ್ತಿ ಹೇಳಬೇಕು. ಅಲ್ಲಿ



ಬರೆದದ್ದು ಯಾವುದೇ ಬಗೆಯ ಧರ್ಮದ ನಂಬಿಕೆಗೆ ಇಲ್ಲವೆ ಮತತತ್ವಕ್ಕೆ ಆಧಾರ ನೀಡುವುದಕ್ಕಾಗಿ ಇಲ್ಲ, ಇಲ್ಲವೆ ಧರ್ಮವನ್ನು ಅಭಿವೃದ್ಧಿಪಡಿಸಲಿಕ್ಕಾಗಿಯೂ ಇಲ್ಲ, ಇಲ್ಲವೆ ಯಾವ ಹಳೆಯ ಅಥವಾ ಹೊಸ ಧರ್ಮದ ಸೂತ್ರಗಳನ್ನು ಪ್ರತಿಪಾದಿಸುವುದಕ್ಕಾಗಲಿ, ಇಲ್ಲವೆ ದೃಢೀಕರಿಸುವುದಕ್ಕಾಗಿ ಇಲ್ಲ. ಆ ಪದಗುಚ್ಛದಲ್ಲಿರುವ ವಿಷಯ ಆಧ್ಯಾಪಕ ವೃತ್ತಿಗೆ ಸಂಬಂಧಿಸಿದ್ದೆಂದು ಅವನು ಹೇಳಿದಾಗ ಗುರಿ ತಲುಪುವುದನ್ನು ಕಡಿಮೆ ರೀತಿಯಲ್ಲಿ ಮಾಡಿರುವುದಿಲ್ಲ. ಅಲ್ಲಿರುವ ಬೋಧನೆಯನ್ನು ಗ್ರಂಥಗಳಿಂದ ಎತ್ತಿಕೊಂಡಿಲ್ಲ ಇಲ್ಲವೆ ಅದನ್ನು ತತ್ವಶಾಸ್ತ್ರದ ಭಾಷೆಯಲ್ಲಿ ಇರಿಸಿದಾಗ್ಯೂ ಅದಕ್ಕೆ ಆಧಾರ ಅಮೂರ್ತ ಯೋಚನೆಯಾಗಲಿ ಅಥವಾ ಔಪಚಾರಿಕ ತರ್ಕವಾಗಲಿ ಅಲ್ಲ, ಅದು ಮೂಲಭೂತ ಆಧ್ಯಾತ್ಮಿಕ ಅನುಭವವನ್ನು ಅಭಿವ್ಯಕ್ತಗೊಳಿಸುತ್ತದೆ, ಸತ್ತೆಯ ಬೆಳವಣಿಗೆಗೆ ಪ್ರೇರಕ ಶಕ್ತಿಯಾಗಿದೆ, ಅದನ್ನು ಮೂವತ್ತು ವರ್ಷಗಳ ಕಾಲದಲ್ಲಿ ನಿರಂತರವಾಗಿ ಕೈಕೊಂಡ ಆಧ್ಯಾತ್ಮಿಕ ಸಾಧನೆಯಿಂದ ದೃಢೀಕರಿಸಲಾಗಿದೆ ಮತ್ತು ವಿಸ್ತಾರಗೊಳಿಸಲಾಗಿದೆ, ವಿವರಗಳಿಂದ ತುಂಬಲಾಗಿದೆ. ಅದು ಹಾಗಿರುವಾಗ ಅದನ್ನು ಗಂಭೀರವಾಗಿ ಪ್ರಶ್ನಿಸುವುದನ್ನಾಗಲಿ ಇಲ್ಲವೆ ಕೇವಲ ಬೌದ್ಧಿಕವಾಗಿ, ತಾರ್ಕಿಕವಾಗಿ ಪ್ರಮಾಣ–ಬದ್ಧವಲ್ಲವೆಂದು ಸಾಧಿಸುವುದನ್ನಾಗಲಿ ಮಾಡಲಾಗದು, ಹಾಗೇನಾದರೂ ಮಾಡುವದಿದ್ದರೆ ಅದನ್ನು ಇನ್ನೂ ಶ್ರೇಷ್ಠತರ ಮತ್ತು ಹೆಚ್ಚು ವಿಸ್ತಾರವಾದ ಆಧ್ಯಾತ್ಮಿಕ ಅನುಭವದಿಂದ ಮಾಡಬಹುದು. ಅಲ್ಲದೆ ಅದು ಉಪನಿಷದ್ಕಾಲದಿಂದ ಹಿಡಿದು ಪ್ಲೋಟಿನಸ್ (Plotinus), ಗೋಸ್ಟಿಕ್ಸ್ ಹಾಗೂ ಸೂಫಿಗಳು ಇವರೆಲ್ಲರಿಂದ ಸದ್ಯದವರೆಗಿನ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿರುವ ಆಧ್ಯಾತ್ಮಿಕ ಅನ್ವೇಷಕರ ಅನುಭವದೊಂದಿಗೆ (ಅಭಿವ್ಯಕ್ತಿಯಲ್ಲಿ ಇಲ್ಲದೆ ಇರಬಹುದು, ಆದರೆ ವಿಷಯ ವಸ್ತುವಿನಲ್ಲಿ) ಸರಿಹೊಂದುತ್ತದೆ. ವಿಶ್ವದ ಒಗಟಿನ ಪದಬಂಧ ಬಿಡಿಸುವುದಕ್ಕಾಗಿ ಆಧ್ಯಾತ್ಮಿಕ ಜ್ಞಾನದಲ್ಲಿ ಆರಂಭಿಗನೊಬ್ಬ ಮಾಡಿದ ಜಾಣ್ಮೆಯಿಲ್ಲದ ಗುಂಡಿನೇಟಿನ ಯೋಚನೆಯ ಹಾಗಿದೆ ಎಂದು ಅದನ್ನು ಬದಿಗೆ ಸರಿಸಿಡುವುದನ್ನು ಒಪ್ಪಿಕೊಳ್ಳುವುದು ಕಠಿಣವಾದದ್ದು. ಆ ವರ್ಣನೆ ಅವನು ಆ ಪದಗುಚ್ಛದ ಅರ್ಥವನ್ನು ಒಟ್ಟಿನಲ್ಲಿ ತಪ್ಪಿಸಿಕೊಂಡಿದ್ದಾನೆ ಎಂದು ತೋರಿಸುತ್ತದೆ ಮತ್ತು ಅದಕ್ಕೆ ಉತ್ತರ ಕೊಡುವುದು ಕಠಿಣವಾಗುತ್ತದೆ, ಏಕೆಂದರೆ ಮನಸ್ಸುಗಳು ಸಂಧಿಸುವ ಬಿಂದುವೇ ಇರದಿದ್ದರೆ ಚರ್ಚೆ ನಿರರ್ಥಕವಾಗುತ್ತದೆ.

**(CWSA, 28/76)** **– ಶ್ರೀ ಅರವಿಂದರು**

*

## ಮೊದಲ ಸಂಚಿಕೆಯ ಆರಂಭದ ಪತ್ರ

### ಮಾನವ ಅಭೀಪ್ಸೆ

ಎಚ್ಚರಗೊಂಡ ಮನುಷ್ಯನ ಯೋಚನೆಗಳಲ್ಲಿ ಅವನ ಅತ್ಯಂತ ಮೊದಲಿನ ಪೂರ್ವಮಗ್ನತೆ, ಅದು ಅವನಿಗೆ ಅನಿವಾರ್ಯ ಹಾಗೂ ಕಟ್ಟಕಡೆಯದೆಂದು ತೋರಿಬರುವ ಪೂರ್ವಮಗ್ನತೆ – ಏಕೆಂದರೆ ಸಂಶಯವಾದದ ದೀರ್ಘ ಅವಧಿಗಳ ನಂತರ ಹಾಗೂ ಪ್ರತಿಯೊಂದು ಉಚ್ಚಾಟನೆಯ ನಂತರ ಅದು ಮರಳಿ ಬರುತ್ತದೆ – ಅವನ ಯೋಚನೆ ಎದುರಿಸಬೇಕಾದುದರಲ್ಲಿ ಅತ್ಯುಚ್ಚವಾದದ್ದು. ಅದು ದೇವ ಪ್ರಮುಖನನ್ನು ಊಹೆ ಮಾಡುವುದರಲ್ಲಿ, ಪರಿಪೂರ್ಣತೆಗಾಗಿರುವ ಪ್ರಚೋದನೆಯಲ್ಲಿ, ಪರಿಶುದ್ಧ ಸತ್ಯವನ್ನು ಹಾಗೂ ಮಿಶ್ರಣಕ್ಕೊಳಗಾಗಿರದ ದಿವ್ಯಾನಂದವನ್ನು ಅರಸುವುದರಲ್ಲಿ ಮತ್ತು ರಹಸ್ಯ ಅಮರತ್ವ ಕುರಿತು ಭಾವನೆ ತಂದುಕೊಳ್ಳುವುದರಲ್ಲಿ ಪ್ರಕಟವಾಗುತ್ತದೆ. ಮಾನವ ಜ್ಞಾನದ ಪ್ರಾಚೀನ ಕಾಲದ ಅರುಣೋದಯಗಳು ಈ ಸತತ ಅಭೀಪ್ಸೆಗಾಗಿ ತಮ್ಮ ಸಾಕ್ಷಿಯನ್ನು ನಮಗಾಗಿ ಉಳಿಸಿವೆ. ಇಂದು ನಾವು ತೃಪ್ತ ಮನುಕುಲವನ್ನು ನೋಡುತ್ತೇವೆ, ಆದರೆ ಪ್ರಕೃತಿಯ ಬಾಹ್ಯ ರೂಪಗಳ ವಿಜಯಶಾಲಿ ವಿಶ್ಲೇಷಣೆಯಿಂದ ಮನುಕುಲಕ್ಕೆ ಸಮಾಧಾನ ದೊರತಿಲ್ಲ, ಏಕೆಂದರೆ ಆ ಬಾಹ್ಯ ರೂಪಗಳು ತಮ್ಮ ಆದಿಕಾಲದ ಹಂಬಲದತ್ತ ಮರಳಿಹೋಗಲು ತಯಾರಿ ಮಾಡುತ್ತಿವೆ. ವಿವೇಕದ ಅತ್ಯಂತ ಮೊದಲಿನ ಸೂತ್ರ ಎಂದರೆ ದೇವ, ದೈವೀ ಪ್ರಕಾಶ, ಸ್ವಾತಂತ್ರ್ಯ ಹಾಗೂ ಅಮರತ್ವ ಇವುಗಳ ಸೂತ್ರ ಆ ವಿವೇಕದ ಕೊನೆಯ ಸೂತ್ರ ಆಗುವ ವಚನ ನೀಡುತ್ತದೆ.

**(CWSA, 22/3–4)** **– ಶ್ರೀ ಅರವಿಂದರು**

*

## 'ಆರ್ಯ' ಪತ್ರಿಕೆಯ ಪ್ರಕಟಣೆಯನ್ನು ಕುರಿತು ಎರಡನೆಯ ವರ್ಷಕ್ಕಾಗಿ ಯೋಜನೆ

'ಆರ್ಯ' ಪತ್ರಿಕೆಯ ಜನ್ಮ ತಾಳುವಿಕೆ ಕಾಕತಾಳೀಯವೆಂಬಂತೆ ಆಧುನಿಕ ಜಗತ್ತಿನ ಮೇಲೆ ಭವ್ಯ ಅನಾಹುತದ ರೂಪ(ಮೊದಲನೆಯ ಮಹಾಯುದ್ಧದ ರೂಪ)ದಲ್ಲಿ ಎರಗಿ ಬಂದಾಗ ಆಗಿತ್ತು, ಆದಾಗ್ಯೂ ಅದನ್ನು ಗಂಭೀರ ತೊಂದರೆಗಳಡಿಯಲ್ಲಿ ಮುಂದುವರಿಸಿಕೊಂಡು ಬರಲಾಯಿತು, ಅದರ ಪ್ರಕಟಣೆಯ ಮೊದಲನೆಯ ವರ್ಷ ಮುಕ್ತಾಯಗೊಂಡಿದೆ. ದುರ್ದೈವವಶಾತ್ ಅದರ ಫ್ರೆಂಚ್ ಆವೃತ್ತಿಯನ್ನು ಫೆಬ್ರುವರಿ 1915 ರಿಂದ ನಿಲ್ಲಿಸಬೇಕಾದ ನಿರ್ಬಂಧಕ್ಕೊಳಗಾಗಬೇಕಾಯಿತು, ಕಾರಣ ಅದರ ನಿರ್ದೇಶಕರಾಗಿದ್ದ ಪಾಲ್ ರಿಚರ್ಡ್ ಅವರಿಗೆ ಫ್ರಾನ್ಸ್ ದೇಶದಿಂದ, ಕಾದಿಟ್ಟ ಸೈನ್ಯದ ಗುಂಪನ್ನು ಮರಳಿ ಸೇರಿಕೊಳ್ಳಲು, ಆಜ್ಞೆ ಬಂದಿತು. ನಾವು ಫ್ರಾನ್ಸ್ ದೇಶದ ಚಂದಾದಾರರಿಗೆ ಧನ್ಯವಾದ ಹೇಳಬೇಕು, ಏಕೆಂದರೆ ಅವರು ಫ್ರೆಂಚ್ ಆವೃತ್ತಿಯ ಬದಲು ಇಂಗ್ಲಿಷ್ ಆವೃತ್ತಿಯನ್ನು ಸ್ವೀಕರಿಸಲು ಒಪ್ಪಿಕೊಂಡಿದ್ದಾರೆ.



ನಮ್ಮ ಪ್ರಕಟಣೆಯ ಮೊದಲನೆಯ ವರ್ಷದಲ್ಲಿ ಪುನರ್ವಿಮರ್ಶೆಯನ್ನು ಬಹುಮಟ್ಟಿಗೆ ಉಚ್ಚಮಟ್ಟದ ತತ್ವಶಾಸ್ತ್ರಕ್ಕೆ ಮತ್ತು ಕಟ್ಟುನಿಟ್ಟಾದ ಹಾಗೂ ಕಠಿಣ ಯೋಚನೆಗೆ ಮೀಸಲಾಗಿ ಇಡಬೇಕಾದ ನಿರ್ಬಂಧಕ್ಕೆ ಒಳಗಾಗಬೇಕಾಯಿತು. ಆದರೆ ನಮ್ಮ ದೃಷ್ಟಿಯಲ್ಲಿದ್ದ ಉದ್ದೇಶ ಈಗ ಈಡೇರಿದೆ ಮತ್ತು ಈಗ ನಮ್ಮ ಓದುಗರನ್ನು ಬಹುಮಟ್ಟಿಗೆ 64 ಪುಟಗಳಲ್ಲಿರುವ ಇಂತಹ ಶ್ರಮಿಸಿ ತಿಳಿದು–ಕೊಳ್ಳಬೇಕಾದ ಬೌದ್ಧಿಕ ಸಾಧನೆಗೆ ಒಳಪಡಿಸುವುದಕ್ಕೆ ನಮಗೆ ಹಕ್ಕಿಲ್ಲವೆಂಬುದನ್ನು ಗುರುತಿಸಿದ್ದೇವೆ. ಹಾಗಾಗಿ ಮುಂದಿನ ವರ್ಷದಿಂದ ಪತ್ರಿಕೆಯಲ್ಲಿನ ಹೆಚ್ಚು ಸ್ಥಳವನ್ನು ಕಡಿಮೆ ಗಾಢವಾದ ಹೆಚ್ಚು ಜನಪ್ರಿಯವಾದ ರೀತಿಯಲ್ಲಿ ಬರೆದ ಲೇಖನಗಳಿಗೆ ಮೀಸಲಾಗಿಡುತ್ತೇವೆ. ಪತ್ರಿಕೆಯಲ್ಲಿ ಪ್ರಕಟವಾಗುವ ವಿಷಯ ಯಾವಾಗಲೂ ತತ್ವಶಾಸ್ತ್ರದ ಪುನರ್ವಿಮರ್ಶೆಯ ವ್ಯಾಖ್ಯೆಯಡಿಯಲ್ಲಿ ಮತ್ತು 'ಆರ್ಯ' ಪ್ರತಿನಿಧಿಸುತ್ತಿರುವ ಮೂಲಭೂತ ಯೋಚನೆಯ ಮಧ್ಯದಲ್ಲಿ ಇರುವುದು ಎಂಬುದನ್ನು ಹೇಳಬೇಕಾದ ಆವಶ್ಯಕತೆಯಿಲ್ಲ.

ನಾವು ದೈವೀ ಜೀವನ (Life Divine), ಯೋಗ ಸಮನ್ವಯ (Synthesis of yoga) ಮತ್ತು ವೇದ ರಹಸ್ಯ (Secret of Veda) ಇವುಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆ, ಆದರೆ ಆಯ್ದ ಸ್ತೋತ್ರ ಪಾಠಗಳ ಸ್ಥಾನದಲ್ಲಿ ಅತ್ರಿ ಅವರ ಸ್ತೋತ್ರ ಪಾಠಗಳ ಅನುವಾದವನ್ನು ಇರಿಸುತ್ತೇವೆ (ಋಗ್ವೇದದ 5ನೆಯ ಮಂಡಲ), ಅವುಗಳನ್ನು ಹೇಗೆ ಕಲ್ಪಿಸಲಾಗಿದೆಯೆಂದರೆ ವೈದಿಕ ಶ್ಲೋಕಗಳು ಒಮ್ಮೆಗೆ ಮತ್ತು ಸರಳವಾಗಿ, ಸಾಮಾನ್ಯ ಓದುಗನಿಗೆ, ತಿಳಿಯುವಹಾಗಿವೆ, ಅವುಗಳಿಗೆ ಭಾಷ್ಯ ಬರೆಯುವ ಆವಶ್ಯಕತೆ ಇಲ್ಲ. ಪತ್ರಿಕೆಯ ಫ್ರೆಂಚ್ ಆವೃತ್ತಿಯನ್ನು ನಿಲ್ಲಿಸಬೇಕಾದ ನಿರ್ಬಂಧಕ್ಕೊಳಪಡಿಸಿದ ಪರಿಸ್ಥಿತಿಯೇ 'ಜಗತ್ತುಗಳು ಯಾವ ಕಾರಣಕ್ಕಾಗಿ' (Wherefore of the Worlds) ಲೇಖನದ ಪ್ರಕಟಣೆಯನ್ನು ನಿಲ್ಲಿಸಬೇಕಾಗಿದೆ. ಸಂತೋಷಕರ ವಿಷಯವೆಂದರೆ ಅದನ್ನು ಒಂದು ಹಂತದವರೆಗೆ ತರಲು ಸಾಧ್ಯವಾಗಿದೆ ಎಂಬುದು. ಅದರಲ್ಲಿ ಲೇಖಕರ ಕೇಂದ್ರ ವಿಚಾರ ಪ್ರಕಟವಾಗಿದೆ: ದೈವೀ ಪ್ರೇಮವನ್ನು ಮತ್ತೆ ಗಳಿಸುವುದರ ಮೂಲಕ

ನಮ್ಮ ಜಗತ್ತಿನ ನವ ನಿರ್ಮಾಣ ಮಾಡುವುದು ಆ ಕೇಂದ್ರ ವಿಷಯವಾಗಿದೆ – ಅದು ಸದ್ಯ ಜಗತ್ತು ಒಳಗಾಗಿರುವ ಭಯಾನಕ ಸತ್ವ ಪರೀಕ್ಷೆಯ ಕ್ಷಣದ ಮೇಲೆ ನಂಬಿಕೆ ಹಾಗೂ ತರ್ಕಗಳ ಮೂಲಕ ತಡೆದು ನಿಲ್ಲುವ ಸೂಚನೆಗೆ ಯೋಗ್ಯ ವಿಷಯವಾಗಿದೆ.

ಯಾವುದು ಒಳ್ಳೆಯದು, ಯಾವುದನ್ನು ಉಪಯೋಗಿಸಬೇಕು, ಯಾವುದನ್ನು ಬದಿಗೆ ಚೆಲ್ಲಿಬಿಡಬೇಕು ಎಂಬುದನ್ನು ಅರಿತ ಭಗವಂತನ ದೈವೀ ಸಂಕಲ್ಪವಿಲ್ಲದೆ ನಮ್ಮ ಸೀಮಿತ ದೃಷ್ಟಿಯಿಂದ ಭರವಸೆ ಇಟ್ಟುಕೊಂಡ ಯಾವ ಮಾನವ ಕಾರ್ಯವೂ ಪೂರ್ತಿಗೊಳ್ಳದು. ಆ ದೈವೀ ಸಂಕಲ್ಪಕ್ಕೆ ಪತ್ರಿಕೆಯ ಮುಂದು–ವರಿಕೆಯನ್ನು ಮತ್ತು ನಮ್ಮ ಶ್ರಮಸಾಧನೆಗಳ ಪರಿಣಾಮವನ್ನು ಒಪ್ಪಿಸುತ್ತೇವೆ; ಎರಡನೆಯ ವರ್ಷದ ಪ್ರಕಟಣೆ, ಇನ್ನೂ ನಮ್ಮನ್ನು ಬೆಂಬತ್ತಿರುವ ಜಗತ್ತಿನ ಭವ್ಯ ವಿಪ್ಲವದ (convulsion) ನಿರ್ಗಮನವನ್ನು ತೀವ್ರಗತಿಯಿಂದ ಮತ್ತು ಸುದೈವದಿಂದ ಕಾಣಲಿ ಎಂಬ ಅಭೀಪ್ಸೆಯೊಂದಿಗೆ 'ಆರ್ಯ' ಪತ್ರಿಕೆಯ ಮೊದಲನೆಯ ವರ್ಷದ ಪ್ರಕಟಣೆಯನ್ನು ಮುಕ್ತಾಯಗೊಳಿಸುತ್ತೇವೆ. ಮತ್ತು ತೋರಿಕೆಯಲ್ಲಿ ಕಂಡುಬರುವ ದುಷ್ಟವಾದದ್ದರ ಮೂಲಕ ಸಾಧ್ಯವಿದ್ದಷ್ಟು ಒಳ್ಳೆಯದನ್ನು ತರುವ ದೈವೀ ಸಾಮರ್ಥ್ಯದ ಮೂಲಕ ಈ ನಾಶಕಾರಕ, ಆದರೆ ಪೂರ್ವಭಾವಿಯಾಗಿ ಕಂಡುಕೊಂಡ ಹಳೆಯ ಕಾಲದ ಕ್ರಮ ಪತನಗೊಂಡು ಹೊಸ ಮತ್ತು ಒಳ್ಳೆಯದಾದ ಕ್ರಮ ಹೊರಹೊಮ್ಮುವಂತಾಗಲಿ, ಆ ಹೊಸ ಕ್ರಮ ಪ್ರೇಮ, ವಿವೇಕ ಮತ್ತು ಏಕತೆ ಮತ್ತು ನಮ್ಮ ಕೊನೆಯ ಗುರಿಯನ್ನು ಕುರಿತು ಮನುಕುಲದ ಅರ್ಥಪೂರ್ಣ ಮುಂದುವರಿಕೆ ಇವುಗಳು ಜಯ ಸಾಧಿಸುವ ಮೂಲಕ ಗುರುತಿಸುವಂತಾಗಲಿ – ಮನುಕುಲದಲ್ಲಿಯ ಆತ್ಮ ಮತ್ತು ಮಾನವನಲ್ಲಿರುವ ದೈವಿಕತೆ ಇವುಗಳ ಪ್ರಜ್ಞಾಪೂರ್ಣ ಏಕತೆ ನಮ್ಮ ಕೊನೆಯ ಗುರಿಯಾಗಿದೆ.

**(CWSA, 13/101–02)** **– ಶ್ರೀ ಅರವಿಂದರು**

*

ತನ್ನ ಮಿಂಚಿಹೊಳೆಯುವ ಪಾದಗಳಿಂದ ಹಲವಾರು ಸಲ ಸ್ಫೂರ್ತಿ,
ಎಲ್ಲವನು ನೋಡುವ ಎತ್ತರಗಳಿಂದ ಒಮ್ಮೆಗೆ ಬಂದ ಸಂದೇಶವಾಹಕವಾಗಿ
ಅದು ತನ್ನ ಅಡಗಿರುವ ವಿಷಯಗಳ ಲಯಬದ್ಧ ಅರ್ಥವನು ತರುತ
ಅವನ ಮನಸ್ಸಿನ ಸದ್ದಿಲ್ಲದ ಮೊಗಸಾಲೆ[1]ಗಳಲಿ ಹಾಯ್ದು ಹೋಗಿಹುದು,

1. ಮೊಗಸಾಲೆ = Corridor



ಮರ್ತ್ಯ ಮಾತನು ಮೀರಿ ಹೋಗುವ ಸಂಗೀತವೊಂದು ಮಾತನಾಡಿಹುದು.
ಎಲ್ಲ ದಿವ್ಯಾನಂದವಿರುವ ಸುವರ್ಣ ಶೀಸೆಯೊಳಗಿಂದ ಬಂದಂತೆ
ಪ್ರಕಾಶದ ಸಂತೋಷ, ಒಮ್ಮೆಗೆ ಕಂಡ ದೃಶ್ಯದ ಸಂತೋಷ
ನವಿರೇಳಿಸುವ ಅಮರ ದೈವೀ ಶಬ್ದದ ಪರಮಾನಂದ
ಇವೆಲ್ಲ ಸುರಿದವು ಖಾಲಿ ಬಟ್ಟಲಿನಂತಿರುವ ಅವನ ಹೃದಯದಲಿ,

**(Savitri, p.38)** **– ಶ್ರೀ ಅರವಿಂದರು**

*




ಅಗಾಧ ಅಂತಃಕರಣವಿರುವ ದಾರ್ಶನಿಕನೆ, ರಹಸ್ಯಗಳ ದಿವ್ಯ ರಾಜನೆ,
ದೇವನ ಹೃದಯದಿಂದ ಚಿಮ್ಮಿತು ಪ್ರೇಮದ ನಿಗೂಢ ಚಿಲುಮೆ,
ನಿನಗೆ ತಿಳಿದಿರುವ ಮಾರ್ಗಗಳಲಿ ಯಾವ ಹೆಜ್ಜೆಗಳ ಸದ್ದಿಲ್ಲ.
ಶಬ್ದಗಳು ಬೆಳಕು ಬೀರುತ್ತ ನೆಗೆದವು, ವಿವೇಚನಾ ಸಾಗರದ ಅಲೆಗಳವು.
ನಿನ್ನಾತ್ಮದಲಿ ವಿಶಾಲವಾಗಿ ಸ್ವರ್ಗ–ಸಾಗರ ತೀರಗಳನು ತೊಳೆವ ತೆರೆಯೊಂದಿತ್ತು,

ಉರಿಯುತ್ತ ಮುಕ್ತ ಚಿಂತನಗಳು ಹರಿದುಬಂದವು ಮಾನವ ರಾತ್ರಿಯನು ದಾಟುತ್ತ,
ದೈವೀ ಬೆಳಕಿನ ಗ್ರಂಥಗಳಿಂದ ಜನಿಸಿದ ದೇವತೆಗಳ ಶ್ವೇತ ಶ್ರೇಷ್ಠ ಬರಹಗಳನು
ಪುಟ ಪುಟಗಳಲಿ ಕರುಣಿಸಲಾಗಿತ್ತು ಭುವಿಯ ಮಬ್ಬು ಮಕ್ಕಳಿಗೆ.

**(CWSA, 2/677)** – **ಶ್ರೀ ಅರವಿಂದರು**

*

## ‘ಆರ್ಯ’ ಪತ್ರಿಕೆಗೆ ಲೇಖನಗಳನ್ನು ಬರೆಯುವ ವಿಧಾನ

ಬರೆಯುವುದಕ್ಕಾಗಿ ನಾನು ಯಾವ ಪ್ರಯತ್ನವನ್ನೂ ಮಾಡಿಲ್ಲ, ಉಚ್ಚತರ ದೈವೀ ಸಾಮರ್ಥ್ಯ ಕಾರ್ಯಮಾಡಲು ಅನುವು ಮಾಡಿಕೊಟ್ಟೆ ಮತ್ತು ಅದು ಕಾರ್ಯಮಾಡದೆ ಇದ್ದಾಗ ನಾನು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಬೌದ್ಧಿಕವಾಗಿ ಕಾರ್ಯಮಾಡುತ್ತಿದ್ದ ಹಳೆಯ ರೀತಿಯಲ್ಲಿ ನಾನು ಕೆಲವೊಮ್ಮೆ ವಿಷಯಗಳು ಹೊರಬರುವಂತೆ ಒತ್ತಾಯಪೂರ್ವಕ ಪ್ರಯತ್ನಿಸುತ್ತಿದ್ದೆ, ಆದರೆ ನಾನು ಯೋಗದ ಮೂಲಕ ಕಾವ್ಯ ಹಾಗೂ ಗದ್ಯ ರೂಪದ ಬರಹಗಳನ್ನು ಅಭಿವೃದ್ಧಿಗೊಳಿಸಿದ ನಂತರ ಹಾಗೆ ಮಾಡಲಿಲ್ಲ. ಹಾಗೆಯೇ ನಿಮ್ಮ ನೆನಪಿಗೆ ತಂದುಕೊಡಬೇಕಾದುದೆಂದರೆ ‘ಆರ್ಯ’ ಪತ್ರಿಕೆಗಾಗಿ ಬರೆಯುತ್ತಿದ್ದಾಗ ಮತ್ತು ಆಗಿನಿಂದ ಈ ಬಗೆಯ ಪತ್ರಗಳಿಗೆ ಉತ್ತರ ಬರೆಯುವಾಗ ನಾನು ಯೋಚಿಸುವುದಿಲ್ಲ ಇಲ್ಲವೆ ಅಭಿವ್ಯಕ್ತಿಗಾಗಿ ಇಲ್ಲವೆ ಒಳ್ಳೆಯ ಶೈಲಿಯಲ್ಲಿ ಬರೆಯುವುದಕ್ಕಾಗಿ ಪ್ರಯತ್ನಪಡುವುದನ್ನು ಅರಸುವುದಿಲ್ಲ. ಮೇಲಿನಿಂದ ತಯಾರಾದ ರೂಪದಲ್ಲಿ ಬರುವುದನ್ನು ನಿಶ್ಚಲ ನೀರವತೆಯಲ್ಲಿರುವ ಮನಸ್ಸಿನಿಂದ ಬರೆಯುತ್ತೇನೆ. ತಿದ್ದುಪಡೆ ಮಾಡುವುದಕ್ಕೂ ಕೂಡ ಅದು ಮೇಲಿನಿಂದ ಬರುವುದಕ್ಕಾಗಿ ಕಾದುಕೊಂಡಿರುತ್ತೇನೆ. ಹಾಗಾಗಿ “ನನ್ನ ಶ್ರೇಷ್ಠ ಪ್ರಯತ್ನಗಳು” ಎಂದು ಕರೆಯಲಾದವುಗಳನ್ನು ಕುರಿತು ಚಿಕ್ಕ ಪ್ರಯತ್ನಕ್ಕಾಗಿ ಕೂಡ ಸ್ಥಾನವಾಗಲಿ, ಅವಕಾಶವಾಗಲಿ ಎಲ್ಲಿದೆ? ಸರಿ?

ಪ್ರಾಸಂಗಿಕವಾಗಿ ನೀವು ತಿಳಿದುಕೊಳ್ಳಬೇಕಾದುದೆಂದರೆ ಅತಿ–ಬೌದ್ಧಿಕವಾದುದು (Super-intellectual) (ಅತಿಮಾನಸವಷ್ಟೇ ಅಲ್ಲ) ಸ್ವಯಂಪ್ರೇರಿತ ಮತ್ತು ಸ್ವಯಂಚಾಲಿತ ಕ್ಷೇತ್ರವಾಗಿದೆ ಎಂಬುದು.

**(CWSA, 27/216–17)**

ಕ್ರಿಯೆಗೆ ಆಧಾರವಾಗಬಲ್ಲ ಇಲ್ಲವೆ ಅದನ್ನು ಉತ್ಪಾದಿಸುವ ಸ್ಥಿರತೆ ಇಲ್ಲವೆ



ನಿಶ್ಚಲ ನೀರವತೆ – ಇದನ್ನು ನಾನು ಅರಿತಿದ್ದೇನೆ ಮತ್ತು ಅದೇ ನನ್ನಲ್ಲಿತ್ತು – ಅದಕ್ಕೆ ಪ್ರಮಾಣವೆಂದರೆ ಮನಸ್ಸಿನ ಸಂಪೂರ್ಣ ನಿಶ್ಚಲ ನೀರವತೆಯೊಂದಿಗೆ ನಾನು ‘ಬಂದೇ ಮಾತರಮ್’ ಪತ್ರಿಕೆಯ ಸಂಪಾದಕನಾಗಿ ನಾಲ್ಕು ತಿಂಗಳ ಕಾಲ ಕಾರ್ಯಮಾಡಿದ್ದೆ ಮತ್ತು ಆರ್ಯ ಪತ್ರಿಕೆಯ ಆರೂವರೆ ಸಂಪುಟಗಳಿಗಾಗಿ ಲೇಖನಗಳನ್ನು ಬರೆದಿದ್ದೆ, ಅದಕ್ಕೆ ಹೊರತಾಗಿ ಅಂದಿನಿಂದ ಬರೆದ ಪತ್ರಗಳು ಹಾಗೂ ಸಂದೇಶಗಳನ್ನು ಕುರಿತು ಬೇರೆ ಹೇಳಬೇಕಾಗಿಲ್ಲ.

ಆರ್ಯ ಪತ್ರಿಕೆಗಾಗಿ ಬರೆಯುತ್ತಿದ್ದಾಗ ವಿಷಯಗಳನ್ನು ಕುರಿತು ಮನಸ್ಸಿಗೆ ಅಧಿಮಾನಸ ದೃಷ್ಟಿಕೋನವನ್ನು ಮುಂದಿರಿಸುತ್ತಿದ್ದೆ, ಅದನ್ನು ಮಾನಸಿಕ ಶಬ್ದಗಳಲ್ಲಿ ಇರಿಸುತ್ತಿದ್ದೆ, ಆ ಕಾರಣದಿಂದಾಗಿ ನಾನು ಕೆಲವೊಮ್ಮೆ ತರ್ಕಶಾಸ್ತ್ರವನ್ನು ಉಪಯೋಗಿಸಬೇಕಾಗುತ್ತಿತ್ತು. ಬೌದ್ಧಿಕವಾದದ್ದು ಮತ್ತು ಅತಿ–ಬೌದ್ಧಿಕವಾದದ್ದು ಇವುಗಳ ನಡುವೆ ಕೈಕೊಳ್ಳಬೇಕಾದ ಇಂತಹ ಕಾರ್ಯದಲ್ಲಿ ಶುದ್ಧ ಮಾನಸಿಕಮಟ್ಟದ ತತ್ವಶಾಸ್ತ್ರಗಳಲ್ಲಿ ತರ್ಕಶಾಸ್ತ್ರಕ್ಕೆ ಇರುವ ಮುಖ್ಯ ಸ್ಥಾನ ಇರುವುದು ಸಾಧ್ಯವಾಗದು. ಮಾಯಾವಾದಿಯೇ ಸ್ವತಃ ತನ್ನ ದೃಷ್ಟಿಕೋನವನ್ನು ಇಲ್ಲವೆ ಅನುಭವವನ್ನು ಸ್ಥಾಪಿಸಲು ಕಟ್ಟುನಿಟ್ಟಿನ ತರ್ಕಬದ್ಧ ಯೋಚನೆ ಮಾಡುವುದಕ್ಕಾಗಿ ಶ್ರಮಿಸುತ್ತಾನೆ. ಮಾಯೆಯನ್ನು ಕುರಿತು ವಿವರಣೆ ಕೊಡಬೇಕಾದಾಗ, ಅವನು ಪ್ರಕೃತಿಯೊಡನೆ ವ್ಯವಹರಿಸುವ ವಿಜ್ಞಾನಿಯ ಹಾಗೆ ವಿಶ್ವಂಭರ ರಹಸ್ಯ ಮುಸುಕುಹಾಕುವುದರ ವಿಧಾನ ಕುರಿತು ತನ್ನ ವಿಚಾರಗಳನ್ನು ವ್ಯವಸ್ಥಿತಗೊಳಿಸಬಹುದು ಮತ್ತು ಸಂಘಟಿಸಬಹುದು, ಅದಕ್ಕಿಂತ ಹೆಚ್ಚಿನದೇನನ್ನೂ ಮಾಡಲಾಗದು. ಭ್ರಮಾತ್ಮಕ, ದಿಗ್ಭ್ರಮೆಗೊಳಿಸುವ ಮಾಯೆ ಅಸ್ತಿತ್ವದಲ್ಲಿ ಹೇಗೆ ಅಥವಾ ಏಕೆ ಬಂದಿತು ಎಂಬುದನ್ನು ಅವನು ವಿವರಿಸಲಾರನು. “ಸರಿ, ಆದರೆ ಅದಲ್ಲಿದೆ” ಎಂದು ಮಾತ್ರ ಹೇಳಬಲ್ಲನು.

ಸಹಜವಾಗಿ ಅದು ಅಲ್ಲಿದೆ, ಆದರೆ ಮೊದಲ ಪ್ರಶ್ನೆ “ಅದಿರುವುದಾದರೂ ಏನು? ಅದು ಭ್ರಮೆ ಹುಟ್ಟಿಸುವ ದೈವೀಶಕ್ತಿಯಲ್ಲದೆ ಬೇರೇನೂ ಅಲ್ಲವೆ? ಇಲ್ಲವೆ ಅದನ್ನು ಕುರಿತಾದ ಮಾಯಾವಾದಿಯ ವಿಚಾರ ತಪ್ಪಾದ ಮೊದಲ ದೃಷ್ಟಿಕೋನ–ವಾಗಿದೆಯೆ? ಅಪರಿಪೂರ್ಣವಾಗಿ ಅದನ್ನು ಓದಿದ ಮೊದಲ ಸಲವಾಗಿದೆಯೆ? ಇಲ್ಲವೆ ಆ ಭ್ರಮೆಯೇ ಒಂದು ಭ್ರಮೆಯಾಗಿದೆಯೆ? ಈ ಭ್ರಮೆ ಮಾತ್ರ ಭಗವಂತನ ದೈವೀ ಪ್ರಜ್ಞೆ ಇಲ್ಲವೆ ಅತಿಮಾನಸ ಪ್ರಜ್ಞೆ ತನ್ನ ವಶದಲ್ಲಿಟ್ಟುಕೊಂಡಿರುವ ಅತ್ಯುಚ್ಚ ಸಾಮರ್ಥ್ಯವಾಗಿದೆಯೆ?

**(CWSA, 35/248)**

**ಪ್ರಶ್ನೆ :** *ಜನರು ನಿಮ್ಮನ್ನು ತತ್ವಜ್ಞಾನಿ ಎಂದು ಕರೆದರೂ "ನಾನು ತತ್ವಶಾಸ್ತ್ರವನ್ನು ಎಂದೂ ಕಲಿತುಕೊಂಡಿರಲಿಲ್ಲ" ಎಂದು 'ಕ್ಷ'ನಿಗೆ ಬರೆದ ಪತ್ರದಲ್ಲಿ ಹೇಳಿದ್ದೀರಿ. ಸರಿ, ನೀವು ಆರ್ಯ ಪತ್ರಿಕೆಯಲ್ಲಿ ಬರೆದದ್ದು ಎಷ್ಟೊಂದು ತಾತ್ವಿಕ ವಿಚಾರವನ್ನು ಹೊಂದಿದೆ ಎಂದರೆ ಜಗತ್ತಿನ ಅತಿ ಶ್ರೇಷ್ಠ ತತ್ವಜ್ಞಾನಿ ಅಂತಹದನ್ನು ಬರೆಯಬಲ್ಲೆನೆಂದು ನಿರೀಕ್ಷಿಸಲಾರ. ಹೊಸ ದೈವೀ ಸತ್ಯವನ್ನು ಕೆಳಗಿಳಿಸಿ ತರುವ ವಿಚಾರ ಕುರಿತು ನಾನು ಹೇಳುತ್ತಿಲ್ಲ, ಆದರೆ ಅಭಿವ್ಯಕ್ತಪಡಿಸುವ ಸಾಮರ್ಥ್ಯವನ್ನು ಕುರಿತು, ಬುದ್ಧಿಶಕ್ತಿಯಿಂದ, ತರ್ಕದಿಂದ ವಾದ ಮಾಡುವ ಕಲೆಯನ್ನು ಕುರಿತು ಹೇಳುತ್ತಿದ್ದೇನೆ.*

**ಶ್ರೀ ಅ :** ನನ್ನ ತತ್ವಶಾಸ್ತ್ರದಲ್ಲಿ ಅತಿ ಕಡಿಮೆ ವಾದವಿದೆ – ತತ್ವಶಾಸ್ತ್ರಜ್ಞ ತನ್ನ ತೀರ್ಮಾನಗಳನ್ನು ಪ್ರತಿಷ್ಠಾಪಿಸಲು ವಿವರವಾಗಿ ಪರ್ಯಾಲೋಚಿಸಿ ಕೈಕೊಳ್ಳುವ, ಅಮೂರ್ತ ಶಬ್ದಗಳಿಂದ ತುಂಬಿಕೊಂಡ ತತ್ವಶಾಸ್ತ್ರೀಯ ತಾರ್ಕಿಕ ವಿಧಾನ ಇಲ್ಲಿಲ್ಲ. ಇಲ್ಲಿದ್ದದ್ದು ಹಲವಾರು ಬದಿಗಳುಳ್ಳ ಜ್ಞಾನದ ಭಿನ್ನ ಭಾಗಗಳನ್ನು ಸಾಮರಸ್ಯ–ದಲ್ಲಿರಿಸುವುದಾಗಿದೆ, ಅದರಿಂದಾಗಿ ಎಲ್ಲವೂ ತರ್ಕಬದ್ಧವಾಗಿ ಒಟ್ಟುಗೂಡುತ್ತದೆ.

*

## 'ಆರ್ಯ' ಪತ್ರಿಕೆ ಕುರಿತು ಶ್ರೀ ಅರವಿಂದರು ತಮ್ಮ ಶಿಷ್ಯ ದಿಲೀಪ ಕುಮಾರ ರಾಯ್ ಅವರಿಗೆ ಬರೆದ ಪತ್ರ

ಮತ್ತು ತತ್ವಶಾಸ್ತ್ರ! ನಾನು ಎಂದೆಂದಿಗೂ ತತ್ವಶಾಸ್ತ್ರಜ್ಞನಾಗಿರಲಿಲ್ಲ ಎಂಬುದನ್ನು ನಿನಗೆ ಗುಟ್ಟಿನಲ್ಲಿ ಹೇಳುವೆ. ನಾನು ತತ್ವಶಾಸ್ತ್ರದ ವಿಷಯವನ್ನು ಬರೆದಿದ್ದೇನೆ, ಅದು ಒಟ್ಟಿನಲ್ಲಿ ಇನ್ನೊಂದು ವಿಷಯ. ನಾನು ಯೋಗಾಚರಣೆಯನ್ನು ಕೈಕೊಂಡು ಪಾಂಡಿಚೇರಿಗೆ ಬರುವ ಮೊದಲು ನನಗೆ ತತ್ವಶಾಸ್ತ್ರದ ಬಗ್ಗೆ ಕನಿಷ್ಠ ಮಟ್ಟದ ಅರಿವಿತ್ತು – ನಾನು ಕವಿ ಹಾಗೂ ರಾಜಕಾರಣಿಯಾಗಿದ್ದೆ, ತತ್ವಶಾಸ್ತ್ರಜ್ಞನಾಗಿರಲಿಲ್ಲ. ನಾನು ತತ್ವಶಾಸ್ತ್ರಜ್ಞ ಆದದ್ದು ಹೇಗೆ? ಮೊದಲನೆಯದಾಗಿ ರಿಚರ್ಡ ತತ್ವಶಾಸ್ತ್ರ ಕುರಿತು ಪುನರ್ವಿಮರ್ಶೆ ಮಾಡುವ ಕಾರ್ಯದಲ್ಲಿ ಸಹಕಾರ ನೀಡುವೆನೆಂದು ಪ್ರಸ್ತಾಪ ಮಾಡಿದ್ದ ಮತ್ತು ಯೋಗಿಯಾಗಿರುವ ನಾನು ನನ್ನ ಕೈಯನ್ನು ಯಾವುದೇ ವಿಷಯದತ್ತ ಹೊರಳಿಸಬಹುದು ಎಂಬ ಸಿದ್ಧಾಂತವನ್ನಿಟ್ಟುಕೊಂಡಿದ್ದೆ. ಹಾಗಾಗಿ ನಾನು ಆ ಪ್ರಸ್ತಾಪವನ್ನು ತಿರಸ್ಕರಿಸಲಿಲ್ಲ, ಮತ್ತು ನಂತರ ರಿಚರ್ಡ ಯುದ್ಧ ಕಾರ್ಯದಲ್ಲಿ ತೊಡಗಿಕೊಳ್ಳಬೇಕಾದುದರಿಂದ ನನ್ನನ್ನು ಕಷ್ಟದಲ್ಲಿ ಕೈಬಿಟ್ಟು ಹೊರಟುಹೋದ. ಆರ್ಯ ಪತ್ರಿಕೆಗಾಗಿ ಪ್ರತಿ ತಿಂಗಳು 64 ಪುಟಗಳನ್ನು



ತುಂಬುವಷ್ಟು ತತ್ವಶಾಸ್ತ್ರದ ವಿಷಯವನ್ನು ನಾನು ಏಕಾಕಿಯಾಗಿ ಬರೆಯಬೇಕಾಯಿತು. ಎರಡನೆಯದಾಗಿ ಬುದ್ಧಿಮತ್ತೆ ಸೂಚಿಸುವ ಶಬ್ದಗಳಲ್ಲಿ ನಾನು ಅವಲೋಕಿಸಿದ್ದನ್ನು ಮತ್ತು ದಿನನಿತ್ಯದ ಯೋಗಾಚರಣೆಯಿಂದ ಬಂದದ್ದನ್ನು ಬರೆದಿಡಬೇಕಾಗಿತ್ತು, ಅಲ್ಲಿ ತತ್ವಶಾಸ್ತ್ರ ಸ್ವಯಂಚಾಲಿತವಾಗಿ ಇತ್ತು. ಆದರೆ ಅದು ತತ್ವಶಾಸ್ತ್ರಜ್ಞನಾಗುವುದಲ್ಲ.

**(CWSA, 35/70)** – ಶ್ರೀ ಅರವಿಂದರು

*

## 'ಆರ್ಯ' ಪತ್ರಿಕೆಯಲ್ಲಿರುವ ವಿಷಯವನ್ನು ತಿಳಿದುಕೊಳ್ಳುವುದರಲ್ಲಿ ಕಷ್ಟವಿರುವುದಕ್ಕೆ ಕಾರಣ

ಆರ್ಯ ಪತ್ರಿಕೆ ಕುರಿತು ಅದೇ ಬಗೆಯ ದೂರಿದೆ. ಜನರು ಅದನ್ನು ಅರ್ಥಮಾಡಿಕೊಳ್ಳಲಾರರು. ಓದಿ ತಿಳಿದುಕೊಳ್ಳುವುದಕ್ಕೆ ಯಾರು ಅಷ್ಟೊಂದು ಯೋಚನೆ ಮತ್ತು ಪರಿಗಣಿಸುವಿಕೆಗಳನ್ನು ಕೊಡಲು ಬಯಸುತ್ತಾರೆ ...

ಇದನ್ನು ಕುರಿತು ನಾನು ದೀರ್ಘ ಕಾಲದಿಂದ ಅವಲೋಕಿಸುತ್ತ ಬಂದಿರುವ ಒಂದೆರಡು ವಿಷಯಗಳನ್ನು ಕುರಿತು ಸಂಕ್ಷಿಪ್ತವಾಗಿ ಹೇಳಲು ಬಯಸುತ್ತೇನೆ. ಭಾರತೀಯರ ಆ ದೌರ್ಬಲ್ಯಕ್ಕೆ ಮುಖ್ಯಕಾರಣ ಪರಾಧೀನತೆಯಲ್ಲ, ಬಡತನವಲ್ಲ, ಆಧ್ಯಾತ್ಮಿಕತೆ ಅಥವಾ ಧಾರ್ಮಿಕತೆ ಇವುಗಳಲ್ಲಿ ಕೊರತೆ ಇದೆ ಎಂದಲ್ಲ, ಆದರೆ ಯೋಚನೆ ಮಾಡುವ ಸಾಮರ್ಥ್ಯ ಕುಂದಿಹೋಗಿರುವುದಾಗಿದೆ, ಜ್ಞಾನವಿರಬೇಕಾದ ಸ್ಥಳದಲ್ಲಿ ಅಜ್ಞಾನ ಹರಡಿಕೊಂಡಿದೆ ಎಂಬ ನಂಬಿಕೆ ನನ್ನದಾಗಿದೆ. ಎಲ್ಲೆಡೆಯಲ್ಲಿ ಯೋಚನೆ ಮಾಡುವುದರಲ್ಲಿ ಅಶಕ್ತತೆ ಇಲ್ಲವೆ ಇಷ್ಟವಿಲ್ಲದಿರುವಿಕೆಯನ್ನು ನೋಡುತ್ತೇನೆ – ಯೋಚನೆ ಮಾಡುವುದರಲ್ಲಿ ಅಸಾಮರ್ಥ್ಯ ಇಲ್ಲವೆ "ಯೋಚನಾ ಭಯ"(thought-phobia). ಇದು ಮಧ್ಯಯುಗದಲ್ಲಿ ಸರಿಯಾಗಿರಬಹುದಾಗಿತ್ತು, ಆದರೆ ಈಗ ಈ ಮನೋಭಾವ ಭವ್ಯ ಕುಗ್ಗುವಿಕೆಯ ಕುರುಹಾಗಿದೆ. ಮಧ್ಯಯುಗ ರಾತ್ರಿಕಾಲದಂತಿರುವ ಅವಧಿಯಾಗಿತ್ತು, ಅಜ್ಞಾನದಲ್ಲಿರುವ ಮನುಷ್ಯ ಜಯಗಳಿಸು–ವಂತಹದಾಗಿತ್ತು, ಆಧುನಿಕ ಜಗತ್ತಿನಲ್ಲಿ ಜ್ಞಾನವಿದ್ದ ಮನುಷ್ಯ ಜಯಗಳಿಸುವ ಕಾಲ ಬಂದಿದೆ. ಜಗತ್ತಿನ ಸತ್ಯ ಕುರಿತು ಹೆಚ್ಚಿನ ರೀತಿಯಲ್ಲಿ ಯೋಚಿಸುತ್ತ, ಶೋಧಿಸುತ್ತ, ಶ್ರಮಿಸುತ್ತ ಒಳಹೊಕ್ಕು ಪರಿಶೀಲಿಸುವ ಹಾಗೂ ಕಲಿತುಕೊಳ್ಳುವ ಮನುಷ್ಯ ಹೆಚ್ಚಿನ ಸಾಮರ್ಥ್ಯಗಳಿಸುತ್ತಾನೆ ....

ನಮ್ಮ ನಾಗರಿಕತೆ ನಾರುವ ನಿಂತ ನೀರಿನ ಹಾಗಾಗಿದೆ, ನಮ್ಮ ಧರ್ಮ ಬಾಹ್ಯ

ರೂಪಗಳಿರುವ ಮತಾಂಧತೆಯಾಗಿದೆ, ಆಧ್ಯಾತ್ಮಿಕತೆ ಪ್ರಕಾಶದ ಮಬ್ಬು ಮಿನುಗಿನಂತಿದೆ ಮತ್ತು ಕ್ಷಣಿಕವಾಗಿ ತೋರಿಬರುವ ಅಮಲಿನ ತರಂಗದಂತಿದೆ. ವಿಷಯಗಳ ಈ ಸ್ಥಿತಿ ಉಳಿದುಕೊಂಡಿರುವವರೆಗೆ ಭಾರತದ ಯಾವುದೇ ಬಗೆಯ ಪುನರುಜ್ಜೀವನ ಅಸಾಧ್ಯವಾಗುವುದು.

**(ಬಂಗಾಲಿ ಬರಹಗಳು, p. 369–71)**

ಆರ್ಯ ಪತ್ರಿಕೆಯಲ್ಲಿ ಬಂಗಾಲಿ ಜನರು ಯಾವ ವಿಶೇಷವನ್ನು ಕಂಡುಕೊಳ್ಳದೆ ಇರುವುದು ವಿಷಾದನೀಯವಾದದ್ದು, ಆದರೆ ಆಶ್ಚರ್ಯಪಡುವಂತಹದೇನಲ್ಲ. ಅವರ ಬುದ್ಧಿಮತ್ತೆಗೆ ಯೋಚನೆಯ ರಾಸಾಯನಿಕ ಗುಳಿಗೆಗಳನ್ನು, ಮಸಾಲೆ ಕೂಡಿದ ಬಿಸಿ ಆಹಾರವನ್ನು ಕೊಡಲಾಗಿದೆ, ಹಾಗಾಗಿ ಬಲವುಳ್ಳ, ಸತ್ವವುಳ್ಳ ಯಾವುದನ್ನೂ ಅವರು ಜೀರ್ಣಿಸಿಕೊಳ್ಳಲಾರರು. ಅಲ್ಲದೆ ಭಾರತೀಯರು ಎರಡನೆಯವರಿಂದ ಪಡೆದ ವಿಚಾರಗಳನ್ನು ಮಾತ್ರ ರೂಢಿಸಿಕೊಳ್ಳುತ್ತಾರೆ – ಆರು ತತ್ವಶಾಸ್ತ್ರಗಳಲ್ಲಿ ಹೇಳಲಾದ ಹಳೆಯ ಪರಿಚಿತ ವಿಚಾರಗಳು, ಪತಂಜಲಿ ಶಾಸ್ತ್ರ ಇತ್ಯಾದಿ. ಜೀವನ, ಯೋಚನೆ, ಮತ್ತು ಯೋಗ ಇವುಗಳನ್ನು ಕುರಿತು ಯಾವುದೇ ಹೊಸ ನಿರೂಪಣೆ ಅವರ ನಿರೀಕ್ಷೆಗಳನ್ನು ತಲೆ ಕೆಳಗಾಗುವಂತೆ ಮಾಡುತ್ತದೆ ಮತ್ತು ಅದು ಅವರಿಗೆ ಅರ್ಥವಾಗುವುದಿಲ್ಲ. ಆರ್ಯ ಪತ್ರಿಕೆಯಲ್ಲಿ ವ್ಯಕ್ತಪಡಿಸಿದ ಯೋಚನೆ ಓದುಗನಿಂದ ನಿಕಟವಾಗಿ ಯೋಚನೆ ಮಾಡುವುದನ್ನು, ಅರ್ಥಮಾಡಿಕೊಳ್ಳುವುದನ್ನು ಒತ್ತಾಯದಿಂದ ಬೇಡುತ್ತದೆ, ಮತ್ತು ಜನರ ಮನಸ್ಸುಗಳು ಬಹಳ ಕಾಲದಿಂದ ಯೋಚನೆ ಮಾಡುವ ತೊಂದರೆಯನ್ನು ಬಿಟ್ಟುಕೊಡುವುದನ್ನು ರೂಢಿಸಿಕೊಂಡಿವೆ. ಅವರು ತಮ್ಮ ಮನಸ್ಸುಗಳಲ್ಲಿ ಹೇಗೆ ಲೋಲರಾಗಬೇಕೆಂಬುದನ್ನು ತಿಳಿದು–ಕೊಂಡಿದ್ದಾರೆ, ಆದರೆ ಅವುಗಳಿಗೆ ವ್ಯಾಯಾಮ ಮಾಡಿಸಬೇಕಾಗುತ್ತದೆಂಬುದನ್ನು ಮರೆತಿದ್ದಾರೆ.

ಸದ್ಯದ ಪರಿಸ್ಥಿತಿಯಲ್ಲಿ ಜನರು ಯೋಗದ ಆಚರಣೆ ಮಾಡುತ್ತಿದ್ದರೆ, ಅದನ್ನು ಕುರಿತು ಓದುತ್ತಿದ್ದರೆ, ಲಾಭಪಡೆಯುತ್ತಿದ್ದರೆ ಉಳಿದ ವಿಷಯಗಳು ಮಹತ್ವದ್ದಾಗಿರುವುದಿಲ್ಲ. 'ಆರ್ಯ' ಹೊಸ ತತ್ವಶಾಸ್ತ್ರವನ್ನು, ಹೊಸ ಯೋಗದ ವಿಧಾನವನ್ನು ನಿರೂಪಿಸುತ್ತದೆ, ಹೊಸದಾದ ಪ್ರತಿಯೊಂದು ಕೇಳಿಸಿಕೊಳ್ಳುವುದಕ್ಕೆ ಸಮಯ ತೆಗೆದುಕೊಳ್ಳುತ್ತದೆ. ಸಹಜವಾಗಿ, ನೈಜತೆಯಲ್ಲಿ, ಕೇವಲ ಹಳೆಯದನ್ನೇ ಮತ್ತೆ ಮುಂದೆ ತರಲಾಗಿರುತ್ತದೆ, ಆದರೆ ಅದೆಷ್ಟು ಹಳೆಯದೆಂದರೆ ಅದನ್ನು ಮರೆತುಬಿಡಲಾಗಿರುತ್ತದೆ. ಕೇವಲ ಅದನ್ನು ಆಚರಣೆಯಲ್ಲಿ ತರುವವರು ಹಾಗೂ ಅನುಭವಕ್ಕೆ ತಂದುಕೊಳ್ಳುವವರು ಮೊದಲು ಅರ್ಥಮಾಡಿಕೊಳ್ಳಬಲ್ಲರು. ಒಂದು



ರೀತಿಯಲ್ಲಿ ಇದು ಒಳ್ಳೆಯದಾದದ್ದು, ಏಕೆಂದರೆ ಅದರ ಉದ್ದೇಶ ಕೇವಲ ಜನರ ಬುದ್ಧಿಮತ್ತೆಗೆ ಸಮಾಧಾನ ತಂದುಕೊಡುವುದಾಗಿರದೆ ಅವರ ಜೀವನವನ್ನು ಬದಲು ಮಾಡುವುದಾಗಿದೆ.

**(CWSA, 36/224)**

'ಆರ್ಯ'ದಲ್ಲಿ ಕೈಕೊಂಡ ಕಾರ್ಯ ಆಧ್ಯಾತ್ಮಿಕ ತತ್ವಶಾಸ್ತ್ರ ಕುರಿತಾಗಿದೆ, ವ್ಯಕ್ತಿಗತ ಸಿದ್ಧಿಯ ಆಧಾರದ ಮೇಲೆ ಸ್ಥಾಪಿತವಾಗಿದೆ. ಆಧ್ಯಾತ್ಮಿಕ ವಿಷಯಗಳನ್ನು ಅವುಗಳ ಎಲ್ಲ ಬದಿಗಳನ್ನು ಕುರಿತು ಯೋಚನೆಗಳನ್ನು ಹೊರತರದ ಮನಸ್ಸುಗಳಿಗಾಗಿ ಅದನ್ನು ಕೊಡಲಾಗಿಲ್ಲ.

*

'ಆರ್ಯ' ಪತ್ರಿಕೆಯಲ್ಲಿಯ ವಿಷಯವನ್ನು ಅರ್ಥಮಾಡಿಕೊಳ್ಳಲು ಮನುಷ್ಯನಲ್ಲಿ ಸಾಕಷ್ಟು ತರಬೇತಿಗೊಳಗಾದ ಹಾಗೂ ಅಭಿವೃದ್ಧಿ ಹೊಂದಿದ ಬುದ್ಧಿಮತ್ತೆ ಇರಬೇಕು ಇಲ್ಲವೆ ಅನುಭವದ ಆಧಾರದೊಂದಿಗೆ ಅನುಭವವನ್ನು ಮಾನಸೀಕರಣಗೊಳಿಸಬಲ್ಲ ಕ್ಷಮತೆ ಇರಬೇಕು.

**(CWSA, 35/86)**

ಅವನು ತನ್ನನ್ನು ಯೋಗ್ಯನನ್ನಾಗಿ ಮಾಡಿಕೊಂಡರೆ ಅವನ ಅಭೀಪ್ಸೆ ತೃಪ್ತಿ ಕಂಡುಕೊಳ್ಳಬಹುದು. 'ಆರ್ಯ' ಪತ್ರಿಕೆಯನ್ನು ಓದುವುದನ್ನು ಅವನು ಮುಂದುವರಿಸಲಿ ಹಾಗೂ ದಿನಾಲು ಧ್ಯಾನದ ಕಾರ್ಯಕ್ರಮವನ್ನು ಆಚರಿಸುತ್ತಿರಲಿ. ಧ್ಯಾನದಲ್ಲಿ ಅವನು ಏಕಾಗ್ರತೆ ವಹಿಸಬೇಕಾದ ವಿಷಯಗಳು ಹೀಗಿವೆ: ಮೊದಲು ತಾನು ಓದುತ್ತಿರುವ ಕೇಂದ್ರ ಸತ್ಯಗಳ ವಿಷಯ ತನಗೆ ಪ್ರಜ್ಞಾಪೂರ್ಣ ಅನುಭವದಲ್ಲಿ ನೈಜವಾದವುಗಳಾಗಲಿ, ತನ್ನ ಮನಸ್ಸು ಸ್ಥಿರತೆ, ವೈಶಾಲ್ಯ, ಬಲ, ಶಾಂತಿ, ಪ್ರಕಾಶ ಹಾಗೂ ಆಧ್ಯಾತ್ಮಿಕ ಪ್ರಜ್ಞೆಯ ಆನಂದ ಇವುಗಳಿಗೆ ತೆರೆದುಕೊಂಡಿರಲಿ ಎಂಬ ಅಭೀಪ್ಸೆ ಅವನ ಧ್ಯಾನದಲ್ಲಿರಬೇಕು.

**(CWSA, 35/539)** – **ಶ್ರೀ ಅರವಿಂದರು**

*

## 'ಅಮೃತ'ನಿಗೆ ಶ್ರೀ ಅರವಿಂದರ ಮಾರ್ಗದರ್ಶನ

ಅಮೃತ ಆಗ ಎಳೆ ವಯಸ್ಸಿನವನಾಗಿದ್ದ, ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗಾಗಿ ಓದುತ್ತಿದ್ದ, ಆದರೆ ಅವನು ಅಕಸ್ಮಾತ್ತಾಗಿ "ಆರ್ಯ ಪತ್ರಿಕೆಯಲ್ಲಿದ್ದ ಮೊದಲ

ಘನತೆವೆತ್ತ ಲೇಖನ" – ದೈವೀ ಜೀವನ (Life Divine) ಕುರಿತು ಲೇಖನದ ಮಹೋನ್ನತ ಆದಿಭಾಗವನ್ನು ನೋಡಿದಾಗ ಅವನು ಅದನ್ನು ಅರ್ಥ ಗಟ್ಟಿ ಧ್ವನಿಯಿಂದ ತನ್ನಷ್ಟಕ್ಕೆ ತನಗೆ ಓದಿಕೊಳ್ಳಲು ಪ್ರಾರಂಭಿಸಿದ.

"ನಾನದನ್ನು ಮತ್ತೆ ಮತ್ತೆ ಓದಿದೆ. ಶ್ರೇಷ್ಠ ಯೋಚನೆಯು ಶ್ರೇಷ್ಠ ಶಬ್ದಗಳ ಹೊದಿಕೆ ಹೊದ್ದುಕೊಂಡಂತಿತ್ತು. – ನನಗೆ ಎಳ್ಳಷ್ಟೂ ಅರ್ಥವಾಗಲಿಲ್ಲ. ಹಾಗಿದ್ದಾಗ್ಯೂ ಅದನ್ನು ಮತ್ತೆ ಮತ್ತೆ ಓದುವುದು ಮಧುರವಾದದ್ದೆನಿಸುತ್ತಿತ್ತು. ನನ್ನಲ್ಲಿರುವ ಬೇರೆ ಯಾರೋ ಅದನ್ನು ಅರ್ಥಮಾಡಿಕೊಳ್ಳುತ್ತಿದ್ದಾರೆ ಎಂದೆನಿಸುತ್ತಿತ್ತು."

"ಓದುವದು ಹರ್ಷದಾಯಕವಾಗಿತ್ತು, ಆದರೆ ಏನನ್ನೂ ಗ್ರಹಿಸ–ಲಾಗುತ್ತಿರಲಿಲ್ಲ" ಎಂದು ಅಮೃತ ಶ್ರೀ ಅರವಿಂದರಿಗೆ ತಿಳಿಸಿದಾಗ ಅವರು ಅವನಿಗೆ ಆಶ್ಚರ್ಯವನ್ನುಂಟುಮಾಡುವ ಉತ್ತರ ಕೊಟ್ಟರು: "ಎಲ್ಲವನ್ನೂ ಒಮ್ಮೆಗೆ ಅರ್ಥಮಾಡಿಕೊಳ್ಳುವ ಆವಶ್ಯಕತೆ ಇಲ್ಲ. ಓದುವುದನ್ನು ಮುಂದುವರಿಸು. ಓದುವುದರಲ್ಲಿ ನೀನು ಸಂತೋಷ ಕಂಡುಕೊಳ್ಳುತ್ತಿದ್ದರೆ ಅದನ್ನು ನಿಲ್ಲಿಸುವುದು ಬೇಡ." ಒಟ್ಟಿನಲ್ಲಿ ಅದು ಮಂತ್ರ ಇಲ್ಲವೆ ಮಾಂತ್ರಿಕ ಸಾಮರ್ಥ್ಯ ಹೊಂದಿರುವಂತೆ ಬರೆದದ್ದು ಪರಿಣಾಮ ಬೀರುವ ರೀತಿ, ಏಕೆಂದರೆ ಅದರ ಅರ್ಥ ಒಂದಿಲ್ಲೊಂದು ರೀತಿಯಲ್ಲಿ ಆತ್ಮದ ಆಳಗಳೊಳಗೆ ಸೋಸಿ ಹೋಗುತ್ತದೆ.

ಕೇಳಿಸಿಕೊಳ್ಳುವವನು ಶಬ್ದಗಳ ಒಂದು ರೂಪವನು ತಿಳಿದುಕೊಳ್ಳುವನು,
ಅದು ಹಿಡಿದುಕೊಂಡಿರುವ ಸೂಚಿ ಯೋಚನೆಯ ಮೇಲೆ ಧ್ಯಾನಮಗ್ನನಾಗುತ್ತ,
ಶ್ರಮಪಡುವ ಮನದಿಂದ ಅದನ್ನು ಓದಲು ಹೆಣಗುವನು,
ಆದರೆ ಉಜ್ವಲ ಸೂಚನೆಗಳನವನು ಕಂಡುಕೊಳ್ಳುವನು, ಮೈವೆತ್ತ ಸತ್ಯವನ್ನಲ್ಲ:
ಆಗ ತಿಳಿದುಕೊಳ್ಳಲು ತನ್ನಲ್ಲಿಯೇ ನಿಶ್ಚಲ ನೀರವತೆಯಲ್ಲಿರುತ್ತ
ತನ್ನಾತ್ಮದ ಆಳಾತಿ ಆಳದ ಕೇಳಿಸಿಕೊಳ್ಳುವಿಕೆಯನವನು ಭೇಟಿಮಾಡುವನು:
ಲಯಬದ್ಧ ಎಳೆತಗಳಲ್ಲಿ ಶಬ್ದ ತನ್ನಷ್ಟಕ್ಕೆ ತಾನೇ ಪುನರುಚ್ಚಾರ ಮಾಡುವುದು
ಯೋಚನೆ, ದರ್ಶನ, ಭಾವನೆ, ಅರ್ಥ, ದೇಹದ ಆತ್ಮ
ಇವೆಲ್ಲ ಉಚ್ಚರಿಸಿ ಹೇಳಲಾಗದ ಹಾಗೆ ಹಿಡಿತಕೊಳಗಾಗುವವು,
ಭಾವಪರವಶತೆಯನು, ಅಮರ ಬದಲಾವಣೆಯನು ಅವನು ತಾಳಿಕೊಳ್ಳುವನು.

**(Savitri, p.375)** **– ಶ್ರೀ ಅರವಿಂದರು**

**– ಕೆ.ಆರ್. ಶ್ರೀನಿವಾಸ ಅಯ್ಯಂಗಾರ (On the Mother, p.119)**

*



# ಅವಶ್ಯವಾದ ಸಮನ್ವಯ

(ಆರ್ಯ ಪತ್ರಿಕೆಯ ಮೊದಲ ಸಂಚಿಕೆಯಲ್ಲಿ ಕೇಳಲಾದ ಆ ತಿಂಗಳ ಪ್ರಶ್ನೆ)

**ಪ್ರಶ್ನೆ :** *ಸದ್ಯದ ಕಾಲದಲ್ಲಿ ಯಾವ ಬಗೆಯ ಸಮನ್ವಯದ ಆವಶ್ಯಕತೆ ಇದೆ?*

**ಶ್ರೀ ಅ :** ನಿಸ್ಸಂಶಯವಾಗಿ ಮನುಷ್ಯನದೇ ಆಗಿದೆ. ಅವನ ಕಾರ್ಯ ಸಾಮರ್ಥ್ಯಗಳ ಸಾಮರಸ್ಯವಿರುವುದು ಅವನ ಶಾಂತಿಗೆ ಅವಶ್ಯವಾದ ಸ್ಥಿತಿ, ಅವು ಪರಸ್ಪರರನ್ನು ಅರಿತುಕೊಳ್ಳುವುದು ಮತ್ತು ಸಹಾಯ ಮಾಡುವ ಮನೋಭಾವ ಹೊಂದಿರುವುದು ಅವನ ಪರಿಪೂರ್ಣತೆಗೆ ಸಾಧನ. ಅವುಗಳಲ್ಲಿ ಸಮರವಿದ್ದಾಗ, ಅವನ ಸತ್ತೆಯ ರಾಜ್ಯವನ್ನು ಅವು ಕೆರಳಿಸುತ್ತವೆ. ಒಂದಕ್ಕೆ ನಷ್ಟವನ್ನುಂಟು ಮಾಡಿ ಇನ್ನೊಂದು ಗಳಿಸಿದ ಜಯ ಅವನ ಸ್ವ–ನೆರವೇರಿಕೆಯನ್ನು ಶಕ್ತಿಗುಂದಿಸುತ್ತದೆ.

ನಮ್ಮ ಯುಗದ ವಿಶಿಷ್ಟ ಗುಣಲಕ್ಷಣವೆಂದರೆ ತರ್ಕ ಮತ್ತು ನಂಬಿಕೆಗಳ ನಡುವೆ, ತರ್ಕಮಾಡುವ ಮನಸ್ಸು ಮತ್ತು ಅಂತರ್ಬೋಧೆಯ ಹೃದಯ ಇವುಗಳ ನಡುವೆ ವಿಚ್ಛೇದನವನ್ನು ಸಾರಿ ಹೇಳಿರುವುದಾಗಿದೆ. ಮೊದಲಿಗೆ ಅವುಗಳ ನಡುವೆ ಸಾರಿ ಹೇಳಲಾದ ವಿಚ್ಛೇದನ ನೋವನ್ನುಂಟು ಮಾಡುವ ಹೋರಾಟಗಳನ್ನು ಜೊತೆಗಿರಿಸಿಕೊಂಡಿರುತ್ತದೆ, ನಂಬಿಕೆ ಕ್ಷೋಭೆಗೊಳಗಾಗಿರುತ್ತದೆ, ಸಂಶಯವಾದ (scepticism) ಅತೃಪ್ತವಾಗಿರುತ್ತದೆ. ಆದರೆ ಈಗ ಅವುಗಳ ನಡುವಿರುವ ವಿಚ್ಛೇದನ ಉತ್ಪ್ರೇಕ್ಷಿತ ಪ್ರವೃತ್ತಿಗಳನ್ನು ಸೃಷ್ಟಿಸಿದೆ, ಅವುಗಳಲ್ಲುಂಟಾದ ಪರಸ್ಪರ ಪ್ರತ್ಯೇಕತೆ ಮಾನವ ಜೀವನವನ್ನು ಬಡವಾದದ್ದನ್ನಾಗಿ ಮಾಡಿದೆ, ಒಂದೆಡೆ ನಕಾರಾತ್ಮಕ ಮತ್ತು ನಾಶಮಾಡುವ ಟೀಕಾ ಮನೋಭಾವವಿದೆ, ಇನ್ನೊಂದೆಡೆಗೆ ಕಲ್ಪನಾತ್ಮಕ ಮಾನಸಿಕ ಅನಿಸಿಕೆಯಿದೆ, ಅದು ಬುದ್ಧಿಮತ್ತೆಯ ಬರಡಾದ ಅಂಧಾಭಿಮಾನದ ವಿರುದ್ಧ ಪರಿಶುದ್ಧ ಹುಟ್ಟುಗುಣವನ್ನು ಮತ್ತು ಕನಸುಗಳ ಆಧಾರದಿಂದ ಸ್ಥಾಪಿತವಾದ ನಂಬಿಕೆಯನ್ನು ಇರಿಸುತ್ತದೆ.

ಆದಾಗ್ಯೂ ನಿಜವಾದ ವಿಚ್ಛೇದನ ಅಸಾಧ್ಯ. ನಂಬಿಕೆ ಮತ್ತು ಅಂತರ್ಬೋಧೆ–ಯಿಲ್ಲದೆ ವಿಜ್ಞಾನ ಒಂದು ಹೆಜ್ಜೆಯನ್ನೂ ಮುಂದಿರಿಸಲಾಗುವುದಿಲ್ಲ, ಮತ್ತು ಇಂದಿನ ದಿನಗಳಲ್ಲಿ ಅದು ತುಂಬಾ ಕನಸುಗಳೊಂದಿಗೆ ಬೆಳೆಯುತ್ತಿದೆ. ಧರ್ಮ, ಗಾಢವಾದ ಸತ್ಯಗಳನ್ನು ಕುರಿತು, ಸಾಕಷ್ಟಾಗಿರದ ಸ್ಥಿತಿಯಲ್ಲಿದ್ದರೂ ಅವುಗಳ ಬೌದ್ಧಿಕ ನಿರೂಪಣೆಯಿಲ್ಲದೆ ಕ್ಷಣಮಾತ್ರಕ್ಕೂ ನಿಲ್ಲಲಾರದು. ಇಂದು ತನ್ನ ಆಯುಧಗಳನ್ನು ವಿರೋಧಿಯ ಶಸ್ತ್ರಾಗಾರದಿಂದ ಅದು ಕಡತೆಗೆದುಕೊಳ್ಳುತ್ತಿರುವುದನ್ನು ನಾವು ನೋಡುತ್ತೇವೆ. ಉಚ್ಚತರ ಮತ್ತು ರಾಜೀಮಾಡುವ ಸತ್ಯದ ಪ್ರಭಾವದಿಂದ ಮಾತ್ರ

ಅವುಗಳಲ್ಲಿರುವ ಪರಸ್ಪರ ತಪ್ಪು ತಿಳಿವಳಿಕೆಗಳನ್ನು ಹೋಗಲಾಡಿಸಬಹುದು ಮತ್ತು ಮನುಕುಲಕ್ಕೆ ಅದರ ಸಮಗ್ರ ಸ್ವ–ಅಭಿವೃದ್ಧಿಯನ್ನು ಪುನಃ ತಂದುಕೊಡಬಹುದು.

ಹಾಗಾಗಿ ಧಾರ್ಮಿಕ ಅಭೀಪ್ಸೆಯ ಮತ್ತು ವೈಜ್ಞಾನಿಕ ಕಾರ್ಯ ಸಾಮರ್ಥ್ಯದ ಸಮನ್ವಯ ಪ್ರಾರಂಭದ ಸ್ವರೂಪದ್ದೆಂದು ಅದರಲ್ಲಿ ಮತ್ತು ಅದರಿಂದುಂಟಾಗುವ ಪ್ರಗತಿಯ ಪರಿಣಾಮದಲ್ಲಿ ಆಂತರಿಕ ಅಸ್ತಿತ್ವದ ಸಮಗ್ರತೆಯ ಸಮನ್ವತೆಯೂ ಕೂಡ ಇರುವುದು.

ಪ್ರೇಮ ಹಾಗೂ ಜ್ಞಾನ, ಭಕ್ತನ ಪರಮಾನಂದ ಮತ್ತು ಬ್ರಹ್ಮನ್‌ನನ್ನು ಅರಿತುಕೊಳ್ಳುವವನ ದೈವೀ ವಿಜ್ಞಾನ ತಮ್ಮ ಏಕತೆಯನ್ನು ಪರಿಣಾಮಕಾರಿ–ಯಾಗಿಸಬೇಕು. ಅವರೀರ್ವರೂ ಜೀವನದ ಪೂರ್ಣತೆಯನ್ನು ಮರಳಿ ಪಡೆಯಬೇಕು, ಆ ಪೂರ್ಣತೆಯನ್ನು ಒಬ್ಬರು ತಮ್ಮ ಶೋಧನೆಯ ಉಗ್ರತೆಯಲ್ಲಿ, ಇನ್ನೊಬ್ಬರು ದಿವ್ಯಾನಂದದ ಭಾವಾವೇಶದಲ್ಲಿ ಹೊರದೂಡುತ್ತಾರೆ.

ಹೃದಯ ಮತ್ತು ಮನಸ್ಸು ಇವು ಏಕೈಕವಾದ ವಿಶ್ವಂಭರ ದೇವತೆಯಿದ್ದ ಹಾಗೆ, ಹೃದಯವಿಲ್ಲದ ಮನಸ್ಸಾಗಲಿ, ಮನಸ್ಸಿಲ್ಲದ ಹೃದಯವಾಗಲಿ ಮಾನವನ ಆದರ್ಶವಲ್ಲ. ಯಾವುದೇ ಪರಿಪೂರ್ಣತೆ ದೃಢವಾದದ್ದು ಹಾಗೂ ನೈಜವಾದದ್ದು ಆಗಬೇಕಾದರೆ ಅದು ಫಲಪ್ರದವೂ ಆಗಿರಬೇಕು. ಆಂತರಿಕವಾಗಿ ಸಮಗ್ರ ದೈವೀ ಸಾಮರಸ್ಯವಿರಬೇಕು, ಅದರ ಪರಿಣಾಮ ಸ್ವರೂಪದ್ದೆಂದಾಗಿ ಬದಲಾದ ಪೃಥ್ವಿ ಹಾಗೂ ಹೆಚ್ಚು ಉದಾರವಾದ ಮತ್ತು ಸಂತೋಷದಿಂದಿರುವ ಮಾನವತೆ ಇರಬೇಕು.

**(CWSA, 13/439–40)**

*

## ಧ್ಯಾನ

(‘ಆರ್ಯ’ ಪತ್ರಿಕೆಯ ಮೂರನೆಯ ಸಂಚಿಕೆಯಲ್ಲಿ ಆ ತಿಂಗಳಿನ ಪ್ರಶ್ನೆಗೆ ಕೊಟ್ಟ ಉತ್ತರದಿಂದ ಆಯ್ದ ಭಾಗ)

ಧ್ಯಾನದ ಮೂಲಕ ನಾವು ಮನಸ್ಸಿನ ತಳಮಳದ ಅಲೆದಾಟವನ್ನು ಸರಿಪಡಿಸುತ್ತೇವೆ. ಮತ್ತು ಕ್ರೀಡಾಪಟುವಿಗೆ ತರಬೇತು ಕೊಡುವಂತೆ ಅದು ತನ್ನ ಎಲ್ಲ ಚೈತನ್ಯಗಳನ್ನು ಮಿತವಾಗಿ ಖರ್ಚುಮಾಡುವಂತೆ ಮತ್ತು ಸಿದ್ಧಿಸಿಕೊಳ್ಳಲು ಬಯಸ–ಬಹುದಾದ ಯಾವುದೊಂದು ಜ್ಞಾನದ ಮೇಲಾಗಲಿ ಇಲ್ಲವೆ ಸ್ವ–ಶಿಸ್ತುಪಾಲನೆಯ ಮೇಲಾಗಲಿ ಆ ಚೈತನ್ಯಗಳನ್ನು ಸ್ಥಿರಪಡಿಸುತ್ತೇವೆ. ಇದನ್ನು ಸಾಮಾನ್ಯ ಜೀವನ



ನಡೆಸುವ ಜನರು ಅನುಸರಿಸುತ್ತಾರೆ, ಆದರೆ ಯೋಗವು ಪ್ರಕೃತಿಯ ಈ ಉಚ್ಚತರ ಕಾರ್ಯಗತಿಯನ್ನು ಕೈಗೆತ್ತಿಕೊಳ್ಳುತ್ತದೆ ಮತ್ತು ಅದರ ಪೂರ್ಣ ಸಾಧ್ಯತೆಗಳತ್ತ ಅದನ್ನು ಕರೆದೊಯ್ಯುತ್ತದೆ. ಮನಸ್ಸನ್ನು ಯೋಚನೆಯ ಏಕೈಕ ವಿಷಯದ ಮೇಲೆ ಪ್ರಕಾಶಮಯವಾಗಿ ಸ್ಥಿರಗೊಳಿಸುವುದರ ಮೂಲಕ ನಾವು ಸರ್ವಸಾಧಾರಣವಾದ ದೈವೀ ಪ್ರಜ್ಞೆಯಲ್ಲಿ ಪ್ರತಿಸ್ಪಂದನ ಜಾಗ್ರತಗೊಳ್ಳುವಂತೆ ಮಾಡುತ್ತೇವೆ ಎಂಬ ವಾಸ್ತವ ಸಂಗತಿಯನ್ನು ಅದು ಗಮನಿಸುತ್ತದೆ. ಆ ದೈವೀ ಪ್ರಜ್ಞೆ ಮನಸ್ಸಿನಲ್ಲಿಟ್ಟುಕೊಂಡಿದ್ದ ವಿಷಯವನ್ನು ಕುರಿತು ಜ್ಞಾನವನ್ನು ಸುರಿಯುವುದರ ಮೂಲಕ ಅದಕ್ಕೆ ತೃಪ್ತಿ ತಂದುಕೊಡುತ್ತದೆ ಇಲ್ಲವೆ ಅದು ತನ್ನ ಕೇಂದ್ರ ಅಥವಾ ಸಾರಭೂತ ಸತ್ಯವನ್ನು ತೆರೆದು ತೋರಿಸುತ್ತದೆ. ಹಾಗೆಯೇ ದೈವೀ ಸಾಮರ್ಥ್ಯದ ಪ್ರತಿಸ್ಪಂದನ ಜಾಗ್ರತಗೊಳ್ಳುವಂತೆ ಮಾಡುತ್ತೇವೆ, ನಾವು ಯಾವ ಕಾರ್ಯಗತಿಗಳನ್ನು ಕುರಿತು ಧ್ಯಾನಮಾಡುತ್ತಿರುತ್ತೇವೆಯೋ ಅವುಗಳ ಮೇಲೆ, ಅನೇಕ ರೀತಿಗಳಲ್ಲಿ, ಆ ದೈವೀ ಸಾಮರ್ಥ್ಯವು ಹೆಚ್ಚುತ್ತಿರುವ ಪ್ರಭುತ್ವ ನಮ್ಮಲ್ಲಿ ಬರುವಂತೆ ಮಾಡುತ್ತದೆ ಇಲ್ಲವೆ ಆ ಪ್ರಭುತ್ವವನ್ನು ಸೃಷ್ಟಿಸುವಂತೆ ಹಾಗೂ ಅದು ನಮ್ಮಲ್ಲಿ ಕ್ರಿಯಾಶೀಲವಾಗುವಂತೆ ಮಾಡಲು ನಮ್ಮನ್ನು ಶಕ್ತರನ್ನಾಗಿ ಮಾಡುತ್ತದೆ. ಹೀಗೆ ಮನಸ್ಸನ್ನು ದೈವೀ ಪ್ರೇಮದ ವಿಚಾರದ ಮೇಲೆ ಸ್ಥಿರಗೊಳಿಸುವುದರ ಮೂಲಕ ನಾವು ಆ ತತ್ವದತ್ತ ಹಾಗೂ ಅದರ ಕಾರ್ಯಗತಿಗಳತ್ತ ಬರುತ್ತೇವೆ, ನಮ್ಮನ್ನು ಅದರ ಸಂಸರ್ಗದಲ್ಲಿ ಇರಿಸುತ್ತೇವೆ, ಅದನ್ನು ನಮ್ಮಲ್ಲಿ ಸೃಷ್ಟಿಸುತ್ತೇವೆ ಮತ್ತು ಅದರ ನಿಯಮವನ್ನು ಹೃದಯ ಹಾಗೂ ಇಂದ್ರಿಯಗಳ ಮೇಲೆ ಹೇರುತ್ತೇವೆ.

**(CWSA, 13/445–46)** **– ಶ್ರೀ ಅರವಿಂದರು**

*

## ‘ಆರ್ಯ’ ಶಬ್ದದ ಪ್ರಾಮುಖ್ಯತೆ

(‘ಆರ್ಯ’ ಪತ್ರಿಕೆಯ ಎರಡನೆಯ ಸಂಚಿಕೆಯಲ್ಲಿ ಆ ತಿಂಗಳಿನ ಪ್ರಶ್ನೆ)

**ಪ್ರಶ್ನೆ :** *‘ಆರ್ಯ’ ಹೆಸರಿನ ಪ್ರಾಮುಖ್ಯತೆ ಏನು?*

**ಶ್ರೀ ಅ :** ಆ ಪ್ರಶ್ನೆಯನ್ನು ಒಂದಕ್ಕಿಂತ ಹೆಚ್ಚು ದೃಷ್ಟಿಕೋನಗಳಿಂದ ಕೇಳಲಾಗಿದೆ. ಯುರೋಪಿನ ಓದುಗರಲ್ಲಿ ಹೆಚ್ಚಿನವರಿಗೆ ನಮ್ಮ ಪತ್ರಿಕೆಯ ಮುಖ ಪುಟದ ಮೇಲೆ ಮುದ್ರಣಗೊಳ್ಳುತ್ತಿರುವ ಅದು ಒಂದು ಚಿತ್ರಲಿಪಿ (hieroglyph) ಯ ಹಾಗೆ ಕಂಡುಬರಬಹುದು ಮತ್ತು ಅವರ ಮನೋಭಾವದ ಪ್ರಕಾರ ಅದು ಆಕರ್ಷಕವೆನಿಸಬಹುದು ಇಲ್ಲವೆ ತಿರಸ್ಕರಣೀಯವಾದದ್ದು ಎನಿಸಬಹುದು.

ಭಾರತೀಯರಿಗೆ ಆ ಶಬ್ದದ ಪರಿಚಯವಿದೆ, ಆದರೆ ಆ ಶಬ್ದದ ಬಗ್ಗೆ ಅವರ ಪೂರ್ವಜರು ಹೊಂದಿದ್ದ ಪ್ರಾಮುಖ್ಯತೆಯನ್ನು ಅವರು ಕಳೆದುಕೊಂಡಿದ್ದಾರೆ. ಪಾಶ್ಚಾತ್ಯರ ಭಾಷಾಶಾಸ್ತ್ರ ಅದನ್ನು ಒಂದು ಕುಲಕ್ಕೆ ಸೇರಿದ ಶಬ್ದವನ್ನಾಗಿ ಪರಿವರ್ತಿಸಿದೆ, ಅದು ಅವರಿಗೆ ಜನಾಂಗ ಶಾಸ್ತ್ರದ ವಿಷಯವಾಗಿದ್ದು ಅದರ ಮೇಲೆ ಭಿನ್ನ ಊಹಾಪೋಹಗಳು ಭಿನ್ನ ಮೌಲ್ಯಗಳನ್ನು ಸ್ಥಿರಗೊಳಿಸಲು ಅನುವು ಮಾಡಿಕೊಟ್ಟಿವೆ. ಇತ್ತೀಚೆಗೆ ಭಾಷಾಶಾಸ್ತ್ರಜ್ಞರಲ್ಲಿ ಕೆಲವರು ಈ ಶಬ್ದ ಅದರ ಮೂಲದಲ್ಲಿ ಕುಲಗಳಲ್ಲಿ ಭಿನ್ನವಾದದ್ದನ್ನು ತೋರಿಸುವುದಾಗಿರಲಿಲ್ಲ, ಆದರೆ ಭಿನ್ನ ಸಂಸ್ಕೃತಿಯನ್ನು ತೋರಿಸುವಂತಹದಾಗಿತ್ತು ಎಂಬುದನ್ನು ಗುರುತಿಸಲು ಪ್ರಾರಂಭಿಸಿದ್ದಾರೆ. ಏಕೆಂದರೆ, ವೇದದಲ್ಲಿ ಆರ್ಯ ಜನರೆಂದರೆ ಆತ್ಮ–ಸಂಸ್ಕಾರದ, ಆಂತರಿಕ ಹಾಗೂ ಬಾಹ್ಯ ಆಚರಣೆಯ, ಆದರ್ಶವಾಗಿರುವಿಕೆಯ ಮತ್ತು ಅಭೀಪ್ಸೆಯ ಒಂದು ವಿಶಿಷ್ಟ ಮಾದರಿಯನ್ನು ಸ್ವೀಕರಿಸಿದವರಾಗಿದ್ದರು. ಆರ್ಯರ ದೇವತೆಗಳು ಅತಿಭೌತಿಕ ಸಾಮರ್ಥ್ಯವಿದ್ದವರಾಗಿದ್ದರು ಅವರು ದೇವ ಪ್ರಮುಖನ ಸ್ವಭಾವದತ್ತ ಮರ್ತ್ಯಜೀವಿ ಸಾಗುವಾಗಿನ ಹೋರಾಟದಲ್ಲಿ ಅವನಿಗೆ ಸಹಾಯ ಮಾಡುತ್ತಿದ್ದರು. ಆದಿಕಾಲದ ಮಾನವ ಕುಲದ ಎಲ್ಲ ಅಭೀಪ್ಸೆಗಳು, ಅದರ ಅತ್ಯುದಾರ ಧಾರ್ಮಿಕ ಮನೋಭಾವ, ಅದರ ಅತ್ಯಂತ ಆದರ್ಶಪ್ರಾಯದ ಯೋಚನೆಯ ಕ್ಷೀಣ ಬಯಕೆಗಳು ಈ ಏಕೈಕ, ಆದರೆ ಅರ್ಥಕ್ಕಿಂತ ಭಿನ್ನವಾದ ಶಬ್ದದಲ್ಲಿ ಒಟ್ಟುಗೂಡಿವೆ.

ನಂತರದ ದಿನಗಳಲ್ಲಿ 'ಆರ್ಯ' ಶಬ್ದ ಒಂದು ವಿಶಿಷ್ಟ ನೈತಿಕ ಹಾಗೂ ಸಾಮಾಜಿಕ ಆದರ್ಶ, ಒಳ್ಳೆಯ ರೀತಿಯಲ್ಲಿ ಆಳಿಕೆಗೊಳಪಟ್ಟ ಜೀವನ, ಸಾಚಾತನ, ಗೌರವ ಸೂಚಿಸುವುದು, ಔದಾರ್ಯ, ನೇರವ್ಯವಹಾರ, ಧೈರ್ಯ, ಮೃದುತ್ವ, ಪರಿಶುದ್ಧತೆ, ಮಾನವೀಯತೆ, ಕರುಣೆ, ದುರ್ಬಲರ ರಕ್ಷಣೆ, ಸಾಮಾಜಿಕ ಕರ್ತವ್ಯಪಾಲನೆ, ಜ್ಞಾನಕ್ಕಾಗಿ ಉತ್ಸುಕತೆ, ಪಂಡಿತರಿಗೆ, ವಿದ್ಯಾವಂತರಿಗೆ ಗೌರವ, ಸಾಮಾಜಿಕವಾಗಿ ಸಿದ್ಧಿಸಿಕೊಂಡವುಗಳು ಇವೆಲ್ಲವುಗಳನ್ನು ಅಭಿವ್ಯಕ್ತಗೊಳಿಸು–ವಂತಹದಾಗಿತ್ತು. ಇವೆಲ್ಲವುಗಳಿಗಿಂತ ಕೀಳುಮಟ್ಟದ್ದು, ನೀಚವಾದದ್ದು, ಮಬ್ಬಾದದ್ದು, ಒರಟಾದದ್ದು, ಕ್ರೂರ ಹಾಗೂ ಅಸತ್ಯವಾದದ್ದು ಇಂತಹದರತ್ತ ಪ್ರವೃತ್ತಿ ಹೊಂದಿರುವುದನ್ನೆಲ್ಲ ಅನಾರ್ಯವೆಂದು ಕರೆಯಲಾಗುತ್ತಿತ್ತು. ಮಾನವ ಮಾತಿನಲ್ಲಿ ಈ ಶಬ್ದ(ಆರ್ಯ ಶಬ್ದ)ಕ್ಕಿಂತ ಹೆಚ್ಚು ಉದಾರವಾದ ಇತಿಹಾಸವಿರುವ ಬೇರೆ ಶಬ್ದವಿಲ್ಲ.

ತುಲನಾತ್ಮಕ ಭಾಷಾಶಾಸ್ತ್ರದ ಅಭ್ಯಾಸ ಕೈಕೊಳ್ಳಲು ಪ್ರಾರಂಭಿಸಿದ ಮೊದಲ



ದಿನಗಳಲ್ಲಿ ಪಂಡಿತರು ಇತಿಹಾಸಪೂರ್ವದ ಜನರು ಉಪಯೋಗಿಸುತ್ತಿದ್ದ ಶಬ್ದಗಳ ಇತಿಹಾಸವನ್ನು ಅರಸುತ್ತಿದ್ದರು. ಆಗ ಆರ್ಯ ಶಬ್ದದ ಧಾತು(root) ಅರ್(ar) ಆಗಿತ್ತು, ಅದರರ್ಥ ಉಳುವ ಕಾರ್ಯ ಮಾಡು ಎಂದಿತ್ತು ಮತ್ತು ವಾಯವ್ಯ ದಿಕ್ಕಿನಲ್ಲಿದ್ದ ಈ ಆರ್ಯ ಜನಾಂಗದ ಕೆಲವರು ಉಳುವ ಕೃಷಿ ಕಾರ್ಯದಿಂದ ಬೇಸತ್ತು ಕೇವಲ ಕುರಿ ಕಾಯುವವರಾಗಿ ಬೇಟೆಗಾರರಾಗಿ ಉಳಿದುಕೊಂಡರು. ಕೃಷಿ ಕಾರ್ಯವನ್ನು ಕೈಕೊಳ್ಳುತ್ತಿದ್ದವರನ್ನು ವೈದಿಕ ಆರ್ಯರೆಂದು ಗುರುತಿಸ–ಲಾಯಿತು. ಉಪಾಯ ಕೌಶಲವುಳ್ಳ ಈ ಊಹಾಪೋಹಕ್ಕೆ ಆಧಾರ ಅತಿ ಕಡಿಮೆ, ಇಲ್ಲವೆಂದೇ ಹೇಳಬಹುದು. ಒಂದರ್ಥದಲ್ಲಿ ಆ ವ್ಯುತ್ಪತ್ತಿ(derivation)ಯನ್ನು ಒಪ್ಪಿಕೊಳ್ಳಬಹುದು. ಯಾರು ತನಗಾಗಿ ಪರಮೋಚ್ಚ ದಿವ್ಯಾತ್ಮ ನಿರ್ಮಿಸಿದ ಭೂಮಿಯನ್ನು ಕೃಷಿಮಾಡುತ್ತಾನೋ, ಆ ಭೂಮಿ ಪೃಥ್ವಿಯದಾಗಿದ್ದು ಒಳಗೆ ಹಾಗೂ ಹೊರಗೆ ಸಮೃದ್ಧಿಯಿಂದಿರುತ್ತದೆ, – ಅವನು ಅದನ್ನು ಬಂಜರಾಗಿರಲು ಬಿಟ್ಟುಕೊಡುವುದಿಲ್ಲ, ನಿಸ್ಸತ್ವದ್ದಾಗುವುದಕ್ಕೆ ಅನುವುಮಾಡಿಕೊಡುವುದಿಲ್ಲ, ಆದರೆ ಅದರಿಂದ ಪೂರ್ಣ ಬೆಳೆಯನ್ನು ಹೊರತರಲು ಶ್ರಮಿಸುತ್ತಾನೆ, ಹಾಗಾಗಿ ಆ ಪ್ರಯತ್ನದಿಂದ ಅವನು ಆರ್ಯನ್.

ಆರ್ಯ ಶಬ್ದ ಕೇವಲ ಕುಲಕ್ಕೆ ಸಂಬಂಧಿಸಿದ ಶಬ್ದವಾಗಿದ್ದರೆ ಹೆಚ್ಚಿನ ರೀತಿಯಲ್ಲಿ ಆಗಬಹುದಾದ ವ್ಯುತ್ಪತ್ತಿ (ar)ಅರ್, ಅದರರ್ಥ ಬಲ ಇಲ್ಲವೆ ಶೌರ್ಯ, ar ದಿಂದ ಹೋರಾಡು ಶಬ್ದ, ಅದರಿಂದ ಗ್ರೀಕರ ಯುದ್ಧ ದೇವತೆ ಏರೆಸ್(Ares), ಏರಿಯಸ್(areius) ಎಂದರೆ ಧೀರ, ಯುದ್ಧೋಚಿತ, ಹಾಗೆಯೇ ಬಹುಶಃ (arete)ಏರೆಟ್ ಕೂಡ, ಅದರರ್ಥ ಸದ್ಗುಣ, ಪ್ರಾಮುಖ್ಯವೆನಿಸುವಂತಹದು, ಅದು ಲ್ಯಾಟಿನ್ ಭಾಷೆಯಲ್ಲಿರುವ virtus ದಿಂದ ಬಂದ virtue ಸದ್ಗುಣ. ಈ ಶಬ್ದದ ಈ ಅರ್ಥವನ್ನೂ ಕೂಡ ನಾವು ಒಪ್ಪಿಕೊಳ್ಳಬಹುದು. "ನಾವು ಘನತೆವೆತ್ತ ದೈವೀ ವಿವೇಕವನ್ನು ಗೆದ್ದುಕೊಳ್ಳಲು ಹೋರಾಡುತ್ತೇವೆ, ಆದ್ದರಿಂದ ಜನರು ನಮ್ಮನ್ನು ಯೋಧರೆಂದು ಕರೆಯುತ್ತಾರೆ." ಏಕೆಂದರೆ ದೈವೀ ವಿವೇಕ, ಯಾವುದು ಅತ್ಯಂತ ಒಳ್ಳೆಯದು, ಉದಾರವಾದದ್ದು, ಅತ್ಯಂತ ಪ್ರಕಾಶಮಾನವಾದದ್ದು ಆಗಿರುತ್ತದೆಯೋ ಅಂತಹದರ ಆಯ್ಕೆಯಾಗಿದ್ದು ಅದರ ಜ್ಞಾನವನ್ನು ಒಳಗೊಳ್ಳುತ್ತದೆ. ನಿಶ್ಚಿತವಾಗಿ ಅದರರ್ಥ ಎಲ್ಲ ವಿಷಯಗಳ ಬಗೆಗಿನ ಜ್ಞಾನ ಹೊಂದಿರುವಿಕೆ, ಅವುಗಳಿಗಾಗಿ ಭೂತದಯೆ(charity) ಮತ್ತು ಗೌರವ ಇರುವುದಾಗಿದೆ. ಅದು ಎಲ್ಲದರಲ್ಲೂ ಸಮನಾಗಿ ವಾಸಿಸುವ ವಿಶ್ವಂಭರ ದೇವನಿಗಾಗಿ, ಅತ್ಯಂತ ನೀಚ, ಕುರೂಪದ್ದಾದ ಇಲ್ಲವೆ ಅಂಧರಕಾರದಲ್ಲಿ ಇದ್ದದ್ದಕ್ಕಾಗಿ ಕೂಡ ಇರುತ್ತದೆ. ಆದರೆ, ಹಾಗೆಯೇ,

ಸರಿಯಾದ ಕರ್ಮದ ನಿಯಮವನ್ನು ಆಯ್ಕೆಮಾಡಿಕೊಳ್ಳುವುದಿರುತ್ತದೆ, ಯಾವುದು ದೇವ ಪ್ರಮುಖನನ್ನು ಮರೆಯಲ್ಲಿರಿಸುತ್ತದೆಯೋ ಅದಕ್ಕಿಂತ ಹೆಚ್ಚಾಗಿ ಅವನನ್ನು ಅಭಿವ್ಯಕ್ತಗೊಳಿಸುವುದಕ್ಕೆ ಆದ್ಯತೆ ನೀಡುವುದಿರುತ್ತದೆ. ಆ ಆಯ್ಕೆ ಸಮರವೊಂದನ್ನು, ಹೋರಾಟವನ್ನು ಎದುರಿಸುವಂತೆ ಮಾಡುತ್ತದೆ. ಆಯ್ಕೆಯನ್ನು ಸುಲಭವಾಗಿ ಮಾಡಲಾಗುವುದಿಲ್ಲ, ಜಾರಿಯಲ್ಲಿ ತರಲಾಗುವುದಿಲ್ಲ.

ಆ ಆಯ್ಕೆಯನ್ನು ಮಾಡಿಕೊಳ್ಳುವವನು, ದೈವೀ ಪರ್ವತವನ್ನು ಹಂತ, ಹಂತವಾಗಿ ಮೇಲೇರಿ ಹೋಗುವುದನ್ನು ಅರಸುವವನು, ಯಾವುದಕ್ಕೂ ಭಯಪಡದೆ ಇರುವವನು, ತಡೆಗೊಳ್ಳುವಿಕೆಯ ಇಲ್ಲವೆ ಸೋಲಿನ ನಿರ್ಬಂಧ–ಕ್ಕೊಳಗಾಗದೆ ಇರುವವನು, ತನ್ನ ಬುದ್ಧಿಮತ್ತೆಗೆ ಬಹಳ ವಿಶಾಲವಾಗುತ್ತದೆ ಎಂಬ ಕಾರಣದಿಂದ ಯಾವುದೇ ವೈಶಾಲ್ಯದಿಂದ, ತನ್ನ ಮನೋಭಾವಕ್ಕೆ ಬಹಳ ಎತ್ತರದ್ದಾಗುತ್ತದೆ ಎಂಬ ಕಾರಣದಿಂದ ಯಾವುದೇ ಎತ್ತರದಿಂದ, ತನ್ನ ಶಕ್ತಿ ಹಾಗೂ ಧೈರ್ಯಗಳಿಗೆ ಬಹಳ ಭವ್ಯವಾಗುತ್ತದೆ ಎಂಬ ಕಾರಣದಿಂದ ಯಾವುದೇ ಶ್ರೇಷ್ಠತೆಯಿಂದ ಕುಗ್ಗಿಕೊಳ್ಳದೇ ಇರುವವನು ಆರ್ಯನ್.

ಸ್ವರೂಪಗತವಾಗಿ (intrinsically) ಅದರ ಅತ್ಯಂತ ಮೂಲಭೂತ ಅರ್ಥದಲ್ಲಿ 'ಆರ್ಯ'ದ ಅರ್ಥ ಒಂದು ಪ್ರಯತ್ನ, ಬಂಡಾಯವೇಳುವಿಕೆ ಮತ್ತು ಜಯ ಸಾಧಿಸುವಿಕೆಯಾಗಿರುತ್ತದೆ. ಹೋರಾಡುವವನು ಮತ್ತು ತನಗೆ ಬಾಹ್ಯದಲ್ಲಿದ್ದುದರ ಮೇಲೆ, ಅಂತರ್ಯದಲ್ಲಿ ಮಾನವನ ಮುನ್ನಡೆಗೆ ವಿರೋಧಿಸುತ್ತ ನಿಂತಿರುವುದರ ಮೇಲೆ ಜಯ ಸಾಧಿಸುವವನು ಆರ್ಯನ್. ತನ್ನ ಮೇಲೆಯೇ ಜಯ ಸಾಧಿಸುವಿಕೆ ಅವನ ಸ್ವಭಾವದ ಮೊದಲ ನಿಯಮವಾಗಿರುತ್ತದೆ. ಅವನು ಪೃಥ್ವಿ ಹಾಗೂ ದೇಹಗಳ ಮೇಲೆ ಜಯ ಸಾಧಿಸುತ್ತಾನೆ, ಮತ್ತು ಸಾಮಾನ್ಯ ಮನುಷ್ಯರ ಹಾಗೆ ಅವುಗಳ ಮಬ್ಬುತನ, ಜಡತ್ವ, ಮರಗಟ್ಟಿದ ನಿತ್ಯಗಟ್ಟಲೆಯ ಕಾರ್ಯಗಳು ಮತ್ತು ತಮಸ್ಸಿನಿಂದ ಉಂಟಾದ ಮಿತಿಗಳು ಇವುಗಳಿಗೆ ಅವನು ಒಪ್ಪಿಗೆ ನೀಡುವುದಿಲ್ಲ. ಅವನು ಜೀವನ ಹಾಗೂ ಅದರ ಚೈತನ್ಯಗಳ ಮೇಲೆ ಜಯ ಸಾಧಿಸುತ್ತಾನೆ ಮತ್ತು ಅವುಗಳ ಹಸಿವುಗಳು ಹಾಗೂ ಹಾತೊರೆತಗಳು ಇವುಗಳ ಪ್ರಾಬಲ್ಯಕ್ಕೆ ಇಲ್ಲವೆ ಅವುಗಳ ರಾಜಸಿಕ ಭಾವೋದ್ರೇಕಗಳಿಗೆ ದಾಸನಾಗುವುದನ್ನು ತಿರಸ್ಕರಿಸುತ್ತಾನೆ. ಅವನು ಮನಸ್ಸು ಹಾಗೂ ಅದರ ರೂಢಿಗಳ ಮೇಲೆ ಜಯ ಸಾಧಿಸುತ್ತಾನೆ, ಅಜ್ಞಾನದ ಚಿಪ್ಪಿನಲ್ಲಿ, ಆನುವಂಶಿಕವಾಗಿ ಬಂದ ಪೂರ್ವಗ್ರಹಗಳು, ರೂಢಿಗತ ವಿಚಾರಗಳು, ಸಂತೋಷಕರ ಅಭಿಪ್ರಾಯಗಳು ಇವುಗಳಲ್ಲಿ ಜೀವಿಸುವುದಿಲ್ಲ, ಆದರೆ ತನ್ನ ಸಂಕಲ್ಪದಲ್ಲಿ ದೃಢವಾದವನು, ಸ್ಥಿರಗೊಂಡವನು ಇದ್ದ



ಹಾಗೆ ಬುದ್ಧಿಮತ್ತೆಯಲ್ಲಿ ಹೇಗೆ ಭವ್ಯವಾದವನು, ನಮ್ಯನಾದವನು ಆಗಬೇಕೆಂಬುದನ್ನು ಅರಸುವುದನ್ನು ತಿಳಿದುಕೊಂಡಿರುತ್ತಾನೆ. ಏಕೆಂದರೆ ಪ್ರತಿಯೊಂದರಲ್ಲಿ ಅವನು ಸತ್ಯವನ್ನು, ಸರಿಯಾದದ್ದನ್ನು, ಉಚ್ಚವಾದದ್ದನ್ನು, ಸ್ವಾತಂತ್ರ್ಯವನ್ನು ಅರಸುತ್ತಾನೆ.

ತನ್ನ ಮೇಲೆ ಜಯ ಪಡೆಯುವುದರ ಗುರಿ ಸ್ವ–ಪರಿಪೂರ್ಣತೆಯಾಗಿರುತ್ತದೆ. ಆದ್ದರಿಂದ ಅವನು ಜಯಿಸಿದ್ದನ್ನು ಹಾಳುಮಾಡುವುದಿಲ್ಲ, ಆದರೆ ಉದಾತ್ತ–ಗೊಳಿಸುತ್ತಾನೆ, ಸಫಲಗೊಳಿಸುತ್ತಾನೆ. ದೇಹ, ಪ್ರಾಣ ಮತ್ತು ಮನಸ್ಸುಗಳನ್ನು ಅವನಿಗೆ ಕೊಡಲಾಗಿರುವುದರಿಂದ ಅವನು ಅವುಗಳಿಗಿಂತಲೂ ಉಚ್ಚವಾದ ಏನೋ ಒಂದನ್ನು ಸಿದ್ಧಿಸಿಕೊಳ್ಳಬೇಕಾಗಿದೆ ಎಂಬುದನ್ನು ಅವನು ತಿಳಿದಿದ್ದಾನೆ, ಆದ್ದರಿಂದ ಅವುಗಳಿಗೆ ಅತೀತವಾಗಿ ಸಾಗಿ ಹೋಗಬೇಕು ಮತ್ತು ಅವುಗಳ ಮೇಲೆ ಜಯ ಸಾಧಿಸಬೇಕು, ಅವುಗಳ ಮಿತಿಗಳನ್ನು ನಿರಾಕರಿಸಬೇಕು, ಆಸೆ ಮನಃ–ಪ್ರವೃತ್ತಿಗಳನ್ನು ಸ್ವಚ್ಛಂದವಾಗಿ ಹರಿಯಲು ಬಿಡುವುದರಲ್ಲಿ ಮಗ್ನವಾಗಿರುವಿಕೆಯನ್ನು ತಿರಸ್ಕರಿಸಬೇಕು. ಜಗತ್ತಿನಲ್ಲಿ ಅತ್ಯುಚ್ಚವಾದದ್ದು ಅಸ್ತಿತ್ವ ಶೂನ್ಯತೆ (nullity) ಯಲ್ಲ, ಆದರೆ ತನ್ನನ್ನು ಇಲ್ಲಿ ಹೆಚ್ಚು ಹೆಚ್ಚಾಗಿ ಅಭಿವ್ಯಕ್ತಗೊಳಿಸುವಂತಹದು – ಅದು ದೈವೀ ಸಂಕಲ್ಪ, ಪ್ರಜ್ಞೆ, ಪ್ರೇಮ, ಇವುಗಳನ್ನು ನಿಮ್ಮ ಜೀವನದ ಮೂಲಕ ಸ್ಪಷ್ಟವಾಗಿ ಕಂಡುಹಿಡಿದವನ ಮೇಲೆ ಹಾಗೂ ಅವನ ಪರಿಸರದಲ್ಲಿ ಅದನ್ನು ಸ್ವೀಕರಿಸುವ ಕ್ಷಮತೆ ಇದ್ದುದೆಲ್ಲರ ಮೇಲೆ ದಿವ್ಯಾನಂದ ಸುರಿಯುತ್ತದೆ. ಅವನು ಅದರ ದಾಸ, ಪ್ರೇಮಿ ಹಾಗೂ ಅದನ್ನು ಅರಸುವವ, ಅದನ್ನು ಸಿದ್ಧಿಸಿಕೊಂಡ ನಂತರ ಮನುಕುಲದ ಮೇಲೆ ಕಾರ್ಯ, ಪ್ರೇಮ, ಸಂತೋಷ ಹಾಗೂ ಜ್ಞಾನ ಇವುಗಳಲ್ಲಿ ಅದನ್ನು ಸುರಿಯುತ್ತಾನೆ. ಏಕೆಂದರೆ ಆರ್ಯನ್ ಯಾವಾಗಲೂ ಒಬ್ಬ ಕಾರ್ಯಕರ್ತ ಹಾಗೂ ಯೋಧ. ಅತ್ಯುಚ್ಚವಾದದ್ದನ್ನು ಅರಸುವುದಕ್ಕಾಗಲಿ ಇಲ್ಲವೆ ಅದಕ್ಕೆ ಸೇವೆ ಸಲ್ಲಿಸುವುದಕ್ಕಾಗಲಿ ಅವನು ಮನಸ್ಸಿನ ಹಾಗೂ ದೇಹದ ಶ್ರಮವನ್ನು ಬಿಟ್ಟುಕೊಡುವುದಿಲ್ಲ. ಅವನು ಯಾವ ತೊಂದರೆಯಿಂದಲೂ ತಪ್ಪಿಸಿಕೊಳ್ಳುವುದಿಲ್ಲ, ದಣಿವಿನಿಂದ ನಿಂತುಬಿಡುವುದನ್ನು ಒಪ್ಪಿಕೊಳ್ಳುವುದಿಲ್ಲ. ಆ ರಾಜ್ಯ ತನ್ನಲ್ಲಿ ಹಾಗೂ ಜಗತ್ತಿನಲ್ಲಿ ಬರುವುದಕ್ಕಾಗಿ ಅವನು ಯಾವಾಗಲೂ ಹೋರಾಡುತ್ತಾನೆ.

**(CWSA, 13/441–44)** **– ಶ್ರೀ ಅರವಿಂದರು**

*

... ಆರ್ಯರ ದಾಳಿ ಕುರಿತು ಇರುವ ಸಿದ್ಧಾಂತವನ್ನು ಇತ್ತೀಚೆಗೆ ನಿರ್ಮಾಣ ಮಾಡಲಾಗಿದೆ. ಅದನ್ನು ಕುರಿತು ವೇದದಲ್ಲಿ ಕಂಡುಬರುವ ಸೂಚನೆಗಳು ಅತ್ಯಲ್ಪ

ಮತ್ತು ಪ್ರಾಮುಖ್ಯತೆಯಲ್ಲಿ ಅನಿಶ್ಚಿತವಾಗಿವೆ. ವಾಸ್ತವದಲ್ಲಿ ಇಂತಹ ದಾಳಿಯಾದುದರ ಬಗ್ಗೆ ಪ್ರಸ್ತಾಪ ಕಂಡುಬರುವುದಿಲ್ಲ. ಆರ್ಯರು ಮತ್ತು ಆರ್ಯರಲ್ಲದವರು ಇವರ ನಡುವಿರುವ ಭಿನ್ನತೆಯನ್ನು ಕುರಿತು ಇರುವ ಸಾಕ್ಷ್ಯದ ಮೊತ್ತದ ಸೂಚನೆಯಿಂದ ತೋರಿಬರುವುದೇನೆಂದರೆ ಆ ಭಿನ್ನತೆ ಸಾಂಸ್ಕೃತಿಕ–ವಾದದ್ದರಲ್ಲಿತ್ತು, ಅದು ಕುಲಗಳಲ್ಲಿದ್ದ ಭಿನ್ನತೆಯಾಗಿರಲಿಲ್ಲ. ಆರ್ಯರು ಭಿನ್ನರಾಗಿದ್ದರೆಂಬುದರ ಕುರುಹನ್ನು ಸ್ತೋತ್ರಪಾಠ(hymn)ಗಳಲ್ಲಿ ಕಂಡುಬರುವ ವಿಶಿಷ್ಟ ಪೂಜಾಪದ್ಧತಿ ಇಲ್ಲವೆ ಆಧ್ಯಾತ್ಮಿಕ ಸಂಸ್ಕೃತಿ ಕುರಿತು ಇರುವ ಭಾಷೆ ಎತ್ತಿತೋರಿಸುತ್ತದೆ – ಆ ಪೂಜೆ ದೈವೀ ಪ್ರಕಾಶ ಹಾಗೂ ಆ ಪ್ರಕಾಶದ ಸಾಮರ್ಥ್ಯಗಳನ್ನು ಕುರಿತಾಗಿತ್ತು ಮತ್ತು "ದೈವೀ ಸತ್ಯ"ದ ಸಂಸ್ಕೃತಿಯ ಆಧಾರದ ಮೇಲೆ ರೂಪಿಸಿಕೊಂಡ ಸ್ವ–ಶಿಸ್ತುಪಾಲನೆ ಇತ್ತು – ರಿತಮ್ ಮತ್ತು ಅಮೃತಮ್. ಕುಲಗಳಲ್ಲಿರುವ ಭಿನ್ನತೆ ಕುರಿತು ನಂಬಬಹುದಾದ ಯಾವ ಸೂಚನೆಯೂ ಇಲ್ಲ.

**(CWSA, 15/26)** **– ಶ್ರೀ ಅರವಿಂದರು**

*

## 'ಆರ್ಯ'ದಲ್ಲಿ ಪ್ರಕಟವಾದ ಕೆಲವು ಕೃತಿಗಳನ್ನು ಕುರಿತು ಶ್ರೀ ಅರವಿಂದರ ಟಿಪ್ಪಣಿಗಳು

### ವೇದ ರಹಸ್ಯ (The Secret of Veda)

ವೇದ ರಹಸ್ಯ ಶೀರ್ಷಿಕೆಯಡಿಯಲ್ಲಿ ಋಗ್ವೇದ ಕುರಿತು ಹೊಸ ದೃಷ್ಟಿಕೋನದಿಂದ ಬರೆದದ್ದನ್ನು ಪ್ರಕಟಿಸಲಾಗುತ್ತಿದೆ. ಇಲ್ಲಿ ಕೈಕೊಂಡ ಅನುವಾದದ ದೃಷ್ಟಿಕೋನ ಹೀಗಿದೆ: ವೇದದ ನಿಜವಾದ ಅರ್ಥ ಆಧ್ಯಾತ್ಮಿಕವಾದದ್ದು, ಮತ್ತು ಅದು ಅತ್ಯಂತ ಗಹನ ಹಾಗೂ ರಹಸ್ಯವಾದದ್ದರಿಂದ ಸಾಂಕೇತಿಕ ಶಬ್ದಗಳಿಂದ, ಅನೇಕ ಪ್ರತೀಕಗಳಿಂದ ಮತ್ತು ಯಜ್ಞ ಕಾರ್ಯ ನೆರವೇರಿಸುವಾಗ ಉಪಯೋಗಿಸುವ ಅಭಿವ್ಯಕ್ತಿಗಳಿಂದ ಸುತ್ತಿಕೊಂಡಿದೆ. ಸಾಮಾನ್ಯ ಮನುಷ್ಯನಿಗೆ ಅದರ ಒಳನುಗ್ಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಗದೆ ಹೋದರೂ, ವೇದಾಭ್ಯಾಸಕ್ಕಾಗಿ ದೀಕ್ಷೆ ಪಡೆದವನಿಗೆ ಅದರ ಅರ್ಥದ ಮೇಲಿನ ಮುಸುಕು ಪಾರದರ್ಶಕವಾಗಿರುತ್ತಿತ್ತು ಮತ್ತು ಅದು ದೈವೀ ಸತ್ಯದ ಎಲ್ಲ ಅಂಗಗಳನ್ನು ತೆರೆದು ತೋರಿಸುತ್ತಿತ್ತು. ನಾವು ಪ್ರತೀಕಗಳ ಹಿಂದಿರುವ ಆಧ್ಯಾತ್ಮಿಕ ಪ್ರಾಮುಖ್ಯತೆಯನ್ನು ನೋಡಬೇಕು. ದೇವತೆಗಳ ರಹಸ್ಯ ಹೆಸರನ್ನು, ಅವರ ಕಾರ್ಯ ವಿಧಾನಗಳನ್ನು, ಗೋ ಅಶ್ವ ಸೋಮರಸ ಇತ್ಯಾದಿ ಶಬ್ದಗಳಂತಹ ಸಂಕೇತಗಳು ಸೂಚಿಸುವ ಅರ್ಥವನ್ನು, ದೈತ್ಯರ



ಕಾರ್ಯಗಳನ್ನು ಹಾಗೂ ಅವುಗಳ ಆಂತರಿಕ ಅರ್ಥವನ್ನು ವೈದಿಕ ರೂಪಾಲಂಕಾರದ ಹಾಗೂ ಪುರಾಣ ಕಥೆಗಳ ಪ್ರಾಧಾನ್ಯವನ್ನು ನಾವು ಶೋಧಿಸಬಲ್ಲೆವಾದರೆ ಆಗ ವೇದದ ಪ್ರಾಮುಖ್ಯತೆ ಹೆಚ್ಚು ಕಡಿಮೆ ಸ್ಪಷ್ಟವಾಗುವುದು. ಸಹಜವಾಗಿ, ಅದರ ಅರ್ಥದ ನಿಜವಾದ ಮತ್ತು ಸೂಕ್ಷ್ಮ ತಿಳಿವಳಿಕೆ ವಿಶೇಷ ಜ್ಞಾನದಿಂದ ಮತ್ತು ಸಾಧನೆಯಿಂದ ಬರುತ್ತದೆ, ಸಾಧನೆ ಕೈಕೊಳ್ಳದೆ ಕೇವಲ ವೇದವನ್ನು ಅಭ್ಯಾಸಮಾಡುವುದರಿಂದ ಬರುವುದಿಲ್ಲ.

**(ಬಂಗಾಲಿ ಬರಹಗಳು, ಪು. 42)**

### ದೈವೀ ಜೀವನ (Life Divine)

ನೈಜತೆಯ ಆಧಾರದ ಮೇಲಿನ ಹಾಗೂ ಮಾಯಾವಾದಿಯ ಸಿದ್ಧಾಂತ–ವನ್ನಾಧರಿಸಿದ ಅದ್ವೈತವಿರುವುದು ಸಾಧ್ಯವಿದೆ. 'ದೈವೀ ಜೀವನ' ಗ್ರಂಥದ ತತ್ವಶಾಸ್ತ್ರ ನೈಜತೆಯನ್ನು ಆಧಾರಮಾಡಿಕೊಂಡಿದ್ದ ಅದ್ವೈತದ್ದಾಗಿದೆ. ಜಗತ್ತು ದೈವೀ ನೈಜವಾದುದರ ಪ್ರಕಟಣೆ ಮತ್ತು ಆ ಕಾರಣದಿಂದಾಗಿ ನಿಜವಾಗಿದೆ. ಆ ನೈಜತೆ ಎಂದರೆ ಅನಂತ ಮತ್ತು ಸನಾತನ ಭಗವಂತ, ಅನಂತ ಮತ್ತು ಸನಾತನ ದೈವೀ ಸತ್ತೆ, ದೈವೀ ಪ್ರಜ್ಞಾ–ಶಕ್ತಿ ಮತ್ತು ದಿವ್ಯಾನಂದ. ಈ ಭಗವಂತ ತನ್ನ ಸಾಮರ್ಥ್ಯದಿಂದ ಜಗತ್ತನ್ನು ಸೃಷ್ಟಿಸಿದ ಇಲ್ಲವೆ ಅದಕ್ಕೂ ಹೆಚ್ಚಾಗಿ ಅದನ್ನು ತನ್ನದೇ ಅನಂತ ದೈವೀ ಸತ್ತೆಯಲ್ಲಿ ಪ್ರಕಟಿಸಿದ. ಆದರೆ ಈ ಭೌತಿಕ ಜಗತ್ತಿನಲ್ಲಿ ಇಲ್ಲವೆ ಅದರ ಆಧಾರದಲ್ಲಿ ತನ್ನನ್ನು ವಿರುದ್ಧ ಅವಸ್ಥೆಗಳೆಂದು ತೋರಿಬರುವವುಗಳಲ್ಲಿ ಅಡಗಿಸಿಟ್ಟಿದ್ದಾನೆ, ಅಸತ್, ಅಪ್ರಜ್ಞೆ ಮತ್ತು ಜಡ ಇವು ಆ ವಿರುದ್ಧ ಅವಸ್ಥೆಗಳು. ಇದನ್ನೇ ನಾವು ಈಗಿನ ದಿನಗಳಲ್ಲಿ ಅಚೇತನ(Inconscient) ಎಂದು ಕರೆಯುತ್ತೇವೆ, ಅದು ತನ್ನ ಅಚೇತನದ ಶಕ್ತಿಯಿಂದ ಈ ಭೌತಿಕ ವಿಶ್ವವನ್ನು ಸೃಷ್ಟಿಸಿದ ಹಾಗೆ ತೋರಿಬರುತ್ತದೆ, ಆದರೆ ಇದು ಕೇವಲ ತೋರಿಕೆ, ಏಕೆಂದರೆ ನಾವು ಕೊನೆಯಲ್ಲಿ ಕಂಡುಕೊಳ್ಳುವ ಹಾಗೆ ಜಗತ್ತಿನ ಎಲ್ಲ ಕ್ರಮಬದ್ಧ ಅಳವಡಿಕೆಗಳನ್ನು ಕೇವಲ ಪರಮೋಚ್ಚ, ರಹಸ್ಯ ಬುದ್ಧಿಮತ್ತೆಯ ಕಾರ್ಯಗತಿಯಿಂದ ವ್ಯವಸ್ಥೆಗೊಳಪಡಿಸಿರುವಂತಿದೆ. ಅಚೇತನ ಶೂನ್ಯ ಎಂದು ತೋರಿಬರುವುದರಲ್ಲಿ ಅಡಗಿಕೊಂಡಿರುವ ದೈವೀ ಸತ್ತೆ ಜಗತ್ತಿನಲ್ಲಿ ಮೊದಲನೆಯದಾಗಿ ಭೌತದ್ರವ್ಯದಲ್ಲಿ, ನಂತರ ಪ್ರಾಣ, ಮನಸ್ಸು ಹಾಗೂ ಆತ್ಮ ಇವುಗಳ ರೂಪದಲ್ಲಿ ಹೊರಹೊಮ್ಮುತ್ತದೆ. ಸೃಷ್ಟಿಮಾಡುವ, ತೋರಿಕೆಗೆ ಅಚೇತನದ್ದೆಂದು ಕಂಡುಬರುವ ಚೈತನ್ಯ ವಾಸ್ತವದಲ್ಲಿ ಭಗವಂತನ ಪ್ರಜ್ಞಾ–ಶಕ್ತಿಯಾಗಿರುತ್ತದೆ ಮತ್ತು ಭೌತದ್ರವ್ಯದಲ್ಲಿ ರಹಸ್ಯವಾಗಿ ಇರುವ ಅದರ ಪ್ರಜ್ಞೆಯ

ಒಂದು ಬದಿ ಪ್ರಾಣದಲ್ಲಿ ಹೊರಹೊಮ್ಮಲು ಪ್ರಾರಂಭಿಸುತ್ತದೆ, ತನ್ನದೇ ಹೆಚ್ಚಿನದಾದ ಏನೋ ಒಂದನ್ನು ಮನಸ್ಸಿನಲ್ಲಿ ಕಂಡುಕೊಳ್ಳುತ್ತದೆ ಮತ್ತು ಅದರ ನಿಜವಾದ ಆತ್ಮವನ್ನು ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಕಂಡುಕೊಳ್ಳುತ್ತದೆ, ಕೊನೆಗೆ ಅತಿಮಾನಸ ಪ್ರಜ್ಞೆಯಿದೆ ಅದರ ಮೂಲಕ ನಾವು ದೈವೀ ನೈಜತೆಯ ಬಗ್ಗೆ ಅರಿವುಳ್ಳವರಾಗುತ್ತೇವೆ, ಅದರಲ್ಲಿ ಪ್ರವೇಶಿಸುತ್ತೇವೆ ಮತ್ತು ಅದರೊಂದಿಗೆ ಏಕವಾಗುತ್ತೇವೆ. ಇದನ್ನೇ ನಾವು ಉತ್ಕ್ರಾಂತಿ ಎಂದು ಕರೆಯುತ್ತೇವೆ, ಅದು ಪ್ರಜ್ಞೆಯ ಉತ್ಕ್ರಾಂತಿಯಾಗಿದೆ ಮತ್ತು ವಸ್ತು–ವಿಷಯಗಳಲ್ಲಿ ದಿವ್ಯಾತ್ಮನ ಉತ್ಕ್ರಾಂತಿಯಾಗಿದೆ ಮತ್ತು ಬಾಹ್ಯದಲ್ಲಿ ಮಾತ್ರ ಜೀವಜಾತಿಯ ಉತ್ಕ್ರಾಂತಿಯಾಗಿದೆ. ಹೀಗೆ ಮೂಲದಲ್ಲಿ ಜಡವಾಗಿದ್ದುದರಿಂದ ಅಸ್ತಿತ್ವದ ಆನಂದ ಮೊದಲು ಸುಖ, ದುಃಖಗಳ ಒಂದಕ್ಕೊಂದು ವಿರುದ್ಧವಾದ ರೂಪಗಳಲ್ಲಿ ಹೊರಹೊಮ್ಮುತ್ತದೆ, ನಂತರ ಆ ಆನಂದವನ್ನು ದಿವ್ಯಾತ್ಮನ ದಿವ್ಯಾನಂದದಲ್ಲಿ ಕಂಡುಕೊಳ್ಳಬೇಕಾಗುತ್ತದೆ, ಉಪನಿಷತ್ತುಗಳಲ್ಲಿ ಈ ದಿವ್ಯಾನಂದವನ್ನು ಬ್ರಹ್ಮನ್‌ನ ದಿವ್ಯಾನಂದ ಎಂದು ಕರೆದಿದ್ದಾರೆ. 'ದೈವೀ ಜೀವನ' ಗ್ರಂಥದಲ್ಲಿ ವಿಶ್ವವನ್ನು ಕುರಿತು ಕೊಟ್ಟ ವಿವರಣೆಯಲ್ಲಿ ಅದೇ ಕೇಂದ್ರ ವಿಚಾರವಾಗಿದೆ.

**(CWSA, 35/91)**

## ಯೋಗ ಸಮನ್ವಯ (Synthesis of Yoga)

ಈ ಏಕಾಗ್ರತೆ ದೈವೀ ವಿಚಾರದಿಂದ ಮುಂದುವರಿಯುತ್ತದೆ .., ಏಕೆಂದರೆ ಆ ದೈವೀ ವಿಚಾರದ ಮೂಲಕ ಮಾನಸಿಕ ಸತ್ತೆ, ಎಲ್ಲ ಅಭಿವ್ಯಕ್ತಿಯಾಚೆಗೆ ಅಭಿವ್ಯಕ್ತ–ಗೊಂಡುದುದರತ್ತ ಮೇಲಕ್ಕೇರುತ್ತದೆ. ಅದಕ್ಕೆ ದೈವೀ ವಿಚಾರ ಕೇವಲ ಒಂದು ಉಪಕರಣವಾಗಿರುತ್ತದೆ. ದೈವೀ ವಿಚಾರದ ಮೇಲೆ ಏಕಾಗ್ರತೆ ವಹಿಸುವುದರ ಮೂಲಕ, ಸದ್ಯ ನಾವಾಗಿರುವ ಮಾನಸಿಕ ಅಸ್ತಿತ್ವವು ನಮ್ಮ ಮಾನಸಿಕತೆಯ ಬೇಲಿಯನ್ನು ಮುರಿದುಹಾಕುತ್ತದೆ ಮತ್ತು ಆ ದೈವೀ ವಿಚಾರಕ್ಕೆ ಅನುಗುಣವಾದ ಪ್ರಜ್ಞೆ, ಸತ್ತೆ, ಪ್ರಜ್ಞಾಪೂರ್ಣ ಸತ್ತೆಯ ಸಾಮರ್ಥ್ಯ ಮತ್ತು ದಿವ್ಯಾನಂದ ಇರುವ ಸ್ಥಿತಿಯನ್ನು ತಲುಪುತ್ತದೆ ಮತ್ತು ಅದು ಆ ದೈವೀ ವಿಚಾರದ ಸಂಕೇತ, ಚಲನೆ ಮತ್ತು ಲಯಬದ್ಧತೆಯಾಗಿರುತ್ತದೆ.

(ಯೋಗ ಸಮನ್ವಯ)

ಸದ್ಯದ ಸಮಯದಲ್ಲಿ ಮೇಲೆ ಕೊಟ್ಟ ಸಾಲುಗಳಿರುವ ಅಧ್ಯಾಯ ನನ್ನೆದುರಿಗಿಲ್ಲ, ಆದರೆ ಅಲ್ಲಿ ಉದ್ಧರಿಸಿ ಹೇಳಿದ ವಾಕ್ಯಗಳಿಂದ ಅದು ಸಾರಭೂತವಾಗಿ ಮಾನಸಿಕ ವಿಚಾರವೆಂದು ಕಂಡುಬರುತ್ತದೆ. ಉದಾಹರಣೆಗೆ



ವೇದಾಂತದ ಜ್ಞಾನದ ವಿಧಾನದಲ್ಲಿ ಮನುಷ್ಯ ಸರ್ವತ್ರಾಸ್ತಿತ್ವ(omnipresent) ವಿರುವ ಬ್ರಹ್ಮನ್‌ನ ವಿಚಾರದ ಮೇಲೆ ಏಕಾಗ್ರತೆ ವಹಿಸುತ್ತಾನೆ – ಮನುಷ್ಯ ಗಿಡವೊಂದನ್ನು ಇಲ್ಲವೆ ಸುತ್ತಲಿರುವ ವಸ್ತುಗಳನ್ನು ನೋಡುತ್ತಾನೆ, ಅಲ್ಲಿ ಬ್ರಹ್ಮನ್ ಇದ್ದಾನೆ ಮತ್ತು ಗಿಡ ಇಲ್ಲವೆ ವಸ್ತು ಕೇವಲ ಅವನ ಒಂದು ರೂಪ ಎಂಬ ವಿಚಾರ ಅವನಲ್ಲಿರುತ್ತದೆ. ಏಕಾಗ್ರತೆ ಸರಿಯಾದ ರೀತಿಯದಾಗಿದ್ದರೆ ಅವನು ಅಲ್ಲಿ ಕೆಲ ಸಮಯದ ನಂತರ ಒಂದು ಸಾನ್ನಿಧ್ಯವಿರುವುದರ ಬಗ್ಗೆ ಅರಿವುಳ್ಳವನಾಗುತ್ತಾನೆ, ಭೌತಿಕವಾದ ಗಿಡ ಒಂದು ಚಿಪ್ಪಿನ ಹಾಗಾಗುತ್ತದೆ ಮತ್ತು ಸಾನ್ನಿಧ್ಯ ಇಲ್ಲವೆ ಅಸ್ತಿತ್ವ ಮಾತ್ರ ಒಂದು ನೈಜತೆ ಎಂಬ ಭಾವನೆ ಬರುತ್ತದೆ. ಆಗ ಆ ವಿಚಾರ ಅಲ್ಲಿಂದ ಬಿಟ್ಟು ಹೋಗುತ್ತದೆ, ಆ ವಿಷಯದ ನೇರ ದರ್ಶನ ಆ ಸ್ಥಾನದಲ್ಲಿ ಬರುತ್ತದೆ – ಇನ್ನು ಮುಂದೆ ಆ ವಿಚಾರದ ಮೇಲೆ ಏಕಾಗ್ರತೆ ವಹಿಸುವ ಆವಶ್ಯಕತೆ ಇರುವುದಿಲ್ಲ, ಮನುಷ್ಯ ಆಳಾತಿ ಆಳದ ಪ್ರಜ್ಞೆಯಿಂದ ನೋಡುತ್ತಾನೆ – ಸ ಪಶ್ಯತಿ (स पश्यति) ವಿಚಾರದ ಮೇಲಿನ ಈ ಏಕಾಗ್ರತೆ ಕೇವಲ ಯೋಚನೆ (ಮನನ) ಮಾಡುವುದಾಗಿರುವುದಿಲ್ಲ, ಆದರೆ ಅದು ಆ ವಿಚಾರದ ಸಾರಭೂತವಾದುದರ ಮೇಲೆ ನೆಲೆಸುವುದಾಗಿರುತ್ತದೆ ಎಂಬುದನ್ನು ಗಮನಿಸಬೇಕು.

**(CWSA, 35/95)**

**ಪ್ರಶ್ನೆ :** *'ಯೋಗ ಸಮನ್ವಯ' ಗ್ರಂಥದಲ್ಲಿ ಕೊಡಲಾಗಿರುವ ಸಾಧನೆಯ ವಿಧಾನ ನಮ್ಮ ಈಗಿನ ಆಚರಣೆಗೆ ಅನ್ವಯಿಸುತ್ತದೆಯೆ? ನಾವು 'ಯೋಗ ಸಮನ್ವಯ' ಗ್ರಂಥವನ್ನು ಓದಿದಾಗ ಅದರಲ್ಲಿ ಕಂಡುಬರುವುದು 'ಶ್ರೀಮಾತೆ' ಮತ್ತು 'ಯೋಗದ ಮೇಲೆ ಪ್ರಕಾಶಗಳು' ಗ್ರಂಥಗಳಲ್ಲಿ ಹೇಳಲಾದುದರಿಂದ ಬಹಳ ಭಿನ್ನವಾಗಿರುವಂತೆ ಕಂಡುಬರುತ್ತದೆ.*

**ಶ್ರೀ ಅ :** 'ಯೋಗ ಸಮನ್ವಯ' ಗ್ರಂಥ ಎಲ್ಲರೂ ಅನುಸರಿಸಬಹುದಾದ ವಿಧಾನವೊಂದನ್ನು ಕೊಡುವ ಉದ್ದೇಶವನ್ನಿಟ್ಟುಕೊಂಡಿಲ್ಲ. ಯೋಗದ ಪ್ರತಿಯೊಂದು ಬದಿಯನ್ನು, ಅದರ ಎಲ್ಲ ಸಾಧ್ಯತೆಗಳೊಂದಿಗೆ ಪ್ರತ್ಯೇಕವಾಗಿ ವಿವರಿಸಿ ಹೇಳಲಾಗಿದೆ ಮತ್ತು ಆ ಬೇರೆ ಬೇರೆ ಪದ್ಧತಿಗಳು ಒಂದನ್ನೊಂದು ಹೇಗೆ ಸಂಧಿಸುತ್ತವೆ ಎಂಬುದರ ಸೂಚನೆ ಕೊಡಲಾಗಿದೆ, ಅದರಿಂದಾಗಿ ಮನುಷ್ಯ ಜ್ಞಾನ ಮಾರ್ಗದಿಂದ ಪ್ರಾರಂಭಿಸಿ ಕರ್ಮ ಹಾಗೂ ಭಕ್ತಿ ಮಾರ್ಗಗಳಲ್ಲಿ ಹೇಗೆ ಸಿದ್ಧಿಪಡೆಯಬಹುದು ಎಂಬುದು ತಿಳಿದು ಬರುತ್ತದೆ ಮತ್ತು ಅದು ಪ್ರತಿಯೊಂದು ಮಾರ್ಗಕ್ಕೂ ಅನ್ವಯಿಸುತ್ತದೆ. ಸ್ವ–ಪರಿಪೂರ್ಣತೆ ಕುರಿತಾದ ಭಾಗವನ್ನು ಬರೆದು ಮುಗಿಸಿದಾಗ, ಈ ಎಲ್ಲ ಮಾರ್ಗಗಳನ್ನು ಹೇಗೆ ಸಂಯೋಜಿಸಬೇಕೆಂಬುದಕ್ಕೆ

ಸೂಚನೆ ನೀಡಬೇಕೆಂಬ ಉದ್ದೇಶವಿತ್ತು, ಆದರೆ ಅದನ್ನು ಎಂದೂ ಬರೆಯಲಾಗಲಿಲ್ಲ. 'ಶ್ರೀಮಾತೆ' ಮತ್ತು 'ಯೋಗದ ಮೇಲೆ ಪ್ರಕಾಶಗಳು' ಗ್ರಂಥಗಳು ಸಾಧನೆಯನ್ನು ಇಡಿಯಾಗಿ ಹೇಗೆ ಕೈಕೊಳ್ಳಬೇಕು ಎಂಬುದನ್ನು ಕುರಿತಾಗಿ ಬರೆದವುಗಳಾಗಿಲ್ಲ, ಅವು ಅದರಲ್ಲಿರುವ ಅನೇಕ ಅಂಶಗಳನ್ನು ಕೇವಲ ಸ್ಪರ್ಶಿಸುತ್ತವೆ.

**(CWSA, 35/96)**

## ಗೀತಾ ಪ್ರಬಂಧಗಳು (Essays on Gita)

**ಪ್ರಶ್ನೆ :** *ನಾನಿಲ್ಲಿಗೆ ಬರುವುದಕ್ಕಿಂತ ಮೊದಲು ನಿಮ್ಮ 'ಗೀತಾ ಪ್ರಬಂಧಗಳು' ಗ್ರಂಥದಲ್ಲಿ ನನ್ನ ಕ್ರೋಧದ ಪ್ರವೃತ್ತಿಗೆ ಸ್ವಲ್ಪ ಮಟ್ಟಿಗಿನ ಸಮರ್ಥನೆ ಕಂಡುಕೊಂಡಿದ್ದೆ. – ಆದಾಗ್ಯೂ ಹಿಂಸೆಯತ್ತ ಪ್ರವೃತ್ತಿ ಅದಾಗಲೇ ನನ್ನಲ್ಲಿತ್ತು ಎಂದು ಹೇಳಬೇಕು. ಹೊಸ ಸೃಷ್ಟಿಯಲ್ಲಿ ಹಿಂಸೆಯ ಒಂದು ರೀತಿಗೆ ಸ್ಥಾನವಿರುತ್ತದೆಯೆ?*

**ಶ್ರೀ ಅ :** 'ಗೀತಾ ಪ್ರಬಂಧಗಳು' ಗ್ರಂಥ ಗೀತೆಯಲ್ಲಿ ಅಭಿವೃದ್ಧಿಪಡಿಸಿದ ಸಾಮಾನ್ಯ ಮಟ್ಟದ ಕರ್ಮ ಯೋಗವನ್ನು ಕುರಿತು ವಿವರಣೆ ನೀಡುತ್ತದೆ, ಅಲ್ಲಿ ಕೈಕೊಂಡ ಕಾರ್ಯದ ಬಗ್ಗೆ ಹೇಳಿದ್ದು ಮಾನವ ಜೀವನದ ಸಾಮಾನ್ಯ ಮಟ್ಟದ ಕಾರ್ಯ ಕುರಿತಾಗಿದೆ, ಅದರೊಂದಿಗೆ ಆಂತರಿಕ ಬದಲಾವಣೆ ಕುರಿತು ಪ್ರಸ್ತಾಪವಿದೆ. ಅಲ್ಲಿಯೂ ಕೂಡ ಉಪಯೋಗಿಸಬೇಕಾದ ಹಿಂಸೆ ಅಹಂಕಾರದ ಉದ್ದೇಶ–ಗಳನ್ನಿಟ್ಟುಕೊಂಡು ವೈಯಕ್ತಿಕವಾಗಿ ಕೈಕೊಳ್ಳಬಹುದಾದ ಹಿಂಸೆಯಲ್ಲ, ಆದರೆ ಅದು ಸಾಮಾಜಿಕ ಜೀವನದ ಕ್ರಮಬದ್ಧ ಪದ್ಧತಿಯ ಭಾಗವಾಗಿರುತ್ತದೆ. ಕ್ರೋಧ ಇಲ್ಲವೆ ಭಾವೋನ್ಮತ್ತತೆ ಇಲ್ಲವೆ ಪ್ರಾಣಿಕ ಉದ್ದೇಶ ಇವುಗಳನ್ನಿಟ್ಟುಕೊಂಡು ಕೈಕೊಂಡ ಕಾರ್ಯಕ್ಕೆ ಆಧ್ಯಾತ್ಮಿಕವಾದ ಯಾವುದೂ ಸಮರ್ಥನೆ ನೀಡುವುದಿಲ್ಲ. ನಮ್ಮ ಯೋಗದಲ್ಲಿ ನಮ್ಮ ಉದ್ದೇಶ ಮನುಷ್ಯ ಜೀವನದ ಮಟ್ಟದ ಮೇಲೇರಿ ಹೋಗುವು–ದಾಗಿದೆ, ಮತ್ತು ಅದರಲ್ಲಿ ಹಿಂಸೆಯನ್ನು ಒಟ್ಟಿನಲ್ಲಿ ಬಿಟ್ಟುಕೊಡಬೇಕಾಗುತ್ತದೆ.

**ಪ್ರಶ್ನೆ :** *ನಾನು 'ಗೀತಾ ಪ್ರಬಂಧಗಳು' ಗ್ರಂಥವನ್ನು ಎರಡು ಅಥವಾ ಮೂರು ಸಲ ಓದಿದ್ದೆ. ಆದರೆ ಅದನ್ನು ಮತ್ತೆ ಓದಲು ಪ್ರಾರಂಭಿಸಿದಾಗ, ಅಲ್ಲಿ ನಾನು ತಿಳಿದುಕೊಳ್ಳುವುದನ್ನು ತಪ್ಪಿಸಿಕೊಂಡಿದ್ದ ಹಲವಾರು ವಿಚಾರಗಳಿರುವುದನ್ನು ಕಂಡುಕೊಂಡೆ. ನಾನು ಅದನ್ನು ಮೇಲಿಂದ ಮೇಲೆ ಓದುತ್ತ ಹೋದರೆ ಪ್ರತಿಸಲ ಹೊಸ ವಿಚಾರಗಳನ್ನು ಕಂಡುಕೊಳ್ಳಬಹುದು ಎನಿಸುತ್ತದೆ.*



**ಶ್ರೀ ಅ :** ಅದು ಸಾಮಾನ್ಯವಾಗಿ ಆಗುವ ಅನುಭವ – ಅಗಾಧ ಜ್ಞಾನವುಳ್ಳ ಬಹಳಷ್ಟು ಪುಸ್ತಕಗಳು ಆ ಪರಿಣಾಮ ತಂದುಕೊಡುತ್ತವೆ. ಬಹುಮಟ್ಟಿಗೆ ಎಲ್ಲ ಆಧ್ಯಾತ್ಮಿಕ ಸಮಸ್ಯೆಗಳನ್ನು ಕುರಿತು ಗೀತೆಯಲ್ಲಿ ಸಂಕ್ಷಿಪ್ತವಾಗಿ, ಆದರೆ ಆಳವಾದ ರೀತಿಯಲ್ಲಿ ಚರ್ಚಿಸಲಾಗಿದೆ. ಮತ್ತು ನಾನು ಅದೆಲ್ಲವನ್ನು ಪೂರ್ತಿಯಾಗಿ ಹೊರತರಲು ಪ್ರಯತ್ನಿಸಿದ್ದೇನೆ.

**(CWSA, 35/100)** **– ಶ್ರೀ ಅರವಿಂದರು**

*

## ಅನುಬಂಧ:

### ಚೀನಾ ದೇಶದ ತಾವೋ(Tao) ಮತ ಸಿದ್ಧಾಂತ

('ಆರ್ಯ' ಪತ್ರಿಕೆಯ ಜೂನ 15, 1915 ರ ಸಂಚಿಕೆಯಲ್ಲಿ ಪ್ರಕಟವಾದದ್ದು)

ಏಕತೆಯನ್ನು ಕುರಿತು ಪ್ರಾಚೀನ, ಸನಾತನ ಬೋಧನೆಗೆ, ಅತ್ಯಂತ ಮೊದಲಿನ ಕಾಲಗಳಲ್ಲಿ, ಭಾರತದಲ್ಲಿ ಮಾನ್ಯತೆ ಕೊಡಲಾಗಿತ್ತು, ಅದನ್ನು ಅಜ್ಞಾನದ ಎಲ್ಲ ಮಬ್ಬುತನಗಳಿದ್ದಾಗ್ಯೂ, ಎಲ್ಲ ಕುಗ್ಗುವಿಕೆಗಳು, ವಿರೂಪಗೊಳಿಸುವಿಕೆಗಳು, ಎಲ್ಲ ಪೀಡೆ(trials)ಗಳು, ಸವಾಲುಗಳು, ಆಕ್ರಮಣ ಮಾಡುವ ಪ್ರಭಾವಗಳು ಇದ್ದಾಗಲೂ ಭಾರತ ಇಂದಿನವರೆಗೆ ಈ ಪರಮೋಚ್ಚ, ಕೇಂದ್ರ ಸತ್ಯಕ್ಕೆ ವಿಶ್ವಾಸಪೂರ್ವಕವಾಗಿ ಅಂಟಿಕೊಂಡಿದೆ. ಆ ಸತ್ಯವನ್ನು ಬೇರೆ ದೇಶಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಡಬೇಕಾದಾಗ ಹೊರಗೆ ಚೆಲ್ಲಿಕೊಟ್ಟಿವೆ ಇಲ್ಲವೆ ಅದನ್ನು ವ್ಯಾಸಂಗದ ಕೋಣೆಗೆ ಇಲ್ಲವೆ ಸನ್ಯಾಸಿಗಳ ಮಠಕ್ಕೆ ವರ್ಗಾಯಿಸಿವೆ. ಆದುದರಿಂದ ಅದನ್ನು ನಾವು ಈ ದೇಶದ ವೈಶಿಷ್ಟ್ಯವೆಂದು ಪರಿಗಣಿಸುವುದು ಯೋಗ್ಯವಾಗಿದೆ, ಅದನ್ನು ಇತರರು ಪ್ರತಿಪಾದಿಸಿದರೆ, ಅವರು ನಮ್ಮಿಂದ ಅದರ ಬಗ್ಗೆ ಕಲಿತುಕೊಂಡಿರುತ್ತಾರೆ. ಆದರೆ ಆ ದೈವೀ ಸತ್ಯಕ್ಕೆ ಎಲ್ಲ ದೇಶಗಳಲ್ಲಿ, ಎಲ್ಲ ಯುಗಗಳಲ್ಲಿ ಸಾಕ್ಷಿಗಳಿದ್ದರು, ಅದು ಹಾಗಿರದೆ ಹೋಗಿದ್ದರೆ, ಅದು ಶಾಶ್ವತ ಸತ್ಯವಾಗಿ ಉಳಿಯುತ್ತಿರಲಿಲ್ಲ, ಆದರೆ ತಾತ್ಕಾಲಿಕ ಸತ್ಯವಾಗಿ ಇಲ್ಲವೆ ವ್ಯಕ್ತಿಗತ ಅಥವಾ ರಾಷ್ಟ್ರದ ಯೋಚನೆಯ ವೈಲಕ್ಷಣ್ಯವಾಗಿರುತ್ತಿತ್ತು. ನಾವು ಸಂಕ್ಷಿಪ್ತವಾಗಿರುವ ಹಾಗೂ ಸ್ವಾರಸ್ಯಕರವಾಗಿರುವ ಒಂದು ಗ್ರಂಥದ[1] ಅನುವಾದ ಮಾಡುತ್ತೇವೆ, ಆ ಗ್ರಂಥವನ್ನು ಫ್ರೆಂಚ್ ಲೇಖಕನೊಬ್ಬನು ಏಕತೆಯ ಸಿದ್ಧಾಂತದ ಪ್ರತಿಪಾದಕರನ್ನು ಹಾಗೂ ಬೋಧಕರನ್ನು ಕುರಿತು ಬರೆದಿದ್ದಾನೆ. ಆ ಏಕತೆಯ ಸಿದ್ಧಾಂತ ಅತಿ

1. The Doctrine of Unity by A.L. Caillet, Paris, Ferdinand Drubay.

ಪ್ರಾಚೀನ ಕಾಲದಿಂದ ಹಿಡಿದು ಇತ್ತೀಚಿನ ವರೆಗಿನ ಚಿಂತಕರ ಯೋಚನೆಗಳ ಆಧಾರ ಪಡೆದಿದೆ. ಆ ಗ್ರಂಥದಲ್ಲಿರುವ ಕೆಲವು ಪರಿಚ್ಛೇದಗಳು ಚೀನಾ ದೇಶದ ಶ್ರೇಷ್ಠ ಚಿಂತಕನಾದ ಲಾವೋತ್ಸೆನ ಸಿದ್ಧಾಂತಗಳ ಆಧಾರ ಪಡೆದಿವೆ. ಅವನು ಕ್ರಿ.ಶ. ಕ್ಕಿಂತ ಆರು ಶತಮಾನಗಳ ಹಿಂದೆ ಜೀವಿಸಿದ್ದ ಹಾಗೂ ಬೋಧಿಸಿದ್ದ. ಅವನ ಸಿದ್ಧಾಂತವನ್ನು ತಾವೋ ಸಿದ್ಧಾಂತ (Taosism) ಎಂದು ಕರೆಯುತ್ತಾರೆ. ತಾವೋ ಸಿದ್ಧಾಂತದ ವಿವರಗಳನ್ನು ಇನ್ನೊಬ್ಬ ಫ್ರೆಂಚ್ ಲೇಖಕ ಬರೆದ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ. ಆ ಪುಸ್ತಕದ ಹೆಸರು Wu-Wei (ಪ್ರತಿರೋಧ ಇಲ್ಲದಿರುವಿಕೆ)[2] ಇದನ್ನು ಒಂದು ಕಾಲ್ಪನಿಕ ಸಂಭಾಷಣೆಯ ವರದಿಯನ್ನೊಳ–ಗೊಂಡ ರೂಪದಲ್ಲಿ ಬರೆಯಲಾಗಿದೆ. ಅದು ಚೀನಾ ದೇಶದ ಒಬ್ಬ ಋಷಿ ಮತ್ತು ಬೇರೆ ದೇಶದ ಸತ್ಯಾನ್ವೇಷಕ ಇವರ ನಡುವಿನ ಸಂಭಾಷಣೆಯಾಗಿದೆ.

## ತಾವೋ (Tao)

'ತಾವೋ' ಅದರ ನೈಜತೆಯಲ್ಲಿ, ಪರದೇಶದವರಾದ ನೀವು ದೇವ (God) ಎಂದು ಕರೆಯುತ್ತಿರುವುದಕ್ಕಿಂತ ಬೇರೇನಲ್ಲ. ತಾವೋ ಏಕೈಕನಾದವನು, ದೈವೀ ಪ್ರಾರಂಭ ಹಾಗೂ ದೈವೀ ಕೊನೆಯಾದವನು. ಅವನು ಎಲ್ಲ ವಸ್ತು–ವಿಷಯಗಳನ್ನು ಒಳಗೊಂಡಿದ್ದಾನೆ ಮತ್ತು ಅವನತ್ತ ಎಲ್ಲವೂ ಮರಳಿ ಹೋಗುತ್ತದೆ.

'ತಾವೋ'ಕ್ಕೆ ಒಂದು ಹೆಸರು ಕೊಡಲಾಗದು, ಏಕೆಂದರೆ ಅದು ಒಂದೇ ಇದೆ. ವು(Wu) ಎಂದರೆ 'ಏನೂ ಇಲ್ಲ' – ತಾವೋನನ್ನು ನೋಡಿರಿ. – ನಿಮಗೆ ಅರ್ಥವಾಗುವುದಿಲ್ಲವೆ, ಹಾಗಾದರೆ ಕೇಳಿಸಿಕೊಳ್ಳಿರಿ. ಅಲ್ಲಿ ಪರಿಪೂರ್ಣ ನೈಜತೆ ಅಸ್ತಿತ್ವದಲ್ಲಿದೆ, ಅದಕ್ಕೆ ಪ್ರಾರಂಭ ಎಂಬುದಿಲ್ಲ, ಕೊನೆ ಎಂಬುದಿಲ್ಲ. ಅದು ನಮ್ಮ ತಿಳಿವಳಿಕೆಯಾಚೆಗಿದೆ, ಹಾಗಾಗಿ ಅದು ನಮಗೆ ಏನೇನೂ ಅಲ್ಲವೆಂಬ ಭಾವನೆ ತಂದುಕೊಡುತ್ತದೆ. ನಾವು ತಿಳಿದುಕೊಳ್ಳಬಹುದಾದುದು, ನಮಗೆ ಸಾಪೇಕ್ಷವಾಗಿ ನೈಜವಾದದ್ದೆಂದು ಕಂಡುಬರುವುದು, ನೈಜತೆಯಲ್ಲಿ ಒಂದು ತೋರಿಕೆ ಮಾತ್ರ. ಅದು ನಿಜವಾಗಿ ಪರಿಪೂರ್ಣ ನೈಜತೆಯಿಂದ ಉತ್ಪನ್ನವಾದದ್ದು, ಏಕೆಂದರೆ ಪ್ರತಿಯೊಂದೂ ದೈವೀ ನೈಜತೆಯಿಂದ ಹೊರಹೊಮ್ಮುತ್ತದೆ ಮತ್ತು ಆ ನೈಜತೆಯತ್ತ ಮರಳಿ ಹೋಗುತ್ತದೆ, ಆದರೆ ನಮ್ಮ ಕಣ್ಣಿಗೆ ನಿಜವಾದವುಗಳೆಂದು ಕಂಡುಬರುವ ವಸ್ತು–ವಿಷಯಗಳು ತಮ್ಮಲ್ಲೇ ನೈಜವಾಗಿರುವುದಿಲ್ಲ. ನಾವು ದೈವೀ ಸತ್ತೆ(Being)

2. Wu-Wei, a Fiction based on the philosophy of Lao-tse, by Henri Borel, translated into French by Pierre Bernard.



ಎಂದು ಕರೆಯುವುದು ವಾಸ್ತವದಲ್ಲಿ ದೈವೀ ಸತ್ತೆಯಲ್ಲದ್ದು(Non-Being) ಆಗಿರುತ್ತದೆ ಮತ್ತು ನಾವು ದೈವೀ ಸತ್ತೆಯಲ್ಲದ್ದು ಎಂದು ಕರೆಯುವುದು ನಿಜವಾದ ಅರ್ಥದಲ್ಲಿ ದೈವೀ ಸತ್ತೆಯಾಗಿರುತ್ತದೆ. ಹಾಗಾಗಿ ನಾವು ಭವ್ಯ ಅಂಧಕಾರದಲ್ಲಿ ಜೀವಿಸುತ್ತೇವೆ. ನಾವು ನಿಜವಾದದ್ದೆಂದು ಕಲ್ಪನೆ ಮಾಡಿಕೊಳ್ಳುವುದು ನೈಜವಾಗಿರುವುದಿಲ್ಲ, ಆದಾಗ್ಯೂ ಅದು ನೈಜವಾದದ್ದರಿಂದ ಹೊರಹೊಮ್ಮುತ್ತದೆ, ಏಕೆಂದರೆ ದೈವೀ ನೈಜತೆ ಎಲ್ಲವೂ ಆಗಿದೆ. ಆದ್ದರಿಂದ ದೈವೀ ನೈಜತೆ ಮತ್ತು ದೈವೀ ನೈಜತೆಯಲ್ಲದ್ದು ಇವೆರಡೂ ತಾವೋ ಆಗಿವೆ, ಆದರೆ ಈ ತಾವೋ ಶಬ್ದ ಮಾನವ ಸತ್ತೆಯಿಂದ ಮಾತಿನಲ್ಲಿ ವ್ಯಕ್ತಪಡಿಸಿದ್ದು ಮತ್ತು ಆ ವಿಚಾರವನ್ನು ಅಭಿವ್ಯಕ್ತ–ಪಡಿಸಲಾಗುವುದಿಲ್ಲ ಎಂಬುದನ್ನು ಮರೆಯಬೇಡಿರಿ. ಇಂದ್ರಿಯಗಳು ಗ್ರಹಿಕೆಗೆ ತಂದುಕೊಳ್ಳಬಹುದಾದ ಎಲ್ಲ ವಸ್ತು–ವಿಷಯಗಳು ಮತ್ತು ನಿನ್ನ ಹೃದಯದ ಆಸೆಗಳು ನೈಜವಾಗಿಲ್ಲ. ಸ್ವರ್ಗ ಮತ್ತು ಪೃಥ್ವಿ ಇವುಗಳ ಮೂಲ ತಾವೋ. ದೈವೀ ಒಂದು ಎರಡನ್ನು ಸೃಷ್ಟಿಸಿತು, ಎರಡಾದದ್ದು ಮೂರನ್ನು ಸೃಷ್ಟಿಸಿತು, ಮೂರಾದದ್ದು ಅಸಂಖ್ಯಾತವಾದವುಗಳನ್ನು ಸೃಷ್ಟಿಸಿತು. ಮತ್ತು ಅಸಂಖ್ಯಾತವಾದವುಗಳು ದೈವೀ ಏಕವಾದುದರತ್ತ ಮರಳಿ ಹೋಗುತ್ತವೆ. ...

ತಾವೋ ಎಲ್ಲದರ ಮೂಲ ಎಂಬುದು ನಿನಗೆ ತಿಳಿದಿದೆ, ಎಲ್ಲ ಗಿಡಗಳು, ಹೂವುಗಳು, ಪಕ್ಷಿಗಳು, ಸಮದ್ರ, ಮರುಭೂಮಿಗಳು, ಕಲ್ಲು ಬಂಡೆಗಳು, ಪ್ರಕಾಶ, ಕತ್ತಲೆ, ಶಾಖ ಮತ್ತು ತಣ್ಣಗಿರುವುದು, ಹಗಲು ಮತ್ತು ರಾತ್ರಿ, ಬೇಸಿಗೆ ಹಾಗೂ ಚಳಿಗಾಲ ಮತ್ತು ನಿನ್ನದೇ ಜೀವನ ಇವೆಲ್ಲವುಗಳ ಮೂಲ ತಾವೋ. ಜಗತ್ತುಗಳು ಹಾಗೂ ಸಮುದ್ರಗಳು ಸನಾತನವಾದುದರಲ್ಲಿ ಕರಗಿ ಹೋಗುತ್ತವೆ. ಮನುಷ್ಯ ಅಂಧಕಾರದಿಂದ ಹೊರಹೊಮ್ಮುತ್ತಾನೆ, ಪ್ರಕಾಶದ ಸ್ಪಷ್ಟತೆಯಲ್ಲಿ ಕ್ಷಣಕಾಲ ನಗುತ್ತಾನೆ ಮತ್ತು ಮಾಯವಾಗುತ್ತಾನೆ, ಆದರೆ ಇವೆಲ್ಲ ಬದಲಾವಣೆಗಳಲ್ಲಿ ದೈವೀ ಏಕೈಕವಾದದ್ದು ತನ್ನನ್ನು ಪ್ರಕಟಿಸುತ್ತದೆ. ತಾವೋ ಎಲ್ಲದರಲ್ಲಿದೆ, ನಿನ್ನ ಜೀವ ಅದರ ಆಳಾತಿ ಆಳದಲ್ಲಿ ತಾವೋ ಆಗಿದೆ.

ತಪ್ಪು ತಿಳಿವಳಿಕೆ ಮಾಡಿಕೊಳ್ಳಬೇಡ – ನೀನು ನೋಡುತ್ತಿರುವುದರಲ್ಲಿ ತಾವೋ ಇದೆ, ಆದರೆ ಅದು ನೀನು ನೋಡುತ್ತಿರುವ ವಸ್ತು ಅಲ್ಲ. ತಾವೋ ನಿನ್ನ ಕಣ್ಣಿಗೆ ಕಾಣಿಸಬಹುದೆಂದು ಯೋಚಿಸಬೇಡ, ತಾವೋ ನಿನ್ನ ಹೃದಯದಲ್ಲಿ ಸಂತೋಷ ಎಚ್ಚತ್ತುಕೊಳ್ಳುವಂತೆ ಮಾಡುವುದಿಲ್ಲ, ನೀನು ವೇದನೆ ಪಡುತ್ತಿರುವುದಕ್ಕಾಗಿ ನಿನ್ನ ಕಣ್ಣುಗಳಿಂದ ನೀರು ಹೊರಬರುವಂತೆ ತಾವೋ ಮಾಡುವುದಿಲ್ಲ, ಏಕೆಂದರೆ ಎಲ್ಲ ಭಾವನೆಗಳು ಸಾಪೇಕ್ಷವಾದವುಗಳು ಹಾಗೂ ನೈಜವಲ್ಲದವುಗಳು ಆಗಿರುತ್ತವೆ.

## ವು ವಿ (Wu Wei) (ಪತ್ರಿರೋಧ ಇಲ್ಲದಿರುವಿಕೆ)

ನಾನು ನಿನ್ನ ಬಳಿ ಪ್ರತಿರೋಧ ಇಲ್ಲದಿರುವಿಕೆಯ ಬಗ್ಗೆ ಮಾತನಾಡುತ್ತೇನೆ, ನಿನ್ನಲ್ಲಿರುವ ಪ್ರಚೋದನೆಯಿಂದ ಸ್ವಯಂಪ್ರೇರಿತವಾದ ಚಲನೆ, ಅದು ತಾವೋನಿಂದ ಜನಿಸಿ ಬಂದ ಹಾಗಿರುತ್ತದೆ. ತಾವೋದ ಸರಳ ಸೌಂದರ್ಯದಲ್ಲಿ ಸಮುದ್ರ ಉಕ್ಕೇರಿದ ಹಾಗೆ, ಹೂವು ಅರಳುತ್ತಿರುವ ಹಾಗೆ ತಮ್ಮ ಜೀವನದ ಪ್ರವಾಹ ಹರಿದು ಹೋಗಲಿ ಎಂದು ಅನುವು ಮಾಡಿಕೊಡುವ ಮನುಷ್ಯರು ನಿಜವಾದ ಮನುಷ್ಯರಾಗಿರುತ್ತಾರೆ. ಪ್ರತಿಯೊಬ್ಬ ಮನುಷ್ಯನಲ್ಲಿ ತಾವೋದಿಂದ ಹೊರಟುಬಂದ ಮತ್ತು ಅದರತ್ತ ಮರಳಿ ಕರೆದೊಯ್ಯುವ ಚಲನೆಯತ್ತ ಹೊರಳುವ ಪ್ರವೃತ್ತಿಯಿರುತ್ತದೆ, ಆದರೆ ಮನುಷ್ಯರು ತಮ್ಮ ಇಂದ್ರಿಯಗಳಿಂದ ಹಾಗೂ ಕಾಮ ಪ್ರಚೋದನೆಗಳಿಂದ ಕುರುಡಾಗಿರುತ್ತಾರೆ. ನೈಜವಲ್ಲದ ಎಲ್ಲದಕ್ಕೆ ಅವರು ಅಂಟಿಕೊಳ್ಳುತ್ತಾರೆ. ಏಕೈಕವಾದುದರ ಬಗ್ಗೆ ಆಸೆಯಿಟ್ಟುಕೊಳ್ಳುವುದಕ್ಕಾಗಿ ಬಹಳಷ್ಟು ವಿಷಯಗಳ ಬಗ್ಗೆ ಆಸೆಯನ್ನು ಹೊಂದಿರುತ್ತಾರೆ. ಕೆಲವೊಮ್ಮೆ ಅವರು ಜಾಣರಾಗಲು ಹಾಗೂ ಒಳ್ಳೆಯವರಾಗಲು ಬಯಸುತ್ತಾರೆ, ಆದರೆ ಅದಕ್ಕಿಂತ ಕೆಟ್ಟದಾದದ್ದು ಬೇರೆ ಯಾವುದೂ ಇಲ್ಲ.

ಏಕೈಕ ಉಪಾಯವೆಂದರೆ ತಾವು ಬಂದ ಮೂಲಕ್ಕೆ ಮರಳಿ ಹೋಗುವುದಾಗಿದೆ. ತಾವೋ ನಮ್ಮಲ್ಲಿದೆ, ತಾವೋ ಅಷ್ಟೇ ನಿಜವಾದ ವಿಶ್ರಾಂತಿ ಸ್ಥಳ: ಆಸೆಯನ್ನು ನಿರಾಕರಿಸುವುದರ ಮೂಲಕ ಮಾತ್ರ – ಜಾಣತನ ಹಾಗೂ ಒಳ್ಳೆಯತನ ಇವುಗಳಿಗಾಗಿರುವ ಆಸೆಯನ್ನು ಕೂಡ – ನಾವು ಆ ದೈವೀ ವಿಶ್ರಾಂತಿ ಸ್ಥಳವನ್ನು ತಲುಪುತ್ತೇವೆ. ತಾವೋ ಏನಿದೆ ಎಂಬುದನ್ನು ಅರಿತುಕೊಂಡವರು ಅದರ ಬಗ್ಗೆ ಮಾತನಾಡುವುದಿಲ್ಲ. ಅದನ್ನು ನೀನು ಶೋಧಿಸಬೇಕಾಗಿದೆ: ಎಲ್ಲ ಭಾವೋದ್ರೇಕಗಳಿಂದ, ಹಾತೊರೆತಗಳಿಂದ ಮುಕ್ತಗೊಳ್ಳುವುದರ ಮೂಲಕ, ಪರಿಪೂರ್ಣ ಸ್ವಯಂಪ್ರೇರಣೆಯಿಂದ ಜೀವಿಸುವುದರ ಮೂಲಕ, ಸ್ವಾಭಾವಿಕವಲ್ಲದ ಪ್ರಯತ್ನವನ್ನು ಬಿಟ್ಟುಕೊಡುವುದರ ಮೂಲಕ ನೀನು ಆ ಶೋಧವನ್ನು ಮಾಡಬಹುದು. ಆಘಾತಕ್ಕೊಳಗಾಗದೆ, ಪ್ರಯತ್ನ ಮಾಡದೆ ಮನುಷ್ಯ ತಾವೋನನ್ನು ಸಮೀಪಿಸಬೇಕು, ಅದರತ್ತ ಸಾಗುವಾಗಿನ ಚಲನೆ ವಿಶಾಲ ಸಮುದ್ರದ ಪ್ರಶಾಂತ ಪ್ರವಾಹದ ಹಾಗಿರಬೇಕು. ಆ ರೀತಿಯಲ್ಲಿ ನೀನು ತಾವೋದ ಬಳಿ ತಿರುಗಿ ಹೋಗುವಿ, ಮತ್ತು ನೀನು ಮರಳಿ ಹೊದಾಗ, ಹಾಗೆ ಹೋದದ್ದು ನಿನಗೆ ತಿಳಿದು ಬರುವುದಿಲ್ಲ, ಏಕೆಂದರೆ ನೀನೇ ಸ್ವತಃ ತಾವೋ ಆಗಿಬಿಟ್ಟಿರುತ್ತೀ.

.....



ಯಾವ ಮನುಷ್ಯನೂ ತಾವೋವನ್ನು ನಾಶಮಾಡಲಾರ, ಮತ್ತು ನಾಶವಾಗದ ಆತ್ಮದ ಪ್ರಕಾಶ ನಮ್ಮಲ್ಲಿ ಪ್ರತಿಯೊಬ್ಬನಲ್ಲೂ ಹೊರಹರಿಯುತ್ತಿರುತ್ತದೆ. ಮನುಷ್ಯನ ತಪ್ಪು ಸಾಧಿಸುವಿಕೆ (perversity) (ತಾವೋದ ಹಾಗೆ) ಅಷ್ಟೊಂದು ಭವ್ಯ ಹಾಗೂ ಸಾಮರ್ಥ್ಯಪೂರ್ಣವಾಗುತ್ತದೆಂದು ಯೋಚಿಸಬೇಡ. ಸನಾತನ ತಾವೋ ನಮ್ಮೆಲ್ಲರಲ್ಲಿ ವಾಸ ಮಾಡುತ್ತದೆ, ಚಿಂತಕ ಹಾಗೂ ಕವಿ ಇವರಲ್ಲಿರುವುದಕ್ಕಿಂತ ಯಾವುದೇ ರೀತಿಯಲ್ಲಿ ಕಡಿಮೆಯಲ್ಲದ ರೀತಿಯಲ್ಲಿ ಕೊಲೆಗಡುಕ ಮತ್ತು ವೇಶ್ಯೆ ಇವರಲ್ಲಿ ವಾಸ ಮಾಡುತ್ತದೆ. ಅವರು ತಮ್ಮ ಸಾರದಲ್ಲಿ, ಈ ಕಲ್ಲು ಬಂಡೆಯ ಮೇಲಿನ ಉಸುಕಿನ ಎರಡು ಕಣಗಳ ಹಾಗೆ ಒಂದೇ ರೀತಿಯವರಾಗಿರುತ್ತಾರೆ ಮತ್ತು ಶಾಶ್ವತವಾಗಿ ಯಾರನ್ನೂ ತಾವೋದಿಂದ ದೂರವಿರಿಸಲಿಕ್ಕಾಗುವುದಿಲ್ಲ, ಏಕೆಂದರೆ ಎಲ್ಲರೂ ತಮ್ಮಲ್ಲಿ ತಾವೋನನ್ನು ಹೊತ್ತುಕೊಂಡಿರುತ್ತಾರೆ.

ಅವರ ಪಾಪಗಳು ಭ್ರಮಾತ್ಮಕವಾದವುಗಳು, ಮಂಜಿನ ಹಾಗೆ ನೈಜತೆ ಇಲ್ಲದವುಗಳು. ಅವರು ಒಳ್ಳೆಯವರಾಗುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಕೆಟ್ಟವರಾಗಲಾರರು. ಪ್ರತಿರೋಧ ಇಲ್ಲದ ಹಾಗೆ ಅವರು ತಾವೋದತ್ತ ಎಳೆತಕ್ಕೊಳಗಾಗುವರು, ಅದು ನೀರಿನ ಹನಿ ವಿಶಾಲವಾದ ಸಮುದ್ರದ ಎಳೆತಕ್ಕೆ ಒಳಗಾದ ಹಾಗಿರುತ್ತದೆ. ಕೆಲವರಿಗೆ ಅದು ಇತರರಿಗೆ ಬೇಕಾಗುವುದಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಳ್ಳಬಹುದು, ಆದರೆ ಅದು ಅದಿಷ್ಟೇ. ತಾವೋ ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ, ತಾವೋ ನೈಜವಾದದ್ದಾಗಿದೆ.

ತಾವೋ ಮಾತ್ರ ಇದೆ, ಮತ್ತು ನೈಜವಾಗಿರದ ವಸ್ತು–ವಿಷಯಗಳ ಜೀವನವು ಮಿಥ್ಯಾರೂಪದ ವೈದೃಶ್ಯದರ್ಶನ(Contrasts)ಗಳ ಜೀವನ, ಸಂಬಂಧಗಳು ಮಿಥ್ಯಾರೂಪದವಾಗಿರುತ್ತವೆ, ಅವುಗಳಿಗೆ ಸ್ವತಂತ್ರ ಅಸ್ತಿತ್ವವಿರುವುದಿಲ್ಲ ಮತ್ತು ಅವು ಭವ್ಯ ದೋಷದತ್ತ ಕರೆದೊಯ್ಯುತ್ತವೆ. ಹಾಗಾಗಿ ಎಲ್ಲದಕ್ಕಿಂತಲೂ ಹೆಚ್ಚಾಗಿ ಒಳ್ಳೆಯವನಾಗಲು ಪ್ರಯತ್ನಪಡಬೇಡ ಮತ್ತು ನಿನ್ನನ್ನು ದುಷ್ಟನೆಂದು ಕರೆದುಕೊಳ್ಳಬೇಡ. ಪ್ರತಿರೋಧ ಇಲ್ಲದಿರುವಿಕೆ – ಪ್ರಯತ್ನ ಮಾಡುವುದರಿಂದ ವಿನಾಯಿತಿ ಪಡೆದು, ನಿನ್ನಲ್ಲಿರುವ ಅಂತರ್ನಿಹಿತ ದೈವೀ ಶಕ್ತಿಯಿಂದ ಕೊಂಡೊಯ್ಯಲಾಗಿರುವವನು ನೀನಾಗಬೇಕು. ಒಳ್ಳೆಯವನೂ ಅಲ್ಲ, ಕೆಟ್ಟವನೂ ಅಲ್ಲ, ಅಲ್ಪನಾದವನೂ ಅಲ್ಲ, ಭವ್ಯನಾದವನೂ ಅಲ್ಲ, ಕೀಳ್ಮಟ್ಟದವನೂ ಅಲ್ಲ, ಮೇಲ್ಮಟ್ಟದವನೂ ಅಲ್ಲ ಆದಾಗ ಮಾತ್ರ ನೀನು ನಿಜವಾಗಿ ಇರುವಿ, ಆದಾಗ್ಯೂ ಶಬ್ದದ ಸಾಮಾನ್ಯ ಅರ್ಥದಲ್ಲಿ ನೀನಿರುವುದು ನಿಂತು ಹೋಗಿರುತ್ತದೆ. ಎಲ್ಲ ತೋರಿಕೆಗಳಿಂದ, ಎಲ್ಲ ಕಾಮ ಪಿಪಾಸೆಗಳಿಂದ, ಎಲ್ಲ ಆಸೆಗಳಿಂದ ಮುಕ್ತಿಪಡೆದಾಗ ನಿನ್ನದೇ ಪ್ರಚೋದನೆಯಿಂದ, ನೀನು ಚಲಿಸುತ್ತಿರುವಿ ಎಂಬ ಅರಿವನ್ನೂ ಹುಟ್ಟಿಸದೆ,

ನಿನ್ನನ್ನು ಕೊಂಡೊಯ್ಯಲಾಗುತ್ತದೆ ಮತ್ತು ಇದು – ಏಕೈಕ ನಿಜವಾದ ಜೀವನದ ತತ್ವ; ಮುಕ್ತವಾಗಿ ಅಡೆತಡೆಗೊಳಗಾಗದೆ ತನ್ನಿಂದ ತಾನೇ ತಾವೋದತ್ತ ಚಲಿಸುವುದಾಗಿದೆ – ಎಷ್ಟೊಂದು ಸುಲಭ ಹಾಗೂ ಅಚೇತನದ್ದಾಗಿರುತ್ತದೆಂದರೆ ನಮ್ಮ ಮೇಲಿರುವ ಚಿಕ್ಕ ಮೋಡ ಕರಗಿಹೋದಂತಿರುತ್ತದೆ.

...

ವಿವೇಕಕ್ಕಾಗಿರುವ ಈ ಬಾಯಾರಿಕೆ ಕುರಿತು ಮಾತನಾಡಬೇಡ, ಬಹಳಷ್ಟನ್ನು ತಿಳಿದುಕೊಳ್ಳುವುದನ್ನು ಬಯಸಬೇಡ, ಏಕೆಂದರೆ ಆ ರೀತಿಯಿಂದ ಮಾತ್ರ ನೀನು ಸ್ವಲ್ಪ ಸ್ವಲ್ಪವಾಗಿ ಅಂತರ್ಬೋಧೆಯಿಂದ ತಿಳಿದುಕೊಳ್ಳುವ ಕ್ಷಮತೆಯುಳ್ಳವನಾಗುತ್ತೀ. ಸ್ವಾಭಾವಿಕವಲ್ಲದ ಪ್ರಯತ್ನದಿಂದ ದೊರಕಿಸಿದ ಜ್ಞಾನ ಕೇವಲ ನಿನ್ನನ್ನು ತಾವೋದಿಂದ ದೂರ ಕರೆದೊಯ್ಯುತ್ತದೆ. ... ವಿಶೇಷವಾಗಿ ಬಹಳ ಆತುರದಿಂದ ಸಂತೋಷವನ್ನು ಬಯಸಬೇಡ, ದುರ್ದೈವ ಕುರಿತಾದ ಭಯವನ್ನಿಟ್ಟುಕೊಳ್ಳುವುದು ಬೇಡ, ಏಕೆಂದರೆ ಅವುಗಳಲ್ಲಿ ಯಾವುದೂ ನಿಜವಾದದ್ದಲ್ಲ. ತಾವೋ ಸಂತೋಷಕರವಾದದ್ದು ಇಲ್ಲವೆ ವೇದನೆಯಿಂದ ಕೂಡಿದ್ದು ಎಂದಾಗಲಿ ಇಲ್ಲವೆ ಸುದೈವದ್ದು ಇಲ್ಲವೆ ದುರ್ದೈವದ್ದು ಎಂದಾಗಲಿ ಅದು ಪ್ರತಿನಿಧಿಸುವಂತೆ ಮಾಡಿದರೆ ಅದು ತಾವೋ ಆಗಿರುವುದಿಲ್ಲ. ತಾವೋ ಇಡಿಯಾದದ್ದು ಮತ್ತು ಅದರಲ್ಲಿ ವೈದೃಶ್ಯ ದರ್ಶನಗಳಿರುವುದು ಸಾಧ್ಯವಿಲ್ಲ.

ಮೊದಲನೆಯ ಸಲ ನೀವು ಪ್ರತಿರೋಧ ಇಲ್ಲದಿರುವಿಕೆ(Wu Wei)ಯ ಸ್ಥಿತಿಯನ್ನು ತಲುಪಿದಾಗ – ಆ ಶಬ್ದಕ್ಕೆ ಅಸಂಖ್ಯ ರೀತಿಯಲ್ಲಿ ಅಸ್ತಿತ್ವದಲ್ಲಿ ಇರದೆ ಇರುವುದು ಎಂಬ ಅರ್ಥ ಉಂಟಾದರೂ – ನಿನಗೆ ಎಲ್ಲವೂ ಒಳ್ಳೆಯದಾಗುವುದು ಮತ್ತು ನೀನು ಜೀವನವನ್ನು ನಮ್ಮೆದುರಿಗೆ ಇರುವ ವಿಶಾಲ ಸಮುದ್ರದ ಹಾಗೆ ಪ್ರಶಾಂತ ರೀತಿಯಲ್ಲಿರುವ, ಸ್ವಾಭಾವಿಕ ಚಲನೆಯೊಂದಿಗೆ ದಾಟಿಕೊಂಡು ಹೋಗುವಿ. ಯಾವುದೂ ನಿನ್ನ ಶಾಂತಿಯನ್ನು ಕದಡುವುದಿಲ್ಲ. ನಿನ್ನ ನಿದ್ರೆ ಸ್ವಪ್ನವಿಲ್ಲದ್ದಾಗಿರುತ್ತದೆ ಮತ್ತು ನಿನ್ನ ಎಚ್ಚರದಿಂದ ಇದ್ದ ಸ್ಥಿತಿಯು ಯಾವ ಚಿಂತೆಗಳನ್ನೂ ತರುವುದಿಲ್ಲ. ನೀನು ಎಲ್ಲ ವಸ್ತು–ವಿಷಯಗಳಲ್ಲಿ ತಾವೋನನ್ನು ನೋಡುವಿ, ಅಸ್ತಿತ್ವವಿದ್ದ ಎಲ್ಲದರೊಂದಿಗೆ ಏಕವಾಗುವಿ; ನಿನ್ನೊಂದಿಗೆ ನೀನು ಹತ್ತಿರವಾಗಿರುವ ರೀತಿಯಲ್ಲಿ ಎಲ್ಲ ಪ್ರಕೃತಿಯೊಂದಿಗೆ ಹತ್ತಿರವಾಗಿರುವ ಭಾವನೆ ತಂದುಕೊಳ್ಳುವಿ, ಹಗಲು ರಾತ್ರಿಗಳ, ಬೇಸಿಗೆ ಚಳಿಗಾಲಗಳ, ಜೀವನ ಮೃತ್ಯುಗಳ ಪರ್ಯಾಯ(alternation) ಸ್ಥಿತಿಗೆ ನಿನ್ನನ್ನು ಪ್ರಶಾಂತ ರೀತಿಯಲ್ಲಿ ಅಧೀನ ಪಡಿಸುತ್ತ ದಾಟಿಹೋಗಿ ಒಂದು ದಿನ ತಾವೋದಲ್ಲಿ ಪ್ರವೇಶಿಸುವಿ, ಅದರಲ್ಲಿ



ಪರ್ಯಾಯ ಸ್ಥಿತಿಗಳಿರುವುದಿಲ್ಲ. ನೀನು ಮರಳಿ ಅದರಲ್ಲಿ ಹೋಗುವ ಅತ್ಯಂತ ಪರಿಶುದ್ಧ ಸ್ಥಿತಿಯಲ್ಲಿಯೇ ಒಮ್ಮೆ ಅಲ್ಲಿಂದ ಹೊರಹೊಮ್ಮಿ ಬಂದಿದ್ದಿ.

## ಪ್ರೇಮ

ಪ್ರೇಮವೆಂದರೇನು, ಪ್ರೀತಿಸುವುದೆಂದರೇನು ನಿನಗೆ ತಿಳಿದಿಲ್ಲ. ನಾನದನ್ನು ನಿನಗೆ ಹೇಳುವೆ. ತಾವೋದ ದೈವೀ ಲಯಬದ್ಧತೆಯಲ್ಲದೆ ಪ್ರೇಮ ಬೇರೇನೋ ಅಲ್ಲ.

ನಾನದನ್ನು ನಿನಗೆ ಹೇಳಿದ್ದೇನೆ: ನೀನು ತಾವೋದಿಂದ ಬರುತ್ತೀ ಮತ್ತು ತಾವೋದೆಡೆಗೆ ಮರಳಿ ಹೋಗುತ್ತೀ. ... ಸ್ತ್ರೀ ನಿನ್ನ ಕಣ್ಣೆದುರು ತನ್ನನ್ನು ತೆರೆದು ತೋರಿಸುತ್ತಾಳೆ ಮತ್ತು ಆ ದೈವೀ ಲಯಬದ್ಧತೆ ನಿನ್ನನ್ನು ಕರೆದೊಯ್ಯುವ ಕೊನೆ ಅವಳೆಂದು ನೀನು ಯೋಚಿಸುತ್ತೀ. ಈ ಸ್ತ್ರೀ ನಿನ್ನವಳಾದರೂ, ನೀನು ಅವಳ ಸ್ಪರ್ಶದಿಂದ ಪುಳಕಿತನಾದರೂ ನಿನ್ನೊಳಗಿರುವ ದೈವೀ ಲಯಬದ್ಧತೆಯನ್ನು ತೃಪ್ತಿಪಡಿಸಲಾಗಿರುವುದಿಲ್ಲ, ಮತ್ತು ಅದನ್ನು ತೃಪ್ತಿಪಡಿಸಲು ಅದರಾಚೆಗೆ ಹೋಗಬೇಕಾಗುವುದು ಎಂಬುದನ್ನು ಕಲಿತುಕೊಳ್ಳುವಿ. ನಿನಗೆ ಇಷ್ಟವಾದರೆ ಅದನ್ನು ಪ್ರೇಮವೆಂದು ಕರೆ. ಹೆಸರಿನಲ್ಲೇನು ಮಹತ್ವವಿದೆ? ನಾನು ಅದನ್ನು ತಾವೋ(Tao) ಎಂದು ಕರೆಯುತ್ತೇನೆ.

ಸ್ತ್ರೀಯಳ ಸೌಂದರ್ಯ ಕೇವಲ ತಾವೋದ ರೂಪರಹಿತ ಸೌಂದರ್ಯದ ಅಸ್ಪಷ್ಟ ಪ್ರತಿಫಲನ. ಅವಳು ನಿನ್ನಲ್ಲಿ ಜಾಗ್ರತಗೊಳಿಸುವ ಭಾವನೆ, ಅವಳ ಸೌಂದರ್ಯದಲ್ಲಿ ನಿನ್ನನ್ನು ಕಲಂಕಕ್ಕೊಳಪಡಿಸುವ ಬಯಕೆ ... ಇದೆಲ್ಲ ತಾವೋದ ದೈವೀ ಲಯಬದ್ಧತೆಯಲ್ಲದೆ ಬೇರೇನಲ್ಲ, ಇದನ್ನು ನೀನು ನಂಬಬೇಕು, ಇದು ನಿನಗೆ ತಿಳಿದಿಲ್ಲ. ನಿನ್ನ ಸಂತೋಷವನ್ನು ಸ್ತ್ರೀಯಲ್ಲಿ ಅರಸಬೇಡ. ಅವಳು ತನ್ನನ್ನು ನಿನಗೆ ಅರ್ಪಿಸಿಕೊಳ್ಳುವ, ತಾವೋದಿಂದ ಕೊಡಲಾದ ಆಶ್ಚರ್ಯಕರ ಜೀವಿ, ಅವಳು ಪ್ರಕೃತಿಯಲ್ಲಿ ಅತ್ಯಂತ ಪರಿಶುದ್ಧ ರೂಪವುಳ್ಳವಳು, ಆ ರೂಪದ ಮೂಲಕ ತಾವೋ ಪ್ರಕಟವಾಗುತ್ತದೆ. ಅವಳು ನಿನ್ನಲ್ಲಿ ತಾವೋದ ಲಯಬದ್ಧತೆಯನ್ನು ಜಾಗ್ರತಗೊಳಿಸುವ ದೈವೀ ಶಕ್ತಿಯಾಗಿದ್ದಾಳೆ – ಆದರೆ ಅವಳೇ ಸ್ವತಃ ನಿನ್ನ ಹಾಗಿರುವ ಬಡ ಜೀವಿ. ನಿನಗೆ ಅವಳು ಆಶ್ಚರ್ಯಪಡಿಸುವ ಅದೇ ರೀತಿಯಲ್ಲಿ ನೀನು ಅವಳಿಗೆ ಆಶ್ಚರ್ಯವನ್ನುಂಟುಮಾಡುವಿ. ಅದು ತಾವೋದ ಅಭಿವ್ಯಕ್ತಿಯಾಗಿದ್ದು ಅದಕ್ಕೆ ಯಾವ ಮಿತಿಯೂ ಇಲ್ಲ, ಯಾವ ರೂಪವೂ ಇಲ್ಲ ಮತ್ತು ನಿನ್ನ ಆತ್ಮ ಅದರ ದರ್ಶನದಲ್ಲಿ ದಿವ್ಯಾನಂದವನ್ನು ಬಯಸುವಂತೆ ಮಾಡುವ

ಈ ವಿಚಿತ್ರ ಹಾಗೂ ವರ್ಣನಾತೀತ ಅತಿ ಭಾವುಕತೆ ಆ ಸೌಂದರ್ಯ ಹಾಗೂ ಅದರ ಮೂಲದೊಂದಿಗೆ ಆಗುವ ಏಕತೆಯಿಂದಲ್ಲದೆ ಬೇರಾವುದರಿಂದಲೂ ಅಲ್ಲ, – ಆ ಸೌಂದರ್ಯ ಹಾಗೂ ಅದರ ಮೂಲ ತಾವೋ.

ನಿನ್ನ ಆತ್ಮ ತನಗೆ ಪ್ರೀತ್ಯಾಸ್ಪದವಾದದ್ದನ್ನು ಎಂದರೆ ತಾವೋವನ್ನು ಕಳೆದುಕೊಂಡಿದೆ, ಮೊದಲು ಅದರೊಂದಿಗೆ ಏಕತೆಯಲ್ಲಿತ್ತು ಮತ್ತು ಆ ಪ್ರೀತ್ಯಾಸ್ಪದವಾದದ್ದರೊಂದಿಗೆ ಮತ್ತೆ ಏಕತೆ ಪಡೆಯಲು ಬಯಸುತ್ತದೆ. ತಾವೋದೊಡನೆ ಪರಿಪೂರ್ಣವಾದ ಏಕತೆ – ಅದು ಮಿತಿರಹಿತ ದೈವೀ ಪ್ರೇಮವಲ್ಲವೆ! ಪ್ರೀತ್ಯಾಸ್ಪದವಾದುದರೊಂದಿಗೆ ಎಷ್ಟೊಂದು ಏಕತೆ ಪಡೆಯುವುದೆಂದರೆ ನೀನು ಪೂರ್ತಿಯಾಗಿ ಅದರದಾಗಿಬಿಡುವಿ ಮತ್ತು ಅದು ನಿನ್ನದಾಗುತ್ತದೆ – ಆ ಏಕತೆ ಎಷ್ಟೊಂದು ಸಂಪೂರ್ಣವಾಗಿರುತ್ತದೆಂದರೆ, ಎಷ್ಟೊಂದು ಸನಾತನವಾಗಿರುತ್ತದೆಂದರೆ ಜೀವನಕ್ಕಾಗಲಿ, ಮೃತ್ಯುವಿಗಾಗಲಿ ಅದನ್ನು ಎಂದೆಂದಿಗೂ ಪ್ರತ್ಯೇಕಗೊಳಿಸಲು ಸಾಧ್ಯವಾಗುವುದಿಲ್ಲ, ಎಷ್ಟೊಂದು ಶಾಂತಿಪೂರ್ಣ ಹಾಗೂ ಪರಿಶುದ್ಧವಾಗಿರುತ್ತದೆಂದರೆ ಆಸೆ ನಿನ್ನಲ್ಲಿ ಇನ್ನು ಮುಂದೆ ಎಂದಿಗೂ ಜಾಗ್ರತಗೊಳ್ಳುವುದಿಲ್ಲ, ಏಕೆಂದರೆ ಪರಮೋಚ್ಚ ಸಂತೋಷವನ್ನು ಸಿದ್ಧಿಸಿಕೊಳ್ಳಲಾಗಿರುತ್ತದೆ ಮತ್ತು ಅಲ್ಲಿ ಕೇವಲ ಶಾಂತಿ, ಪರಿಶುದ್ಧವಾದ ಶಾಂತಿ, ಸ್ಥಿರ ಹಾಗೂ ಪ್ರಕಾಶಮಾನವಾದ ಶಾಂತಿ ಇರುತ್ತದೆ. ಏಕೆಂದರೆ ತಾವೋ ದೈವೀ ಅನಂತವಾದದ್ದು, ಏಕವಾದದ್ದು, ಸನಾತನವಾದದ್ದು ಹಾಗೂ ಎಲ್ಲ ರೀತಿಯಲ್ಲಿ ಪರಿಶುದ್ಧವಾದದ್ದು.

*

## ತಾವೋ ಮತ ಸಿದ್ಧಾಂತ ಕುರಿತು ಶ್ರೀಮಾತೆಯವರ ಎರಡು ಉಪನ್ಯಾಸಗಳು

ಆಶ್ರಮದ ನಿವಾಸಿಗಳ ಸಮ್ಮುಖದಲ್ಲಿ ಶ್ರೀಮಾತೆಯವರು ಮಾಡಿದ್ದ ಎರಡು ಉಪನ್ಯಾಸಗಳಿಂದ ಆಯ್ದ ಭಾಗಗಳನ್ನು ಇಲ್ಲಿ ಪ್ರಕಟಿಸಲಾಗಿದೆ, ಅವುಗಳಲ್ಲಿ ಅವರು ವು ವಿ (Wu Wei) ಹೆಸರಿನ ಚಿಕ್ಕ ಪುಸ್ತಕದಲ್ಲಿರುವ ವಿಷಯಗಳನ್ನು ಕುರಿತು ಹೇಳಿದ್ದಾರೆ (ವು ವಿ ಲಾವೋತ್ಸೆಯ ತಾವೋ ತತ್ವಜ್ಞಾನ ಕುರಿತಾಗಿರುವ ಚಿಕ್ಕ ಕಾದಂಬರಿ).

### ಅಗಸ್ಟ 15, 1956

ವಿಶ್ವದ ಅಸ್ತಿತ್ವವನ್ನು ಕುರಿತು ಇರುವ ಸಮಸ್ಯೆಗೆ ಮನುಷ್ಯ



ಪರಿಹಾರವೊಂದನ್ನು ಕಂಡುಕೊಳ್ಳಲು ಬಯಸಿದಾಗ, ಯಾವಾಗಲೂ, ಅವನು ಸಾಧ್ಯವಾಗಬಹುದಾದ ಎರಡು ಮನೋಭಾವಗಳನ್ನು ಎದುರಿಸುತ್ತ ಬಂದಿದ್ದಾನೆ. ವ್ಯಾವಹಾರಿಕ ದೃಷ್ಟಿಯಿಂದ ಹೇಳುವುದಾದರೆ ವಿಶ್ವ ಅಸ್ತಿತ್ವದಲ್ಲಿರುವುದರಿಂದ ಮತ್ತು ಅದಿರುವ ಹಾಗೆ ಇರುವುದರಿಂದ, ಅತ್ಯಂತ ಜಾಣತನದ ವಿಷಯವೆಂದರೆ, ಅದನ್ನು ಅದಿರುವ ಹಾಗೆ ತೆಗೆದುಕೊಳ್ಳಬೇಕು, ಮತ್ತು ಮನುಷ್ಯ ಅದರಲ್ಲಿ ತೃಪ್ತಿ ಕಾಣದಿದ್ದರೆ, ಸರಿ ಅದನ್ನು ಹೆಚ್ಚು ಒಳ್ಳೆಯದನ್ನಾಗಿ ಮಾಡಲು ಪ್ರಯತ್ನಿಸಬೇಕು. ಮನುಷ್ಯ ಈ ಮನೋಭಾವವನ್ನು ಹೊಂದಿದ್ದಾಗಲೂ ಕೂಡ "ಅದನ್ನು ಉತ್ತಮ–ಗೊಳಿಸುವುದು ಹೇಗೆ?" ಎಂಬ ಸಮಸ್ಯೆ ಉಳಿದುಕೊಳ್ಳುತ್ತದೆ. ಅದನ್ನು ಪರಿಹರಿಸುವುದು ಅಸಾಧ್ಯ ಎಂದು ತೋರಿಬರುವ ಅದೇ ವಾಸ್ತವತೆಯನ್ನು ಅವನು ಎದುರಿಸಬೇಕಾಗುತ್ತದೆ. ಇಲ್ಲಿ ನೀವಿರುವಿರಿ, ಆಗ:

ದೈವೀ ಸಂಕಲ್ಪ – ಆ ಸಂಕಲ್ಪವನ್ನು ಪ್ರಕಟಿಸುವ ದೈವೀ ಕೃಪೆ – ಸರ್ವಸಮರ್ಥವಾಗಿದೆ ಮತ್ತು ಈ ದೈವೀ ಸಂಕಲ್ಪ ಹಾಗೂ ದೈವೀ ಕೃಪೆ ಇವು ಪ್ರಕಟಿಸುವುದರ ಅಭಿವ್ಯಕ್ತಿಯಾಗಿರದೆ ಇರುವ ಯಾವುದೂ ಅಸ್ತಿತ್ವದಲ್ಲಿ ಇರುವುದು ಸಾಧ್ಯವಿಲ್ಲ. ತರ್ಕಬದ್ಧವಾದ ಮನೋಭಾವ – ಕಳೆದ ಶುಕ್ರವಾರದಂದು ನಾನು ನಿಮಗೆ ಓದಿ ಹೇಳಿದ ವು ವಿ (Wu Wei) ಪುಸ್ತಕದಲ್ಲಿ ವರ್ಣಿಸಿರುವ ವಿಷಯ, ನಿಖರವಾಗಿ, ಅದೇ ಆಗಿದೆ: ಪರಿಪೂರ್ಣ ಶಾಂತಿಯಿಂದಿರುವುದು, ಪರಿಪೂರ್ಣವಾಗಿ ಶರಣಾಗತವಾಗಿರುವುದು, ಪ್ರಯತ್ನವೆಲ್ಲವನ್ನು, ವೈಯಕ್ತಿಕ ಪ್ರಯತ್ನವೆಲ್ಲವನ್ನು ಬದಿಗೆ ಸರಿಸಿಡುವುದು, ತನ್ನನ್ನೇ ಸ್ವತಃ ದೈವೀ ಸಂಕಲ್ಪಕ್ಕೆ ಕೊಟ್ಟುಬಿಡುವುದು ಮತ್ತು ತನ್ನ ಮೂಲಕ ಅದು ಕಾರ್ಯಮಾಡಲು ಅನುವು ಮಾಡಿಕೊಡುವುದು ಇದೆಲ್ಲವನ್ನು ಅಲ್ಲಿ ಹೇಳಲಾಗಿದೆ.

ನೀವು ಲಕ್ಷ್ಯಗೊಟ್ಟು ಗಮನಿಸಬೇಕಾದುದೆಂದರೆ ಇದು ತೋರಿಬರುವ ಹಾಗೆ ಎಳ್ಳಷ್ಟೂ ಸುಲಭವಾದದ್ದಲ್ಲ, ಆದಾಗ್ಯೂ ಮನುಷ್ಯ ಈ ಮನೋಭಾವವನ್ನು ನಿಷ್ಕಾಪಟ್ಯದಿಂದ ಕೈಗೆತ್ತಿಕೊಂಡರೆ, ಕೂಡಲೆ ಅಲ್ಲಿ ಪರಿಪೂರ್ಣವಾದ ಆಂತರಿಕ ಶಾಂತಿ, ಮಿಶ್ರಣಕ್ಕೊಳಗಾಗದ ದಿವ್ಯಾನಂದ ಬರುವುದು ನಿಶ್ಚಿತ, ಮತ್ತು ನಿಮ್ಮ ಜೀವನದಲ್ಲಿಯ ಘಟನೆಗಳು ಏನೇ ಆಗಿರಲಿ, ಅವು ನಿಮ್ಮನ್ನು ಸಂಪೂರ್ಣವಾಗಿ ಉದಾಸೀನವಾಗಿರಲು ಬಿಟ್ಟುಕೊಡುತ್ತವೆ. ಇದನ್ನು ವೈಯಕ್ತಿಕ ಮುಕ್ತಿಗಾಗಿ ಅನುಸರಿಸಬೇಕೆಂದು ಯಾವಾಗಲೂ ಸಲಹೆ ನೀಡಲಾಗಿದೆ. ಮತ್ತು ನಾನು ಪ್ರಾಸಂಗಿಕವಾಗಿ ಹೇಳಬಯಸುವುದೇನೆಂದರೆ, ಸುಂದರವಾದ, ಒಳ್ಳೆಯ ರೀತಿಯಲ್ಲಿ ಬರೆಯಲಾದ ಈ ಪುಸ್ತಕದಲ್ಲಿ ಋಷಿ ಶರಣಾಗತಿಯ ಸ್ಥಿತಿಯನ್ನು

ಒಂದು ಸಮುದ್ರಕ್ಕೆ ಹೋಲಿಸಿದ್ದಾನೆ, ಆ ಸಮುದ್ರ ಪ್ರಶಾಂತವಾದದ್ದು, ನೀಲವರ್ಣದ್ದು, ಶಾಂತಿಪೂರ್ಣವಾದದ್ದು, ಆಳವಾದ ಶಕ್ತಿಯಿಂದ ಚಲನೆಗೊಳಗಾದದ್ದು, ಸರಿಯಾದ ಕ್ಷಣದಲ್ಲಿ ಉಬ್ಬರಿಸಿಕೊಂಡು ಮೇಲೆ ಬರುವಂತಹದು, ಸರಿಯಾದ ಕ್ಷಣದಲ್ಲಿ ಕೆಳಗೆ ಇಳಿದು ಹೋಗುವಂತಹದು – ನಿಜವಾಗಿ ಅದು ಆದರ್ಶವಾಗಿರುವ ವರ್ಣನೆ. ಆದರೆ ವ್ಯಾವಹಾರಿಕ ಮತ್ತು ಸ್ವಲ್ಪ ಮಟ್ಟಿಗಿನ ವಸ್ತುನಿಷ್ಠ ಮನಸ್ಸು ನಿಮಗೆ ಕೂಡಲೆ ಹೇಳುತ್ತದೆ: "ಸರಿ, ಹೌದು, ಆದರೆ ಸಮುದ್ರದಲ್ಲಿ ಪ್ರಚಂಡ ಕ್ಷೋಭೆಗಳಿರುತ್ತವೆ, ಭಯಾನಕ ಚಂಡ ಮಾರುತಗಳಿರುತ್ತವೆ, ಭೂಕಂಪ ಇಲ್ಲವೆ ಜ್ವಾಲಾಮುಖಿಯ ಸ್ಫೋಟದಿಂದ ಉಂಟಾದ ಬಹಳ ಭಾರಿ ಅಲೆಗಳು (tidal waves) ಇರುತ್ತವೆ, ಮುಳುಗಿ ಹೋದ ದ್ವೀಪಗಳಿರುತ್ತವೆ. ಹಾಗಾಗಿ ಬಹುಶಃ ಅದು ಭಗವಂತನ ಇನ್ನೊಂದು ಮುಖವಾಗಿರಬಹುದು, ಆದರೆ ಅದು ಶಾಂತಿಯನ್ನು ತರುವುದಿಲ್ಲ, ಕನಿಷ್ಠಪಕ್ಷ ಆ ಋಷಿ ವರ್ಣಿಸಿದ ರೀತಿಯ ಶಾಂತಿ ಅಲ್ಲಿರುವುದಿಲ್ಲ. ಅಂತಹ ಪರಿಸ್ಥಿತಿಗಳಲ್ಲಿ ಮನುಷ್ಯನಿಗೆ ಶಾಂತಿ ಬೇಕಾದರೆ ಅವನು ಪರಿಸ್ಥಿತಿಗಳ ಬೇರೊಂದು ಸ್ಥಿತಿಯಲ್ಲಿರಬೇಕು ತನ್ನನ್ನು ಸಮುದ್ರದೊಂದಿಗೆ ಹೋಲಿಸಿ ನೋಡಬಾರದು!" ಹಾಗಾಗಿ ಸಮಸ್ಯೆ ಮತ್ತೆ ತನ್ನನ್ನು ಮುಂದಿರಿಸುತ್ತದೆ.

ಇದೆಲ್ಲವನ್ನು ಕುರಿತು ಶ್ರೀ ಅರವಿಂದರು ದೈವೀ ಜೀವನ (Life Divine) ಗ್ರಂಥದಲ್ಲಿ ವಿಶೇಷ ಅಭ್ಯಾಸ ಕೈಕೊಂಡಿದ್ದಾರೆ. ಮತ್ತು ಅಲ್ಲಿ ಪ್ರಗತಿಪರ ಉತ್ಕ್ರಾಂತಿ ಕುರಿತು ನಿಶ್ಚಿತವಾದ ಕುರುಹುಗಳಿವೆ ಎಂದು ಹೇಳುತ್ತಾರೆ. ಉತ್ಕ್ರಾಂತಿ, ಸ್ವಾಭಾವಿಕವಾಗಿ, ಗುರಿಯೊಂದರತ್ತ ಸಾಗುತ್ತದೆ, ಅದು ಪ್ರಗತಿಪರ ಉತ್ಕ್ರಾಂತಿ–ಯಾಗಿದ್ದರೆ, ಅದೆಲ್ಲವೂ ದೈವೀ ಸಂಕಲ್ಪದ ಹಾಗೂ ದೈವೀ ಕೃಪೆಯ ಅಭಿವ್ಯಕ್ತಿ ಎಂದು ಯೋಚಿಸುವುದನ್ನು ಮನುಷ್ಯ ಮುಂದುವರಿಸಿಕೊಂಡು ಹೋಗಬಹುದು. ಆದರೆ ಅದೇ ಕಾಲಕ್ಕೆ ಎಲ್ಲವೂ ಅದಿರಬೇಕಾದ ರೀತಿಯಲ್ಲಿರುವುದಿಲ್ಲ. ಪ್ರತಿಯೊಂದೂ ದೈವೀ ಸಂಕಲ್ಪಕ್ಕೆ ಅನುಗುಣವಾಗಿ ಇರುತ್ತದೆ, ಆದರೆ ಪ್ರತಿಯೊಂದೂ ಅದಿರಬೇಕಾದ ರೀತಿಯಲ್ಲಿರುವುದಿಲ್ಲ, ಹಾಗಿಲ್ಲದಿದ್ದರೆ ವಿಷಯಗಳು ಚಲಿಸಲಾರವು.

## ಅಗಸ್ಟ 29, 1956

ಶುಕ್ರವಾರದಂದು ಓದಲಾಗುವ ವು ವಿ (Wu Wei) ಗ್ರಂಥದಲ್ಲಿಯ ವಿಷಯ ಕುರಿತು ಓದುವುದನ್ನು ಕೇಳಲು ನಿಮ್ಮಲ್ಲಿ ಬಹಳಷ್ಟು ಜನರು ಬರುತ್ತಿದ್ದೀರಿ ಎಂದು ಭಾವಿಸಿದ್ದೇನೆ. ನೀವು ಅದನ್ನು ಕೇಳಿದ್ದಿರಾದರೆ, ಅಲ್ಲಿ "ಸ್ವಯಂಪ್ರೇರಣೆ" ಕುರಿತು



ಒಂದಿಷ್ಟನ್ನು ಹೇಳಲಾಗಿದೆ ಎಂಬುದು ನಿಮ್ಮ ನೆನಪಿಗೆ ಬರುತ್ತದೆ, ಮತ್ತು ನಿಜವಾದ ಜೀವನವನ್ನು ನಿಜವಾಗಿ ಜೀವಿಸುವುದು ಎಂದರೆ ಸ್ವಯಂಪ್ರೇರಿತವಾಗಿ ಜೀವಿಸುವುದಾಗಿದೆ.

ಲಾವೋತ್ಸೆ ಸ್ವಯಂಪ್ರೇರಿತ ಎಂದು ಕರೆಯುವುದು ಹೀಗಿದೆ: ವೈಯಕ್ತಿಕ ಸಂಕಲ್ಪದಿಂದ – ಎಂದರೆ ಮಾನಸಿಕ, ಪ್ರಾಣಿಕ ಇಲ್ಲವೆ ಭೌತಿಕ ಸಂಕಲ್ಪದಿಂದ – ಚಾಲನೆಗೊಳಗಾಗುವುದರ ಬದಲಾಗಿ ಮನುಷ್ಯ ಎಲ್ಲ ಬಾಹ್ಯ ಪ್ರಯತ್ನವನ್ನು ನಿಲ್ಲಿಸಬೇಕು ಮತ್ತು ಚೀನಾ ದೇಶದ ಜನರು ತಾವೋ ಎಂದು ಕರೆಯುವುದರ ಮಾರ್ಗದರ್ಶನ ಪಡೆದು ಚಾಲನೆಗೊಳಗಾಗಬೇಕು, ಆ ಜನರು ತಾವೋವನ್ನು ದೇವ ಪ್ರಮುಖ ಎಂದು ಗುರುತಿಸುತ್ತಾರೆ. ಆ ದೇವ ಪ್ರಮುಖ, ದೇವ ಇಲ್ಲವೆ ಪರಮೋಚ್ಚ ತತ್ವ ಇಲ್ಲವೆ ಎಲ್ಲ ವಿಷಯಗಳ ದೈವೀ ಮೂಲ ಇಲ್ಲವೆ ಸೃಷ್ಟ್ಯಾತ್ಮಕ ಸತ್ಯ; ನಿಜವಾಗಿ, ದೇವನನ್ನು ಕುರಿತು ಎಲ್ಲ ಮಾನವ ಯೋಚನೆಗಳು ಮತ್ತು ಸಿದ್ಧಿಸಿಕೊಳ್ಳಬೇಕಾದ ಗುರಿ ಆ ದೇವನೊಂದಿಗಿರುತ್ತವೆ.

ಸ್ವಯಂಪ್ರೇರಿತರಾಗುವುದರ ಅರ್ಥ ಯೋಚನೆಯನ್ನು ಹೊರ–ಹೊಮ್ಮಿಸುವುದು, ಸಂಘಟಿಸುವುದು, ನಿರ್ಧಾರ ಕೈಕೊಳ್ಳುವುದು, ವೈಯಕ್ತಿಕ ಸಂಕಲ್ಪವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಪ್ರಯತ್ನ ಮಾಡುವುದು ಇವೆಲ್ಲವನ್ನೂ ಬಿಟ್ಟುಕೊಡುವುದಾಗಿದೆ.

ನಿಜವಾಗಿ ಸ್ವಯಂಪ್ರೇರಿತರಾಗುವುದನ್ನು ನೀವು ತಿಳಿದುಕೊಳ್ಳಲೆಂದು ನಾನು ಎರಡು ಉದಾಹರಣೆಗಳನ್ನು ಕೊಡುತ್ತೇನೆ. ಒಂದು – ಅದು ನೀವೆಲ್ಲ ನಿಸ್ಸಂಶಯವಾಗಿ ತಿಳಿದುಕೊಂಡ ಸಂಗತಿ – ಶ್ರೀ ಅರವಿಂದರು ಆರ್ಯ ಸಂಚಿಕೆಗಾಗಿ 1914 ರಲ್ಲಿ ಬರೆಯಲು ಪ್ರಾರಂಭಿಸಿದ ಕಾಲಕ್ಕೆ ಸಂಬಂಧಿಸಿದ್ದು. ಅದು ಮಾನಸಿಕ ಜ್ಞಾನವೂ ಅಲ್ಲ, ಇಲ್ಲವೆ ಅವರು ಭಾಷಾರೂಪದಲ್ಲಿ ಬರೆದು ತೆಗೆದ ಮಾನಸಿಕ ಸೃಷ್ಟಿಯೂ ಅಲ್ಲ; ಅವರು ತಮ್ಮ ಮನಸ್ಸನ್ನು ನಿಶ್ಚಲ ನೀರವತೆ–ಯಲ್ಲಿರಿಸಿದರು ಮತ್ತು ಬೆರಳಚ್ಚು ಯಂತ್ರ(typewriter)ದ ಮುಂದೆ ಕುಳಿತುಕೊಂಡರು. ಬರೆಯಬೇಕಾದುದೆಲ್ಲ ಮೇಲ್ಗಡೆಯಿಂದ, ಉಚ್ಚತರ ಸ್ತರಗಳಿಂದ ತಯಾರಾಗಿ ಕೆಳಗಿಳಿದು ಬಂದಿತು, ಅವರು ಕೇವಲ ತಮ್ಮ ಬೆರಳುಗಳನ್ನು ಆ ಯಂತ್ರದ ಮೇಲೆ ಚಲಿಸುವಂತೆ ಮಾಡಬೇಕಾಗಿತ್ತು ಮತ್ತು ಅದು ಬರಹ ರೂಪದಲ್ಲಿ ತಯಾರಾಯಿತು. ಮೇಲ್ಗಡೆಯಿಂದ ಜ್ಞಾನ – ಅಭಿವ್ಯಕ್ತಿ ಕೂಡ – ಆದ್ಯಂತವಾಗಿ ಇಳಿದು ಬರುವಂತೆ ಮಾಡಲು ಮನಸ್ಸಿನ ನಿಶ್ಚಲ ನೀರವತೆಯ ಈ ಸ್ಥಿತಿಯಲ್ಲಿ ಅವರು 'ಆರ್ಯ' ಪತ್ರಿಕೆಗಾಗಿ ಎಲ್ಲ ವಿಷಯಗಳ ಬಗ್ಗೆ ಬರೆದರು, ಪ್ರತಿ

ತಿಂಗಳು ಆ ರೀತಿಯಲ್ಲಿ 64 ಪುಟಗಳನ್ನು ತುಂಬುವಷ್ಟು ಅವರು ಬರೆಯಬೇಕಾಗಿತ್ತು. ಅಲ್ಲದೆ ಈ ಕಾರಣದಿಂದಾಗಿ ಅವರಿಗೆ ಅದನ್ನು ಕೈಕೊಳ್ಳಲು ಸಾಧ್ಯವಾಯಿತು, ಅದು ರಚನೆ ಮಾಡುವ ಮಾನಸಿಕ ಕ್ರಿಯೆಯಾಗಿದ್ದರೆ ಅದು ಪೂರ್ತಿ ಅಸಾಧ್ಯವಾಗಿಬಿಡುತ್ತಿತ್ತು.

ಸ್ವಾಭಾವಿಕವಾಗಿ, ಇದು ಬಹಳ ಸುಲಭವಾದದ್ದಲ್ಲ, ತಯಾರಿ ಮಾಡಿಕೊಳ್ಳುವುದನ್ನು ಅದು ಬೇಡುತ್ತದೆ.

ಮತ್ತು ಮನುಷ್ಯ ಕಾರ್ಯ ಕೈಕೊಳ್ಳಬೇಕಾದ ಕ್ಷೇತ್ರಕ್ಕೆ ಇಳಿದು ಬಂದರೆ, ಅದು ಇನ್ನೂ ಕಠಿಣವಾಗುತ್ತದೆ, ಏಕೆಂದರೆ, ಸಾಮಾನ್ಯವಾಗಿ, ಅವನು ಯಾವುದೇ ಒಂದು ಬಗೆಯ ತರ್ಕದಿಂದ ಕಾರ್ಯ ಕೈಕೊಳ್ಳಲು ಬಯಸಿದರೆ, ಅದನ್ನು ಕುರಿತು ಮೊದಲು ಯೋಚನೆ ಮಾಡಬೇಕಾಗುತ್ತದೆ, ತಾನು ಕೈಕೊಳ್ಳಬೇಕಾದುದರ ಯೋಜನೆ ತಯಾರು ಮಾಡಬೇಕಾಗುತ್ತದೆ, ಹಾಗಿಲ್ಲದೆ ಹೋದರೆ ಎಲ್ಲ ಬಗೆಯ ಆಸೆಗಳು ಹಾಗೂ ಪ್ರಚೋದನೆಗಳ ಎಸೆದಾಟಕ್ಕೆ ಒಳಗಾಗಬೇಕಾಗುತ್ತದೆ, ಅವು ವು ವಿ(Wu Wei)ಯಲ್ಲಿ ಹೇಳಲಾದ ಸ್ಫೂರ್ತಿಯಿಂದ ಬಹಳ ದೂರದಲ್ಲಿರುತ್ತವೆ, ನಿಮ್ಮನ್ನು ಕಾರ್ಯ ಕೈಕೊಳ್ಳುವಂತೆ ಮುಂದೆ ದೂಡುವ ಚಲನೆಗಳು ನಿಮ್ಮ ಸ್ವಭಾವದಿಂದ ಬಂದಿರುತ್ತವೆ. ಆದ್ದರಿಂದ ಚೀನಾ ದೇಶದ ಋಷಿ ತನ್ನ ಕತೆಯಲ್ಲಿ ಹೇಳಿದ ವಿವೇಕ ಮತ್ತು ಅನಾಸಕ್ತಿ ಇವುಗಳಿರುವ ಸ್ಥಿತಿಯನ್ನು ತಲುಪದೆ ಇದ್ದಾಗ, ದೈನಂದಿನ ಕಾರ್ಯಗಳಲ್ಲಿ ಸ್ವಯಂಪ್ರೇರಿತರಾಗದೆ ಇರುವುದು ಹೆಚ್ಚು ಒಳ್ಳೆಯದು, ಏಕೆಂದರೆ ಅತ್ಯಂತ ಅವ್ಯವಸ್ಥಿತ ಪ್ರಚೋದನೆಗಳು ಹಾಗೂ ಪ್ರಭಾವಗಳ ಆಟಿಗೆ ವಸ್ತುವಾಗುವ ಅಪಾಯವನ್ನು ಮನುಷ್ಯ ಎದುರಿಸಬೇಕಾಗುತ್ತದೆ.

ಮತ್ತು ನಿಶ್ಚಿತವಾಗಿ ವು ವಿ ಯಲ್ಲಿ ಹೇಳಲಾದ ಸಾಮರಸ್ಯದಲ್ಲಿ ಉಳಿದು–ಕೊಳ್ಳಬೇಕಾದರೆ, ಯಾವುದು ಅವಶ್ಯವಿದೆ ಮತ್ತು ಕೈಕೊಳ್ಳಬೇಕಾದುದು ಏನು ಎಂಬುದನ್ನು ಸ್ಪಷ್ಟವಾಗಿ ನೋಡಿ ನೀಡುತ್ತಿರುವ ಸಲಹೆಯೆಂದರೆ ಈ ಕಾರ್ಯಕ್ರಮವನ್ನು ಸಿದ್ಧಿಸಿಕೊಳ್ಳುವುದರಲ್ಲಿ ಬಹಳಷ್ಟು ಹಿಂಸೆಯನ್ನು ಉಪಯೋಗಿಸಬಾರದು ಮತ್ತು ಅತ್ಯುತ್ಸಾಹವನ್ನು ಇರಿಸಬಾರದು, ಏಕೆಂದರೆ ದೈವೀ ಪ್ರಜ್ಞೆ ತನ್ನನ್ನು ವ್ಯಕ್ತಿಯ ಮೂಲಕ ಅಭಿವ್ಯಕ್ತಗೊಳಿಸುವುದಕ್ಕೆ ಅವಶ್ಯವಾದ ಶಾಂತಿ, ಪ್ರಶಾಂತತೆ ಮತ್ತು ಸ್ಥಿರತೆ ಇವುಗಳಿಗೆ ಅತ್ಯುತ್ಸಾಹ ಹಾನಿಕರವಾಗುತ್ತದೆ. ಮತ್ತು ಕೊನೆಯಲ್ಲಿ ಕಂಡುಕೊಳ್ಳಬೇಕಾದುದು ಇದು:

ಸಮತೋಲನ ಅತ್ಯಗತ್ಯವಾದದ್ದು, ವಿರುದ್ಧ ದಿಸೆಗಳಲ್ಲಿರುವ ಅತಿರೇಕಗಳನ್ನು ಕಾಳಜಿಪೂರ್ವಕ ತಪ್ಪಿಸಿಕೊಳ್ಳುವ ಮಾರ್ಗ ಅತ್ಯಗತ್ಯವಾದದ್ದು, ಅತಿಯಾದ



ಅವಸರ ಅಪಾಯಕಾರಕವಾದದ್ದು, ಅಸಹನೆ ನೀವು ಮುನ್ನಡೆದು ಹೋಗುವುದಕ್ಕೆ ತಡೆಯನ್ನುಂಟು ಮಾಡುತ್ತದೆ ಮತ್ತು ಅದೇ ಕಾಲಕ್ಕೆ ಜಡತ್ವ ನಿಮ್ಮ ಕಾಲುಗಳ ಚಲನೆಗೆ ಅಡಚಣೆಯನ್ನುಂಟು ಮಾಡುತ್ತದೆ.

**(CWSA, 8/265–66, 281–85)** – **ಶ್ರೀಮಾತೆ**

*

## 'ಶ್ರೀ ಅರೋಬಿಂದೋ' ಹೆಸರನ್ನು ಕುರಿತು ಒಂದು ಟಿಪ್ಪಣಿ

'ಆರ್ಯ' ಪತ್ರಿಕೆಯ ಪ್ರಕಟಣೆಯ ಸಂದರ್ಭದಲ್ಲಿ ಮೊದಲ ಸಲ ಕಾಣಿಸಿಕೊಂಡ ಶ್ರೀ ಅರೋಬಿಂದೋ (ಶ್ರೀ ಅರವಿಂದರು) ಹೆಸರಿನಲ್ಲಿರುವ 'ಶ್ರೀ' ಶಬ್ದದ ಪ್ರಾಮುಖ್ಯತೆ ಕುರಿತು ನಲಿನಿಕಾಂತ ಗುಪ್ತ ನವ್ಹಂಬರ 30, 1961 ರಂದು ಬರೆದದ್ದು ಹೀಗಿದೆ:

ನಿನ್ನನ್ನು ಕಾಡುತ್ತಿರುವ 'ಶ್ರೀ' ಶಬ್ದದ ಸಮಸ್ಯೆಯನ್ನು ಕುರಿತು ನೀನು ಬರೆದ ಪತ್ರವನ್ನು ಶ್ರೀಮಾತೆಯವರು ನನಗೆ ತೋರಿಸಿದರು. ಈ ವಿಷಯ ಕುರಿತು ನನ್ನ ಅಭಿಪ್ರಾಯ ತಿಳಿಸೆಂದು ಅವರು ನನಗೆ ಹೇಳಿದ್ದಾರೆ. ಸರಿ, ಅದನ್ನು ಕುರಿತು ನನ್ನ ಅಭಿಪ್ರಾಯ ನೇರವಾದದ್ದು ಹಾಗೂ ಮುಚ್ಚುಮರೆಯಿಲ್ಲದ್ದು. ಅವರ ನಿಜವಾದ ಹೆಸರಾಗಿರುವ ಅರೋಬಿಂದೋ ಶಬ್ದಕ್ಕೆ 'ಶ್ರೀ' ಕೇವಲ ಗೌರವ ಸೂಚಕ ಪೂರ್ವಪ್ರತ್ಯಯ(prefix)ವೆಂದು ಯೋಚಿಸುವುದು ತಪ್ಪಾದದ್ದು. ಅದು ಹಾಗಿಲ್ಲವೇ ಇಲ್ಲ. 'ಶ್ರೀ'ದ ಅರ್ಥ ಮಿಸ್ಟರ್, ಮೊನಶ್ಯಿಯರ್, ಸರ್ ಇತ್ಯಾದಿ ರೂಪದ್ದಲ್ಲ. ಅದು ಹೆಸರಿನ ಒಂದು ಭಾಗ, ಶ್ರೀ ಅರೋಬಿಂದೋ ಅವಿಭಾಜ್ಯ ಶಬ್ದವಾಗಿ ರೂಪುಗೊಂಡಿದೆ. ತಾವೇ ಸ್ವತಃ ತಮಗೆ ಶ್ರೀ ಅರೋಬಿಂದೋ ಹೆಸರನ್ನು ಕೊಟ್ಟುಕೊಂಡರು. ಆ ಶಬ್ದದಲ್ಲಿ ಮಾಂತ್ರಿಕ ಪರಿಣಾಮ ವಾಸ ಮಾಡುತ್ತದೆಂದು ನಾನು ಹೇಳಬಹುದು.

ಉಚ್ಚಾರ ಮಾಡುವುದಕ್ಕೆ 'ಶ್ರೀ' ಬೇರೆ ಹಲವಾರು ಭಾರತೀಯ ಇಲ್ಲವೆ ಯುರೋಪಿಯನ್ – ಅಮೆರಿಕನ್ ಉಚ್ಚಾರಾಂಶಗಳಿಗಿಂತ (syllables) ಬಹಳ ಕಠಿಣವಾಗಿಲ್ಲ. ಹಲವಾರು ಜನರನ್ನು ಸಮೀಪಿಸುವುದಕ್ಕೆ ಹಾಗೂ ಪರಿವರ್ತನೆಗೆ ಒಳಪಡಿಸುವುದಕ್ಕೆ ಅತ್ಯಂತ ಒಳ್ಳೆಯ ಮಾರ್ಗವೆಂಬ ವಾದವನ್ನು ಮುಂದಿರಿಸಿ ಸಾಮಾನ್ಯ ಯುರೋಪಿಯನ್ ಇಲ್ಲವೆ ಅಮೇರಿಕನ್ ಸ್ತರಕ್ಕೆ ಇಳಿದು ಬರುವುದು ಯಾವಾಗಲೂ ಆರೋಗ್ಯಕರವಲ್ಲ. ಅದು ವ್ಯರ್ಥ ಭ್ರಮೆ ಎಂದು ನನಗನಿಸುತ್ತದೆ; ಅದಕ್ಕಿಂತಲೂ ಹೆಚ್ಚಾಗಿ ಸಾಮಾನ್ಯರಾದವರು ಮೇಲಕ್ಕೆದ್ದು ಬರುವಂತೆ ಮತ್ತು

ಅದರಲ್ಲಿರುವ ಸತ್ಯದೊಂದಿಗೆ ಹೋರಾಡುವಂತೆ ನಿರ್ಬಂಧಕ್ಕೊಳಪಡಿಸುವುದು ಹೆಚ್ಚು ಒಳ್ಳೆಯದು.

ಶ್ರೀಮಾತೆಯವರು ನಿನಗಾಗಿ ಬರೆದ ಈ ಬುದ್ಧಿವಾದವನ್ನು ನೋಡಿದ್ದಾರೆ ಮತ್ತು ಅದಕ್ಕೆ ತಮ್ಮ ಸಂಪೂರ್ಣ ಒಪ್ಪಿಗೆ ನೀಡಿದ್ದಾರೆ.

**(Reminiscences, pp.180–81)** **– ನಲಿನಿಕಾಂತ ಗುಪ್ತ**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 21/6/2014 ಮತ್ತು 22/6/2014 ರಂದು ಮೀರಾಂಬಿಕಾ ಶಿಕ್ಷಣ ಸಂಸ್ಥೆಯ ವತಿಯಿಂದ ಸಂಸ್ಥೆಯ ಶಿಕ್ಷಕ ವೃಂದಕ್ಕೆ "ಶಿಕ್ಷಕರಲ್ಲಿ ನಾಯಕತ್ವ" ವಿಷಯದ ಬಗ್ಗೆ ಕಾರ್ಯಗಾರ ಏರ್ಪಡಿಸಿದ್ದರು. ಕಾರ್ಯಾಗಾರದ ಪ್ರಾಯೋಜಕರಾಗಿ "ಶ್ರೀ ಅರೋಬಿಂದೋ ಫೌಂಡೇಶನ್ ಫಾರ್ ಇನ್ಟೆಗ್ರಲ್ ಮ್ಯಾನೇಜ್ಮೆಂಟ್"ನ (SAFIM) ಸೈಕತ್ ಸೇನ್ ಮತ್ತು ಸಹಾಯಕರು ಆಗಮಿಸಿದರು. ನಾಯಕತ್ವದ ಲಕ್ಷಣಗಳು, ಗುರಿ, ಮೌಲ್ಯಗಳ ಕುರಿತು ಬೆಳಕು ಚೆಲ್ಲಿದರು. ಶಿಕ್ಷಕ ವೃಂದದೊಂದಿಗೆ ಸಂವಾದವನ್ನು ನಡೆಸಲಾಯಿತು. ಶಿಕ್ಷಕರ ಅನಿಸಿಕೆ, ಕೌಶಲ್ಯಗಳ ಅರಿವು ಇವುಗಳ ಬಗ್ಗೆ ಮಹತ್ವ ನೀಡಲಾಗಿತ್ತು. ಎರಡು ದಿನಗಳ ಕಾರ್ಯಾಗಾರವು ಶಿಕ್ಷಕರಲ್ಲಿ ಹೊಸ ಸ್ಫೂರ್ತಿಯನ್ನು ತುಂಬಲು ಯಶಸ್ವಿಯಾಯಿತು. ಕಾರ್ಯಾಗಾರದಲ್ಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಅಜಿತ್ ಸಬ್ನೀಸ್, ಶ್ರೀಮತಿ ಪ್ರತಿಭಾ ಸಬ್ನೀಸ್, ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬ ಸಕ್ರಿಯವಾಗಿ ಭಾಗವಹಿಸಿದರು.

ದಿನಾಂಕ 19/6/2014 ಮತ್ತು 26/6/2014 ರಂದು ಶ್ರೀಯುತರಾದ ಅಕ್ಷರಧಾಮ ಶೇಷಾದ್ರಿ ಎಸ್. ಕೈಪಾ, ಧರ್ಮಾಧಿಕಾರಿ, ಧರ್ಮ ಪ್ರತಿಷ್ಠಾನ, ಬೆಂಗಳೂರು ಇವರಿಂದ "Divine View on Sanatana Dharma in Absolute (Science)" ಎಂಬ ವಿಷಯದ ಬಗ್ಗೆ ಸಾಯಂಕಾಲ 6.00 ರಿಂದ 7.30 ರವರೆಗೆ ಉಪನ್ಯಾಸವನ್ನು ಏರ್ಪಡಿಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಉಪಸ್ಥಿತರಿದ್ದರು.



## SRI AUROBINDO SOCIETY

### Notice for the Annual General Meeting


The Annual General Meeting of the members of Sri Aurobindo Society will be held on Saturday, the 6th September 2014, at 4.00 p.m. at its registered office, **Sri Aurobindo Bhavan, 8, Shakespeare Sarani, Kolkata - 700 071,** to transact the following business:

1. To confirm the minutes of the last Annual General Meeting held on 21st September 2013.
2. To consider and approve the audited Balance Sheet and Income & Expenditure Account of the Society for the year ended 31.03.2014.
3. To consider and adopt the Executive Committee's Annual Report of Activities for the year 2013-2014.
4. To appoint an auditor for the Society for the year 2014-2015.
5. To consider any other matter with the permission of the chair.

Sd/-

**09th June, 2014** (Pradeep Narang)
Puducherry Chairman

**Note :** The members are entitled to appoint proxy. Proxies must be deposited at the Registered Office of the Society, No.8, Shakespeare Sarani, Kolkata-700071, during office hours, in advance but not less than 48 hours before the time of the meeting. The proxy should be a member of the Society. Proxy forms is printed overleaf.



*A  prayer, a master act, a king idea*
*can link man's strength to a*
*transcendent Force.*

- Sri Aurobindo

**RNI No. 22511/1971**
No. of Pages **52 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.